

ಜೂನ್

ಕಲ್ಯಾಣ ಕಿರಣ

ಮಾಸ ಪತ್ರಿಕೆ ಜೂನ್ ೧೯೯೧ ಬಿಡಿ ಸಂಚಿಕೆ ೩ ರೂ.

ಸಂಪುಟ : 20 ಸಂಚಿಕೆ : 1-2 ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಲೇಖನಗಳು ಕಿರಣಗನ್ನಡಿ ಲೇಖಕರು ಪು.ಸಂ

ಮುಖ ಪುಟ : ನಾದಬ್ರಹ್ಮ ನಿಜಗುಣ ಶಿವಯೋಗಿಗಳು.

ಹೊದ್ದಿಕೆಯ 4ನೇ ಪುಟ : ತುಂಬಿ ನಿಂತಿರುವ ಬಸವ ಸಾಗರ.

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ** ದೂರವಾಣಿ : 325335
ಬಸವಮಂಟಪ, 2035, 2ನೇ ಬ್ಲಾಕು, 20ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು-10

ಕಲ್ಯಾಣ ಕಿರಣ

ಸಂಪುಟ : 20 ಸಂಚಿಕೆ : 1-2 ಮೇ-ಜೂನ್, 1991 ಬಸವ ಶಕೆ : 886

ನುಡಿ ನೈವೇದ್ಯ

ಬಸವನ ದರುಶನ ಮಾಡುವ ಬನ್ನಿರಿ
ವಿಶ್ವಧರ್ಮವ ಲೋಕಕ್ಕೆ ನೀಡಿದ ॥ಪ॥

ದೇವನ ಕರುಣೆಯಿಂ ಇಳೆಯೊಳು ಜನಿಸಿ
ದೇವನ ಕೃಪೆಯ ಮಹತಿಯ ತೋರಿ
ದೇವನ ಸೃಷ್ಟಿಯ ಘನತೆಯ ಅರುಹಿ
ದೇವನ ಮಕ್ಕಳೆಂದೆಲ್ಲರ ಭಾವಿಪ ॥೧॥

ಕರ್ತನ ಕುರುಹನು ಕರದಲಿ ಕೊಟ್ಟು
ನಿತ್ಯವು ತಪ್ಪದೆ ಅರ್ಚಿಸಲರುಹಿ
ಕ್ಷುಲ್ಲಕ ಮನುಜರು ಬಿತ್ತಿದ ಭೇದವ
ಖಂಡಿಸಿ, ಜಾತಿಯ ಭ್ರಮೆಯನು ಬಿಡಿಸಿದ ॥೨॥

ಬಸವನೆ ತಂದೆಯು ಬಸವನೆ ತಾಯಿಯು
ಬಸವನೆ ಬಂಧು ಬಳಗವು ಭಾಗ್ಯವು
ಬಸವನೆ ರಕ್ಷಕ ಬಸವನೆ ಶಿಕ್ಷಕ
ಬಸವನೆ ಮೋಕ್ಷ ದಾಯಕ ಎನುತ ॥೩॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಮಹಾಮನೆಯೊಳಗಿಹ ಮಂಟಪದಲ್ಲಿ
ಬಸವನ ನೋಡಿ ಬಸವನ ಹಾಡಿ
ಸಚ್ಚಿದಾನಂದನ ಒಲಿಸೋಣ ಬನ್ನಿ ॥೪॥

—**ಮಾತಾಜಿ**



ಚಮ್ಮಾವುಗೆಯ ಪ್ರಸಂಗ

ಒಂದು ದಿವಸ ಒಬ್ಬ ಲೇಖಕರು ಬಂದರು. ಅವರು ಮುಖ್ಯವಾಗಿ ಕಲಾಭಿಮಾನಿಗಳು. ಮಾತಿನ ಮಧ್ಯೆ ಅಂದರು, 'ನಾನೊಂದು ಬಸವಣ್ಣನವರನ್ನು ಕುರಿತು ನಾಟಕ ಬರೆಯುತ್ತಿರುವೆ. ಅದರಲ್ಲಿ ನಾನು ಯಾರ ಮನಸ್ಸನ್ನು ನೋಯಿಸಲು ಇಷ್ಟ ಪಡುವುದಿಲ್ಲ' ಎಂದರು. "ಅಂದರೆ ಏನು?" ಎಂದು ನಾನು ಕೇಳಿದೆ. "ಚಮ್ಮಾವುಗೆಯ ಪ್ರಸಂಗ ತೆಗೆದುಕೊಂಡರೆ, ಅದು ಬ್ರಾಹ್ಮಣರ ಮನಸ್ಸನ್ನು ನೋಯಿಸುತ್ತದೆ. ಅದನ್ನು ತೆಗೆದುಕೊಳ್ಳುವುದೇ ಇಲ್ಲ." ಎಂದರು. " ಹಾಗಾದರೆ ಕಲ್ಯಾಣ ಕ್ರಾಂತಿಗೆ ಕಾರಣ ವೇನು ? ಎಂದು ಪ್ರತಿಪಾದಿಸುವಿರಿ" ಎಂದೆ. "ಅದು ಪ್ರೇಮ ವಿವಾಹ; ಲಾವಣ್ಯ–ಶೀಲವಂತರ ಮಧ್ಯೆ ಪ್ರೇಮಾಕುಂರವಾಯಿತು ಎಂದು ತೆಗೆದುಕೊಂಡು ಚಮ್ಮಾವುಗೆಯ ಪ್ರಸಂಗವನ್ನು ತಪ್ಪಿಸಿ ಬಿಡುವೆ." ಎಂದು ಹೆಮ್ಮೆಯಿಂದ ಹೇಳಿದರು. ನನಗೆ ಆಶ್ಚರ್ಯ-ಆಘಾತ ಒಮ್ಮೆಗೇ ಆದವು. ಸರಿ, ವಾದಕ್ಕೆ ತೆಗೆದುಕೊಂಡರೂ, ಚಮ್ಮಾವುಗೆಯ ಪ್ರಸಂಗ ತಪ್ಪಿಸಿದರೂ ವರ್ಣಾಂತರ ವಿವಾಹವಾಗಿ ಕಲ್ಯಾಣ ಕ್ರಾಂತಿಯಾದರೆ ಅದೂ ಸಂಪ್ರದಾಯವಾದಿಗಳನ್ನು ನೋಯಿಸದೆ ಇರದಷ್ಟೆ.

ಯಾರೋ ಕೆಲವರು ನೋಯುವರೆಂದು, ಅಥವಾ ಮುಜುಗರ ಪಡುವರೆಂದು ಒಂದು ಮಹತ್ತರವಾದ ಐತಿಹಾಸಿಕ ಸತ್ಯವನ್ನು ಮುಚ್ಚುವ ಈ ಲೇಖಕರ ದುಸ್ಸಾಹಸ ಕಂಡು ನಾನು ಸೋಜಿಗದ ಕಡಲಲ್ಲಿ ತೇಲಿದೆ. ಇವರಷ್ಟೇ ಅಲ್ಲ, ಹಿಂದೆಯೂ ಕೆಲವು ಲೇಖಕರು ಈ ರೀತಿ ಯತ್ನಿಸಿದ್ದಾರೆ.

ಚಮ್ಮಾವುಗೆಯ ಪ್ರಸಂಗ ಲಿಂಗವಂತ ಧರ್ಮದ ಇತಿಹಾಸದಲ್ಲೇ ಅತ್ಯಂತ ರೋಮಾಂಚಕಾರಿ ಸನ್ನಿವೇಶ ! ಬಹುಶಃ ಏಸುಕ್ರಿಸ್ತನ ಶಿಲುಬೆ ಪ್ರಕರಣಕ್ಕಿಂತಲೂ

ರೋಚಕವಾದುದು. ಹರಳಯ್ಯ– ಕಲ್ಯಾಣಮ್ಮರು ಮೈಚರ್ಮತೆಗೆದು ಚಪ್ಪಲಿ ಮಾಡಿಧುದು, ಇದರ ನಿಮಿತ್ತ ಬೀಗತನ, ಬಸವಣ್ಣನವರ ಗಡೀಪಾರು, ಶರಣರ ಅಮಾನುಷ ವಧೆ, ಸಾಹಿತ್ಯ ರಕ್ಷಣೆಗಾಗಿ ಶರಣರ ಬಲಿದಾನ— ಇವು ಮಾತ್ರವೇ ಹತ ಚೇತನರು, ನಿರಭಿಮಾನಿಗಳು, ನಡೆವ ಹೆಣ— ನುಡಿವ ಹೆಣದಂತಿರುವ ಲಿಂಗವಂತ ಧರ್ಮಾನುಯಾಯಿಗಳಲ್ಲಿ ಕೆಲವರನ್ನಾದರೂ ಅಭಿಮಾನಿಗಳನ್ನಾಗಿ ಮಾಡಬಲ್ಲವು, ಹೃದಯವನ್ನು ಕಲಕಬಲ್ಲವು, ನೆನಪಿಸಿಕೊಂಡಾಗಲೆಲ್ಲ ಕಣ್ಣುಗಳನ್ನು ಸಜಲವಾಗಿ ಮಾಡಬಲ್ಲಂಥವು. ಅಂದಾಗ ಯಾರೋ ಕೆಲವರನ್ನು ಸಮಾಧಾನ ಪಡಿಸಲು ನಮ್ಮ ಲೇಖಕರು ಮಾಡುವ ಸಾಹಸ ನೋಡಿರಿ.

'ಬೆಂಕಿಯಿಲ್ಲದೆ ಹೊಗೆಯಿಲ್ಲ' ಎಂಬಂತೆ, ಚಮ್ಮಾವುಗೆ ಪ್ರಸಂಗ ಕೇವಲ ಕಾಲ್ಪನಿಕವಾಗಿ ಬೆಳೆದು ಬರಲು ಸಾಧ್ಯವೆ, ಅದು ನಿಜಕ್ಕೂ ನಡೆದಿರದಿದ್ದರೆ? ಜನಪದ ಸಾಹಿತ್ಯದಲ್ಲಂತೂ ಇದು ಬಗೆಬಗೆಯಾಗಿ ಬಣ್ಣಿಸಲ್ಪಟ್ಟಿದೆ. ಕಾಲಜ್ಞಾನ ವಚನಗಳಲ್ಲಿ ಪ್ರಸ್ತಾಪವಾಗಿದೆ. ಬಸವಣ್ಣನವರ ವಚನಗಳಲ್ಲಿ ಬಂದಾಗ ಈ ವಚನ ಎಂಥಾ ಜೀವಂತ ಸಾಕ್ಷಿಯಾಗಿ ನಿಲ್ಲುತ್ತದೆ.

> ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿಸಮಬಾರದು
> ಸರಿಯಿಲ್ಲ ನೋಡಯ್ಯಾ!
> ಕೂಡಲ ಸಂಗಮದೇವಾ, ನಿಮ್ಮ ಶರಣರ ಚಮ್ಮಾವುಗೆಗೆ! (ಬ.ಷ.ವ-೬೦೩)

ಈ ವಚನದ ಒಂದೊಂದು ಪದವೂ ತೂಗಿ ತೂಗಿ, ಭಾವ ತುಂಬಿ ಹೇಳಲ್ಪಟ್ಟಿದೆ.

ಮೇ ತಿಂಗಳಿನ 25 ರಂದು ಈ ಪವಿತ್ರ ಚಮ್ಮಾವುಗೆಗಳನ್ನು ನೋಡುವ ಸದವಕಾಶ ಬಂದಿತು. ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿಯಲ್ಲಿ ಅವಿವೆ ಎಂಬುದನ್ನು ಕೇಳಿದ್ದೆವು. ಬಹಳ ವರ್ಷಗಳಿಂದಲೂ ಹೋಗಬೇಕೆಂಬ ಕಾತುರವಿತ್ತು. ಬಿಜನಳ್ಳಿ ಒಂದು ಕುಗ್ರಾಮ. ಅದಕ್ಕೆ ರಸ್ತೆ ಸಂಪರ್ಕವಿಲ್ಲ, ಮಳಖೇಡದವರೆಗೆ ಟಾರ್ ರಸ್ತೆ, ನಂತರ ಎರೆಯ ಹೊಲದಲ್ಲಿ ವಾಹನಗಳು ಸಾಗಬೇಕು. ಹೀಗಾಗಿ ಮಳೆಗಾಲದಲ್ಲಿ ಹೋಗಲು ಸಾಧ್ಯವಾಗದು. ನಾನು ಹೋದಾಗ ಜನರು ಭಕ್ತಿಯಿಂದ, ವಾದ್ಯ ಸಹಿತವಾಗಿ ಬರಮಾಡಿಕೊಂಡರು. ಮೊದಲೇ ತಿಳಿದುದ್ದರಿಂದ ಸುತ್ತಲಿನ ಗ್ರಾಮಗಳವರೂ ಸೇರಿ, ಭವ್ಯ ಸ್ವಾಗತ ನೀಡಿದರು.

ಒಂದು ಚಿಕ್ಕ ಗುಡಿ ಕಟ್ಟಿ, ಗಾಜಿನ ಆವರಣವುಳ್ಳ ಪೆಟ್ಟಿಗೆಯಲ್ಲಿ ಇಟ್ಟ ಆ ಜೋಡಿ ಚಮ್ಮಾವುಗೆಗಳನ್ನು ನೋಡುತ್ತಲೇ, ಹೃದಯವು ಕಲಕಿದಂತಾಗಿ ಕಲ್ಯಾಣ ಕ್ರಾಂತಿಯ ಕಥೆ ತಲೆಯಲ್ಲಿ ಸುಳಿಯಿತು. ಕೇವಲ ಕಾಲ್ಪನಿಕ ಐತಿಹ್ಯವಾಗಿದ್ದರೆ, ಆ ವಸ್ತುಗಳು ಹೀಗೆ ಸಾಗಿಬರಲಿಕ್ಕೆ ಆಗುತ್ತಿತ್ತೆ ? ಊರಿನ ಗೌಡರನ್ನು, ಹಿರಿಯರನ್ನು ಕೇಳಿದೆ. "ಇವು ಈ ಊರಿಗೆ ಹೇಗೆ ಬಂದವು? ಈ ಮನೆಯವರು ಹರಳಯ್ಯನ ವಂಶಸ್ಥರೋ?" ಎಂದು.

ಅವರು ಹೇಳಿದ್ದು ಇಷ್ಟು. ಈ ಗ್ರಾಮದಿಂದ ಇಬ್ಬರು ಕಲ್ಯಾಣಕ್ಕೆ ಹೋಗಿ, ಗುರು ಬಸವಣ್ಣನವರ ಅನುಭವ-ಮಹಾಮನೆಗಳಲ್ಲಿ ಶರಣರಾಗಿ ವಾಸ್ತವ್ಯ ಮಾಡಿದ್ದರು. ಚಮ್ಮಾವುಗೆಯ ಪ್ರಸಂಗ, ಹರಳಯ್ಯ–ಮಧುವರಸರ ಬೀಗತನ ಎಲ್ಲ ಆಯಿತು. ಬಸವಣ್ಣನವರ ಗಡೀಪಾರಿನ ನಂತರ ಶರಣರವಧೆಯಾಗಿ, ಎಲ್ಲೆಡೆ ಉದ್ವಿಗ್ನ ಪರಿಸ್ಥಿತಿಯುಂಟಾಯಿತು. ಕಲ್ಯಾಣ ನಗರದಲ್ಲಿ ಬೀದಿಕಾಳಗ, ಶರಣರ ಮೇಲೆ ಹಲ್ಲೆ ನಡೆಯಿತು. ಅಲ್ಲಿಂದ ಶರಣರು ಚದುರ ತೊಡಗಿದರು. ಆಗ ಈ ಗ್ರಾಮದಿಂದ ಹೋಗಿದ್ದ ಇಬ್ಬರೂ ಕಲ್ಯಾಣದಿಂದ ಹೊರಟು ತಮ್ಮ ಊರಿಗೆ ಬರಲು ಸಿದ್ಧರಾದರು ; ಹಾಗೆ ಬರುವಾಗ ಲೂಟಿಗೊಳಗಾದ ಅನಾಥವಾಗಿದ್ದ ಹರಳಯ್ಯನವರ ಮನೆಯಲ್ಲಿ ಈ ಅಮೂಲ್ಯ ವಸ್ತುಗಳು ಕಂಡವು. ಇದರ ಮಹತ್ವವನ್ನು ಮನಗಂಡಿದ್ದ ಆ ಶರಣರು, ಅವನ್ನು ತಮ್ಮ ಗೊಂಗಡಿಯಲ್ಲಿ ಮುಚ್ಚಿಟ್ಟುಕೊಂಡು, ಬಹಳ ಕಷ್ಟಪಟ್ಟು ಪ್ರಯಾಣಮಾಡಿ ತಮ್ಮೂರಿಗೆ ತಂದರಂತೆ. "ಇವು ಹರಳಯ್ಯನವರು ಅಪ್ಪ ಬಸವಣ್ಣನವರಿಗೆ ಅರ್ಪಿಸಿದ ಚಮ್ಮಾವುಗೆ" ಎಂದು ಭಯಭಕ್ತಿಯಿಂದ ಕಾಪಾಡಿಕೊಂಡು ಬಂದರಂತೆ. ಈ ನಂಬಿಗೆ ಅಂದಿನಿಂದ ಇಂದಿನವರೆಗೂ ಸಾಗಿ ಬಂದಿದೆ.

(ಕೆಲವು ದಶಕಗಳ ಹಿಂದೆ, ಒಬ್ಬ ಸ್ವಾಮಿಗಳು ಉಡಾಫೆ ಮಾತನಾಡಿ ಎಲ್ಲಿಯಾದರೂ ಉಂಟೆ ? ಎಂದು ಅಂದು ಹೊರಟರಂತೆ. ಆ ಊರನ್ನು ಸುತ್ತುವರಿದ ಹಳ್ಳವನ್ನು ದಾಟುವುದರೊಳಗೆ ಕಣ್ಣು ಕಾಣದಂತೆ ಆದವಂತೆ. ಬಂದು ಕ್ಷಮೆ ಕೇಳಿ, ಪೂಜಿಸಿದರಂತೆ. ಎಂದೂ ಆ ಊರ ಜನ ಹೇಳಿದರು.) ನಮ್ಮ ಕೆಲವರು ಅತಿ ಬುದ್ಧಿವಂತರು ಇದು ಮನುಷ್ಯನ ಚರ್ಮವೋ ಅಲ್ಲವೋ ಎಂದು ಪರೀಕ್ಷಿಸಲು ಕಿತ್ತು ಕಿತ್ತು ನೋಡಿ, ಅವನ್ನು ಹಾಳು ಮಾಡಿದ್ದಾರೆ.

ಮೇಲು ಭಾಗದಲ್ಲಿ ಅದೆಷ್ಟು ಶ್ರಮಪಟ್ಟು ಜರಿಯ ಕುಸುರಿ ಕೆಲಸ ಮಾಡಿದ್ದರೋ ಇನ್ನೂ ಕಿತ್ತಲ್ಪಟ್ಟ ಚೂರುಗಳ ಮೇಲೆ ರೇಷ್ಮೆ ಎಳೆ, ಜರಿ ಎಳೆಯ ಹೂವುಗಳು ಕಾಣುತ್ತವೆ. ಕಿತ್ತು ನೋಡುವ ಬುದ್ಧಿವಂತರ ಪ್ರಯತ್ನ, ಮೂಢಭಕ್ತರು ನೀರು ಚಿಮುಕಿಸಿ ಮಾಡುವ ಪೂಜೆ ಆ ಚಮ್ಮಾವುಗೆಗಳನ್ನು ಕೊಳೆಯಿಸಿ ಶಿಥಿಲಗೊಳಿಸಿವೆ. ಆ ಚಮ್ಮಾವುಗೆಗಳನ್ನು ತಿರುಗಿಸಿ ಕೆಳಗಿನ ಭಾಗ ನೋಡಿದಾಗ ನಾವು ಚಕಿತರಾಗುತ್ತೇವೆ. ನೀರು ಚಿಮುಕಿಸಿಲ್ಲದ ಕಾರಣ ಫಳಫಳ ಹೊಳೆಯುತ್ತವೆ. ಅಂದು ನೀಡಿದ ಹೊಳಪು(ಪಾಲಿಷ್) ಇಂದಿಗೂ ಕಾಣುತ್ತದೆ. ಹಾವಿನ ಮೈಮೇಲೆ ಬರುವ ಚಿತ್ರದಂತೆ ಕಲಾತ್ಮಕವಾಗಿಯೂ ಹೊಳಪಿನಿಂದಲೂ ಕೂಡಿದ ಭಾಗವಿದಾಗಿದೆ. ಇಡೀ ಚಮ್ಮಾವುಗೆಗಳನ್ನೇ ಮೈಚರ್ಮದಿಂದ ಮಾಡಿಲ್ಲ, ಮಾಡಲು ಸಾಧ್ಯವೂ ಇಲ್ಲ. ಮನುಷ್ಯನ ಮೈಚರ್ಮ ಮೃದು. ಪ್ರಾಣಿಗಳ ಚರ್ಮದಿಂದಲೇ ಮಾಡಿ, ಮೇಲೆ ಜರಿ ಮತ್ತು ರೇಷ್ಮೆದಾರದಲ್ಲಿ ಹೂವುಗಳನ್ನು ಬಿಡಿಸಿ, ಚಮ್ಮಾವುಗೆಯ ತಳಭಾಗದಲ್ಲಿ ಅಂದರೆ ಹಿಮ್ಮಡಿಯ ಭಾಗದಲ್ಲಿ ಬಾದಾಮಿ ಆಕಾರದಲ್ಲಿ ಒಂದು ಕುಳಿಮಾಡಿ ಅದರೊಳಗೆ ಮೈಚರ್ಮ ಅಂಟಿಸಲಾಗಿದೆ. ಹೀಗೆ ಎರಡೂ ಚಮ್ಮಾವುಗೆಗಳಲ್ಲಿ ಇವೆ. ಇವು ಹರಳಯ್ಯನವರು ಬಸವಣ್ಣನವರಿಗೆ ಅರ್ಪಿಸಿದ ಚಮ್ಮಾವುಗೆ ಎಂಬುದು, ಶಿವಶರಣಪ್ಪ (ಈಗಿನ ಪೂಜಾರಿ) ನವರ ಮನೆತನದಲ್ಲಿ ತಲತಲಾಂತರದಿಂದ ಬಂದಿರುವ ನಂಬಿಕೆ. ಚಪ್ಪಲಿಯನ್ನೇನು ಪವಿತ್ರ ವಸ್ತುಗಳೆಂದು ಪರಿಗಣಿಸದಿರುವ ಮಡಿವಂತ ಹಿಂದುಗಳಲ್ಲಿ, ಈ ಚಮ್ಮಾವುಗೆಗಳು ಪೂಜೆಗೊಳ್ಳುತ್ತ ಬಂದಿರುವುದೇ ಅಚ್ಚರಿಯ ಸಂಗತಿ. 'ಇವುಗಳಿಂದಲೇ ಅನಾಹುತವಾದುದು' ಎಂದು ಯಾರಾದರೂ ಅಪಕ್ವಮತಿಗಳು ಬೀಸಾಡಿದ್ದರೂ ಬೀಸಾಡಬಹುದಿತ್ತು. ಸದ್ಯ ಯಾವುದೋ ಭಕ್ತಿಯಿಂದ ಕಾಪಾಡಿಕೊಂಡು ಬಂದುದಕ್ಕೆ ನಾವು ಆ 'ಅಜ್ಞಾತ' ಶರಣರಿಗೆ ಋಣಿಯಾಗಿರಬೇಕು. ಹನ್ನೆರಡನೆಯ ಶತಮಾನದ ಬಿಜನಳ್ಳಿಯ ಆ ಶರಣರು ತಮ್ಮ ಗೊಂಗಡಿಯಲ್ಲಿ ಈ ಸ್ಮಾರಕಗಳನ್ನು ಮುಚ್ಚಿಟ್ಟುಕೊಂಡು ತಂದುದು ನಿಜಕ್ಕೂ ಚಿರಸ್ಮರಣೀಯ.

ತಿಳಿದು, ಬಸವ ಧರ್ಮವನ್ನು ಆಶ್ರಯಿಸಿದವರಿಗೆ, ವಿಚಾರ ಶೀಲರಿಗೆ ಈ ಚಮ್ಮಾವುಗೆಗಳಾಗಲೀ, ಕಲ್ಯಾಣ ಕ್ರಾಂತಿಯಾಗಲಿ ಅಭಿಮಾನದ ಸಂಗತಿಗಳು. ಜಗತ್ತಿನಲ್ಲಿ ಸಮತಾವಾದದ ಕಹಳೆಯನ್ನು ಮೊಟ್ಟ ಮೊದಲಿಗೆ ಊದಿದ ಧರ್ಮವಿದು ಎಂಬುದಕ್ಕೆ ಸಾಕ್ಷಿ ಈ ಚಮ್ಮಾವುಗೆಗಳು. ಸಂಪ್ರದಾಯಶೀಲ ಮಡಿವಂತರಿಗೆ, ಜಾತಿವಾದಿಗಳಿಗೆ ಇವು ಮುಜುಗರ ಉಂಟುಮಾಡುವಂಥವು. ಹಾಗೆಂದು ನಾವು ಮುಚ್ಚಿಡಬೇಕಾದ ಪ್ರಮೇಯವೇನಿಲ್ಲ, ನಾನು ಹಿಂದೊಮ್ಮೆ ಕಲ್ಯಾಣ ಕಿರಣದಲ್ಲಿ ಬರೆದಂತೆ ಒಬ್ಬ ಲಿಂಗವಂತರ ಮನೆಯಲ್ಲಿ ರೇಷ್ಮೆ ಬಟ್ಟೆಯಲ್ಲಿ ಸುತ್ತಿಟ್ಟ ಒಂದು ಬೆಳ್ಳಿಯ ಪೆಟ್ಟಿಗೆ, ಅದರೊಳಗೆ ಇಟ್ಟ ಪುಟ್ಟ ಚಮ್ಮಾವುಗೆಗೆ ವಾರ್ಷಿಕವಾಗಿ ನಡೆಯುತ್ತಿದ್ದ ಪೂಜೆ–ಆರಾಧನೆಗಳು ಸಹ ಹರಳಯ್ಯ ಅರ್ಪಿಸಿದ ಚಮ್ಮಾವುಗೆಯ ಕುರುಹಲ್ಲದೆ ಬೇರಲ್ಲ.

ನಾನು ಆರಂಭದಲ್ಲಿಯೇ ತಿಳಿಸಿದ ಬರಹಗಾರರು, ಹರಳಯ್ಯ-ಮಧುವರಸರ ಸಂಟಸ್ಥಿಕೆಗೆ ಚಮ್ಮಾವುಗೆ ಪ್ರಸಂಗವನ್ನು ಆಧಾರವಾಗಿ ಇಟ್ಟುಕೊಳ್ಳದೆ, ಲಾವಣ್ಯ–ಶೀಲವಂತರ ಪ್ರೇಮವನ್ನು ಇಟ್ಟುಕೊಳ್ಳಲು ಬಯಸಿರುವುದಾಗಿ ತಿಳಿಸಿದರೆಂದು ನಾನು ಹೇಳಿರುವೆ. ಈ ಬಗ್ಗೆ ತುಸು ವಿಶ್ಲೇಷಿಸೋಣ. ಪ್ರೇಮಾಂಕುರದಿಂದ ಆ ಮದುವೆ ಆಗಿದ್ದರೆ, ಆಗ ಅದು ತಾತ್ತ್ವಿಕ ಮಹತ್ವವನ್ನು ಕಳೆದುಕೊಳ್ಳುವುದು. ಚಮ್ಮಾವುಗೆಯನ್ನು ಮಧುವರಸ ತುಳಿಯುವುದು, ಪರಿತಾಪ, ಪಶ್ಚಾತ್ತಾಪ, ಪರಿವರ್ತನೆ, ದೀಕ್ಷೆ, ಮಗಳನ್ನು ವಿವಾಹ ಮಾಡಿಕೊಡಲು ಮುಂದಾಗುವುದು ಒಂದೊಂದೂ ಅದ್ಭುತ ಘಟನೆಗಳೇ. ಕ್ರೈಸ್ತ ಧರ್ಮದಲ್ಲಿ ಬರುವ ಸಾಲ್, ಹುಟ್ಟು ಯಹೂದ್ಯನಾಗಿ ಪ್ರಾರಂಭದಲ್ಲಿ ಅಪಾರ ಕ್ರಿಸ್ತ ದ್ವೇಷಿಯಾಗಿದ್ದು, ನಂತರ ಆ ಧರ್ಮಕ್ಕೆ ಪರಿವರ್ತನೆಯಾಗಿ, ಸೆಂಟ್ ಪಾಲನಾಗಿ ಧರ್ಮಪ್ರಚಾರದಲ್ಲಿ ಗಣನೀಯ ಪಾತ್ರವಹಿಸಿದನು. ಮಧುವರಸನ ಪರಿವರ್ತನೆ ಇಷ್ಟೇ ಏಕೆ, ಇದಕ್ಕೂ ಮಿಗಿಲಾದುದು. ಸೆಂಟ್ ಪಾಲ್ ಧರ್ಮಪ್ರಚಾರಕನಾಗಿ ಕೀರ್ತಿಶಾಲಿಯಾದ. ಮಧುವರಸನೋ ಬಹುದೊಡ್ಡ ಬಲಿದಾನಕ್ಕೆ– ಪ್ರಾಣಾರ್ಪಣೆಗೇ ಸಿದ್ಧನಾಗಬೇಕಾಯಿತು.

.1 ಪರಿವರ್ತನೆಗೆ ಮೊದಲು ಮಧುವರಸ ಬಸವ ಧರ್ಮದ ಕಡುದ್ವೇಷಿ. ತಾನು ಅನುಭವ ಮಂಟಪಕ್ಕೆ ಹೋದವನಲ್ಲ : ಅಂಥವರು ಮಕ್ಕಳನ್ನು ಎಂದೂ ಕಳಿಸರು, ಎಲ್ಲಿ ಮಕ್ಕಳು ಹೊಸ ವಿಚಾರಗಳ ಪ್ರಭಾವಕ್ಕೆ ಈಡಾಗುವರೋ ಎಂಬ ಭಯವಿರುವುದವರಿಗೆ. ತಾಯಿತಂದೆಯರ ಮಾತುಮೀರಿ ಹೋಗುವ ಧೈರ್ಯವೂ ಹೆಣ್ಣುಮಕ್ಕಳಿಗಿರದು. ಅಂದಾಗ ಆ ಹುಡುಗಿ ಶೀಲವಂತನನ್ನು ಸಂಧಿಸಲು ಎಂತು ಸಾಧ್ಯ? ಕೆರೆ-ಭಾವಿ ಅಂಥ ಸಾರ್ವಜನಿಕ ಜಾಗಗಳಿಗೆ ಆ ಅಸ್ಪೃಶ್ಯರ ಹುಡುಗ ಬರುವುದುಂಟೆ? ಇನ್ನು ಈ ಹುಡುಗಿ ಹೊಲಗೇರಿಗೆ ಹೋಗುವುದುಂಟೆ? ಭೇಟಿಯಾದರೆ ಅನುಭವ ಮಂಟಪದಲ್ಲಿ ಸಾಧ್ಯ. ಬಹುಶಃ ಪರಿವರ್ತನೆಗೆ ಮೊದಲು ಲಾವಣ್ಯಳು ಶೀಲವಂತನನ್ನು ಸಂಧಿಸಿರಲು ಸಾಧ್ಯವೇ ಇಲ್ಲ. ಆದ್ದರಿಂದ ಅದು ಪ್ರೇಮವಿವಾಹವಾಗಲು ಸಾಧ್ಯವಿಲ್ಲ.

2. ಪ್ರೇಮ ವಿವಾಹಗಳಲ್ಲಿ ಸಮಷ್ಟಿ-ಉದ್ದೇಶಿತ ಧ್ಯೇಯಕ್ಕಿಂತಲೂ ಕಾಮ, ಶಾರೀರಿಕ ಆಕರ್ಷಣೆ, ಮುಂತಾದ ದೌರ್ಬಲ್ಯ ಮಿಶ್ರಿತ ಕಾರಣಗಳೇ ಜಾಸ್ತಿ. ಎಲ್ಲೋ ಅಪರೂಪಕ್ಕೆ ಸಮಾನ ವಿಚಾರಧಾರೆಯನ್ನು ಹೊಂದಿ, ಉದಾತ್ತ ಧ್ಯೇಯಕ್ಕೆ ಎಂದು ಕೆಲವರು ಒಂದುಗೂಡುತ್ತಾರೆ ಅಷ್ಟೆ.

ಹರಳಯ್ಯ-ಮಧುವರಸರಲ್ಲಿ ತಾತ್ತ್ವಿಕ ಹೊಂದಾಣಿಕೆ ಆಗಿರದಿದ್ದರೆ, ಕೇವಲ ಹುಡುಗ-ಹುಡುಗಿಯರ ಪ್ರೇಮವಷ್ಟೆ ಮುಖ್ಯವಾಗಿದ್ದರೆ, ಆಗ ಅವರು ವಿವಾಹದಂತಹ ದಿಟ್ಟ ಹೆಜ್ಜೆ ಇಡದೆ ಉಭಯತರನ್ನು ಸಮಾಜದಿಂದ ಬಹಿಷ್ಕರಿಸಿ, ಕೈತೊಳೆದುಕೊಳ್ಳುತ್ತಿದ್ದರು. ಆಗ ಕಲ್ಯಾಣಕ್ರಾಂತಿ ಆಗುತ್ತಲೇ ಇರಲಿಲ್ಲ. ಏಕೆಂದರೆ, ಇದು ಧರ್ಮಸಮ್ಮತವಾಗಿ ಹಿರಿಯರು ನಿಂತು ಮಾಡಿದ ವಿವಾಹ, ಇದಕ್ಕೆ ಕ್ರಾಂತಿಕಾರಿ ವಿಚಾರಶೀಲ ಬಸವಣ್ಣನವರು ಪ್ರೇರಕರಾದರು ಎಂಬುದೇ ಮತಾಂಧರ ಕೋಪಕ್ಕೆ ಕಾರಣವಾಯಿತು. ಅಂತರ್ವರ್ಣೀಯರ, ಅಂತರ್ಜಾತೀಯ ಕೂಡಿಕೆಗಳು ಎಂದಿನಿಂದಲೂ ಮನುಷ್ಯ ಸಮಾಜ ಹುಟ್ಟಿದಂದಿನಿಂದಲೂ ಆಗುತ್ತ ಬಂದಿವೆ. ಆಗೆಲ್ಲ ಮಡಿವಂತರು ಅಂಥ ಜೋಡಿಗಳನ್ನು ಸಮಾಜದಿಂದ ಬಹಿಷ್ಕರಿಸಿ, ಊರಹೊರಗಿಟ್ಟು, ಕಾಡಿಗೆ ಅಟ್ಟಿ ಕೈತೊಳೆದುಕೊಂಡುದು ಉಂಟು.

ಹರಳಯ್ಯ-ಮಧುವರಸರ ನಂಟಸ್ಥಿಕೆ ತಾತ್ತ್ವಿಕ ಹಿನ್ನೆಲೆಯಲ್ಲೇ ಆರಂಭವಾಗಿದೆ. ಬಸವಣ್ಣನವರ ಬಗ್ಗೆ, ಅವರ ವಿಚಾರಧಾರೆಯ ಬಗ್ಗೆ, ಎಲ್ಲ ಜಾತಿ-ವೃತ್ತಿಗಳಿಂದ ಬಂದವರು ದೀಕ್ಷಾವಂತರಾದ ಬಗ್ಗೆ ಮಧುವರಸರಲ್ಲಿ ಅಸಹನೆ, ಕೋಪ ತಿರಸ್ಕಾರ ದ್ವೇಷ ತುಂಬಿ ತುಳುಕುವಾಗಲೇ ಅವನು ಕೋಪ-ತಿರಸ್ಕಾರಗಳಿಂದ ಚಮ್ಮಾವುಗೆಗಳನ್ನು ಮೆಟ್ಟುವನು ; ಶಾರೀರಿಕ-ಮಾನಸಿಕ ಹಿಂಸೆ ಅನುಭವಿಸುವನು. ಹರಳಯ್ಯನ ಮನೆಯ ನೀರು ಮೀಯುತ್ತಲೇ ತಾಪವು ಆರಿ, ಆವರೆಗೆ ಇದ್ದ ಕೋಪ, ಅಸಹನೆ, ದ್ವೇಷ, ತಿರಸ್ಕಾರ ಅಳಿದು, ಆ ಸ್ಥಳವನ್ನು ಪಶ್ಚಾತ್ತಾಪ, ಅಭಿಮಾನ, ಆಶ್ಚರ್ಯ ತುಂಬಿಕೊಳ್ಳುತ್ತವೆ. ಆಗ ಅವನ ಮನ-ಬುದ್ಧಿಗಳ ಬಾಗಿಲು ತೆರೆದು

ಮುಕ್ತಚಿಂತನೆ ಮಾಡುತ್ತಾನೆ. ಶರಣ ಹರಳಯ್ಯನ ಔನ್ನತ್ಯ, ಬಸವಗುರುವಿನ ಉದಾತ್ತ ಚಿಂತನೆ–ಕಳಕಳಿ ಅರ್ಥಮಾಡಿಕೊಳ್ಳುತ್ತಾನೆ. ಆ ಉತ್ಕಟ ಅಭಿಮಾನದಿಂದಾಗಿಯೇ ನಂಟಸ್ಥಿಕೆ ಮಾಡಬಯಸುತ್ತಾನೆ; ಎಂಥಾ ತ್ಯಾಗ-ಬಲಿದಾನಕ್ಕೂ ಸಿದ್ಧನಾಗುತ್ತಾನೆ. ಈ ವಿವಾಹ ಮುಂದಾಲೋಚನೆ ಇಲ್ಲದೆ ಮಾಡಿದುದಲ್ಲ. ಬರುವ ವಿಪತ್ತುಗಳನ್ನು ಹರಳಯ್ಯ-ಮಧುವರಸರು ವೈಯಕ್ತಿಕವಾಗಿ, ಉಳಿದೆಲ್ಲ ಶರಣರು ಸಾಮೂಹಿಕವಾಗಿ ಎದುರಿಸಲು ಸಿದ್ಧರಾಗಿಯೇ ಸಮಾನತೆಯ ಧ್ವಜ ಹಾರಿಸಿದರು, ಉದಾತ್ತ ಚಿಂತನೆಯ ಕಹಳೆಯನ್ನು ಊದಿದರು.

ಇಂಥ ಒಂದು ಅತ್ಯಮೂಲ್ಯ ಪ್ರಸಂಗವನ್ನು ಮುಚ್ಚಿಡುವುದು, ಅಥವಾ ಮರೆಮಾಡಲೆತ್ನಿಸುವುದು ಬಸವ ತತ್ತ್ವಕ್ಕೆ, ಶರಣರ ಕ್ರಾಂತಿಗೆ ಮಾಡುವ ಭಯಂಕರ ಅಪಚಾರ, ಅಕ್ಷಮ್ಯ ಅಪರಾಧ. ಇದು ಖಂಡಿತಾ ಸಲ್ಲದು.

—ಜಗದ್ಗುರು ಮಾತೆ ಮಹಾದೇವಿ

ಚಿಂತೆ ಏತಕ್ಕೆ ?

ಚಿಂತೆ ಏತಕೆ ಮನವೆ ಭ್ರಾಂತಿ ಏತಕೆ ?
ಬಸವ ಧರ್ಮ ದೊರೆತ ಬಳಿಕ ಚಿಂತೆ ಏತಕೆ ?
ಅಂಗೈಯಲ್ಲಿ ಲಿಂಗವಿರಲು ಚಿಂತೆ ಏತಕೆ ? ||ಪಲ್ಲವಿ||
ಬಸವಣ್ಣನಂಥ ಗುರು ಇರಲು ಭ್ರಾಂತಿ ಏತಕೆ ?
ಅರಿವು ಕೊಟ್ಟ ಗುರುವು ಇರಲು ಚಿಂತೆ ಏತಕೆ ?
ಶರಣ ಸಂಗ ನಿನಗೆ ಇರಲು ಭ್ರಾಂತಿ ಏತಕೆ ? ||೧||
ಮಾಯಾ ತಿಮಿರ ಅಳಿದ ನಿನಗೆ ಚಿಂತೆ ಏತಕೆ ?
ಜಗದ ಜಂಜಡ ಹರಿದ ಬಳಿಕ ಭ್ರಾಂತಿ ಏತಕೆ ? ||೨||
ಮರೆಹ ಸುಟ್ಟ ಭಸಿತವಿರಲು ಚಿಂತೆ ಏತಕೆ ?
ಮನಸ್ಸಿನಲ್ಲಿ ಮಂತ್ರವಿರಲು ಭ್ರಾಂತಿ ಏತಕೆ ? ||೩||
ನಾನು ಎಂಬುದ ಅಳಿದ ಬಳಿಕ ಚಿಂತೆ ಏತಕೆ ?
ಕರ್ತಗೊಲಿದು ಶರಣಾದ ಬಳಿಕ ಭ್ರಾಂತಿ ಏತಕೆ ? ||೪||
ಜ್ಞಾನ ದೀಪ್ತಿ ನಿನ್ನೊಳಿರಲು ಚಿಂತೆ ಏತಕೆ ?
ಶರಣ ಪಥದಿ ನಡೆಯುತಿರಲು ಭ್ರಾಂತಿ ಏತಕೆ ? ||೫||

—ಶರಣೆ. ಶಾರದಾ ಬಸವರಾಜ್
ಶ್ರೀ ಬಸವೇಶ್ವರ ವೀಡಿಯೋ, ಭದ್ರಾವತಿ.



ಬಿಜನಳ್ಳಿ ಗ್ರಾಮದಲ್ಲಿರುವ— ಶರಣ. ಹರಳಯ್ಯನವರು ಮಾಡಿದ ಚಮ್ಮಾವುಗೆಗಳು.

ಜನಪದದಲ್ಲಿ ಚಮ್ಮಾವುಗೆಗಳು

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚರ್ಮ
ಹರನೆಂದು ಮಡದಿಯೆಡತೊಡೆಯ । ತಾ ಕೊಯ್ದು
ಭರದಿ ಹದಮಾಡಿ ಒಣಗಿಸಿದ ॥ ॥೬॥
ಮಿಸುಣಿಯದ ಜರಹಚ್ಚಿ ಹೊಸ ಮುತ್ತು ಪೋಣಿಸಿದ
ಕುಸುರ್ಚ್ಚಿಣದ ರನ್ನ ಮಾಣಿಕದ । ಜೋಡುಗಳು
ಮಸಗಿದವು ಚಂದ್ರರವಿಯಂತೆ ॥ ॥೭॥

-ಕನ್ನಡ ಜಾನಪದ ಗೀತಗಳು. ಪು ೨೩೭

ಅರವತ್ತು ವರ್ಷ ಪೂರೈಸಲಿರುವ
ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

—※ ಅವರಿಗೆ ಗೌರವಾರ್ಪಣ ಕಾರ್ಯಕ್ರಮ ※—



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಧರ್ಮಕ್ರಾಂತಿಯ ಧೀರಯೋಗಿ, ಪ್ರವಚನ ಪಿತಾಮಹ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು

ಚಲಿಸುವ ಜ್ಞಾನ ದೇಗುಲವಾಗಿ ಅಸಂಖ್ಯಾತ ಚೇತನಗಳಿಗೆ ಅರಿವಿನ ಬೆಳಕನ್ನು ಕೊಟ್ಟು, ಹರಿವ ಜ್ಞಾನಗಂಗೆಯಾಗಿ ಅಪರಿಮಿತ ಕ್ಷೇತ್ರದಲ್ಲಿ ಸಂಚರಿಸಿ ಪಾರಮಾರ್ಥಿಕ ನಂದನವನ್ನು ನಿರ್ಮಿಸಿದ ದಿವ್ಯ ಚೇತನ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು. ತಮ್ಮದೇ ಆದ ವಾಗ್ಮಿತ್ವದಿಂದ ಎಲ್ಲರನ್ನು ಎಚ್ಚರಿಸುತ್ತ ಧೀಮಂತ ವ್ಯಕ್ತಿತ್ವದಿಂದ ಆಕರ್ಷಿಸುತ್ತ ಅವರಲ್ಲಿ ಧರ್ಮವನ್ನು ಕುರಿತು ಶ್ರದ್ಧೆ, ಆಸಕ್ತಿ, ಅಭೀಪ್ಸೆ ಹುಟ್ಟಿಸುವ ಪ್ರತಿಭಾವಂತ ಪ್ರವಚನಕಾರರು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು. ವಿಶ್ವಗುರು ಬಸವಣ್ಣನವರು ಜನಿಸಿದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೋಕಿನ ಮನಗೂಳಿಯಲ್ಲಿ ಗಣೇಶ ಚೌತಿಯ 15-9-1931 ರಂದು ಜನಿಸಿ, ಬಿ. ಎ. ಆನರ್ಸ್ ಪದವೀಧರರಾಗಿ, 25-4-1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದೆ ಜ್ಞಾನದಾಸೋಹ ಮಾಡುತ್ತಿರುವ ಪಾವನ ಚೇತನ ಪೂಜ್ಯ ಸ್ವಾಮೀಜಿಯವರು. " ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರನುದಯ ನೈದಿಲೆಗೆ ಜೀವಾಳದಂತೆ " ಪೂಜ್ಯ ಸ್ವಾಮೀಜಿಯವರ ಬರವು ಮತ್ತು ಬದುಕು ಬಸವ ತತ್ತ್ವಕ್ಕೆ ಜೀವಾಳವಾಗಿದೆ. ಬಸವ ಯುಗಕ್ಕೆ ನಾಂದಿ ಹಾಡಿದ ಚೇತನಶಕ್ತಿ ಪೂಜ್ಯರು ಎಂದರೆ ಎಷ್ಟು ಉತ್ಪ್ರೇಕ್ಷೆಯಾಗದು.

ತರಗತಿಯಲ್ಲಿ ಪಾಠವನ್ನು ಮಾಡುವ ಶಿಕ್ಷಕರನ್ನು ಬಿಟ್ಟರೆ, ಬಹುಶಃ ಒಂದು ದಿನವೂ ಎಡಬಿಡದೆ ಜ್ಞಾನದಾಸೋಹವನ್ನು ಮಾಡಿರುವುದರಲ್ಲಿ ಪೂಜ್ಯ ಸ್ವಾಮೀಜಿಯವರ ಹೆಸರು ಗಿನ್ನಿಸ್ ದಾಖಲೆಗೂ ಸೇರಬಹುದೇನೊ ! ಅದೂ ಜ್ಞಾನದಾಸೋಹವೆಂದರೆ ಹತ್ತಾರು ಜನರ ಮುಂದೆ ಮಾಡುವ ಉಪನ್ಯಾಸವಲ್ಲ. ಸಹಸ್ರ ಸಹಸ್ರ ಜನತೆಯ ಮುಂದೆ ನಡೆಯುವ ಅಪೂರ್ವ ಪ್ರವಚನ. ಆ ಪ್ರವಚನವೂ ಏನೇನೂ ಪರಿಣಾಮ, ಪರಿವರ್ತನೆ ಮಾಡದ ಒಂದು ಯಾಂತ್ರಿಕ ಬೋಧೆಯಲ್ಲ; ಹೃನ್ಮನಗಳನ್ನು ಅರಳಿಸುವ ಬುದ್ಧಿಯನ್ನು ವಿಕಸಿಸುವ ಅಪೂರ್ವ ಉಪದೇಶ.

ಪೂಜ್ಯ ಸ್ವಾಮೀಜಿ, ಭಾವುಕ ಭಕ್ತರು, ವೈಚಾರಿಕ ತತ್ತ್ವಜ್ಞಾನಿಗಳು, ಪ್ರೌಢ ಚಿಂತನಶೀಲರು ಎಲ್ಲರನ್ನೂ ಆಕರ್ಷಿಸುವ ಧೀಮಂತ ಪ್ರತಿಭೆಯುಳ್ಳವರು. ಅವರು ಸಂಚರಿಸುವುದು ಬಲು ವ್ಯಾಪಕವಾಗಿ, ಹೊಂದಿರುವುದು ಬಹುದೊಡ್ಡ ಬಳಗವನ್ನು. ಪೂಜ್ಯರ ಪ್ರವಚನಗಳಿಂದ ಪ್ರೇರಿತರಾದವರು, ದೀಕ್ಷಾನುಗ್ರಹವನ್ನು ತೆಗೆದುಕೊಂಡು ಭಕ್ತರಾದವರು, ಆಶ್ರಯ ಅನುಗ್ರಹ ಪಡೆದು ಶಿಷ್ಯರಾದವರು— ಈ ಎಲ್ಲರೂ ಕೂಡಿ

ಇದೀಗ ಪೂಜ್ಯ ಸ್ವಾಮೀಜಿಯವರಿಗೆ ತಮ್ಮ ಗೌರವವನ್ನು, ಸೂಕ್ತವಾಗಿ ಹೇಳಬೇಕೆಂದರೆ ಕೃತಜ್ಞತೆಯನ್ನು ಅರ್ಪಿಸಲು ಸಿದ್ಧರಾಗಿದ್ದಾರೆ.

ಸಂದರ್ಭವೆಂದರೆ, ಪೂಜ್ಯ ಗುರೂಜಿಯವರು ಅರವತ್ತು ವರ್ಷಗಳನ್ನು ಪೂರೈಸುತ್ತಿರುವುದು. 1991 ರ ಗಣೇಶ ಚೌತಿಗೆ ಪೂಜ್ಯ ಸ್ವಾಮೀಜಿಯವರು ಅರವತ್ತು ವರ್ಷಗಳನ್ನು ಪೂರೈಸಿ, ಅರವತ್ತೊಂದಕ್ಕೆ ಪಾದಾರ್ಪಣ ಮಾಡುತ್ತಲಿದ್ದಾರೆ. ಈ ಸಂದರ್ಭದಲ್ಲಿ ಪೂಜ್ಯರಿಗೆ ಯಾವ ರೀತಿ ಕೃತಜ್ಞತೆಯನ್ನು ಸಮರ್ಪಿಸಬೇಕು ಎಂದು ಅವರ ಶಿಷ್ಯಕೋಟಿ ಕಾರ್ಯಕ್ರಮವನ್ನು ರೂಪಿಸುತ್ತಲಿದೆ.

1. ಗಣೇಶ ಚೌತಿಯು ದಿನಾಂಕ 11-9-1991 ರಂದು ಒದಗಿ ಬಂದಿದ್ದು ಅಂದು ಒಂದು ಸಮಾರಂಭವನ್ನು ಏರ್ಪಡಿಸುವುದು. ಬೆಳಿಗ್ಗೆ ಪೂಜ್ಯರ ಆರೋಗ್ಯ ಭಾಗ್ಯಕ್ಕಾಗಿ ಶಿಷ್ಯ ಸಮುದಾಯದಿಂದ ವಿಶೇಷ ಪೂಜೆ, ಮಂತ್ರಜಪ. ನಂತರ ಪೂಜ್ಯರ ಪಾದಪೂಜೆ, ಸದ್ಭಕ್ತರಿಂದ ನುಡಿಕಾಣಿಕೆ ಸಮರ್ಪಣೆ. ಸಂಜೆ ಸಾರ್ವಜನಿಕ ಸಮಾರಂಭ.
2. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ 27-10-1991 ರಂದು ರಾಜ್ಯಮಟ್ಟದ ಅಭಿನಂದನ ಸಮಾರಂಭವನ್ನು ಏರ್ಪಡಿಸಿ, ಪೂಜ್ಯರಿಗೆ ಗುರು ಕಾಣಿಕೆಯಾಗಿ ನಿಧಿಯೊಂದನ್ನು ಸಮರ್ಪಿಸುವುದೇ ಅಲ್ಲದೆ, ಪೂಜ್ಯರ ಹೆಸರಿನಲ್ಲಿ ಧರ್ಮ ಪ್ರಚಾರಕ ನಿಧಿಯೊಂದನ್ನು ಸ್ಥಾಪಿಸುವುದು.
3. ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠದ ಆಶ್ರಯದಲ್ಲಿ 12-1-1992 ರಂದು (ಶರಣ ಮೇಳಕ್ಕೆ ಒಂದು ದಿನ ಮೊದಲು) ಅಂತರ ರಾಜ್ಯ ಮಟ್ಟದ ಅಭಿನಂದನ ಸಮಾರಂಭ ಏರ್ಪಡಿಸುವುದು.
4. ಪೂಜ್ಯರ ಬದುಕು, ಬರಹ, ಹೋರಾಟ, ಸಾಧನೆ, ಸಿದ್ಧಿ ಕುರಿತು ವಿವಿಧ ಲೇಖನಗಳುಳ್ಳ ಒಂದು ಸ್ಮರಣಸಂಪುಟವನ್ನು ಸಿದ್ಧಪಡಿಸುವುದು.
5. ಪೂಜ್ಯ ಸ್ವಾಮೀಜಿಯವರ ಪ್ರವಚನಗಳ ಕೆಲವು ವೀಡಿಯೋ ಕೆಸೆಟ್ಟು ಸಿದ್ಧಪಡಿಸುವುದು.
6. ಪ್ರವಚನಗಳ ಆಡಿಯೋ ಕೆಸೆಟ್ಟು ಸಿದ್ಧಪಡಿಸುವುದು.

ತ್ರೈವಾರ್ಷಿಕ ಯೋಜನೆ

ಪೂಜ್ಯರಾದ ಸದ್ಗುರುಗಳ 61 ನೆಯ ಹುಟ್ಟು ಹಬ್ಬದಿಂದ 63 ನೆಯ ಹುಟ್ಟು ಹಬ್ಬದವರೆಗಿನ ಅವಧಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

1. ವಿಶ್ವಗುರು ಬಸವಣ್ಣನವರನ್ನು ಕುರಿತಾದ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಪ್ರಬಂಧ ಸ್ಪರ್ಧೆ, ಅಂತರ ಕಾಲೇಜು, ಅಂತರ ವಿಶ್ವವಿದ್ಯಾಲಯದ ಮಟ್ಟದ ಉಪನ್ಯಾಸ ಸ್ಪರ್ಧೆ ಏರ್ಪಡಿಸುವುದು.

2. ಪೂಜ್ಯ ಸ್ವಾಮೀಜಿಯುವರ ಬಾಲ್ಯ, ವಿದ್ಯಾಭ್ಯಾಸ, ಬದುಕು, ಸಂಚಾರ, ಸಾಧನೆ ಕುರಿತಾದ ಸಾಕ್ಷ್ಯಚಿತ್ರವೊಂದನ್ನು ತಯಾರಿಸುವುದು.

3. ರಾಷ್ಟ್ರೀಯ ಬಸವ ದಳಗಳ ಶಾಖೆಯನ್ನು ತೆರೆದು, ಪ್ರಾರ್ಥನಾ ಕಾರ್ಯಕ್ರಮ ಗಳನ್ನು ನಡೆಸಲು ವ್ಯವಸ್ಥೆ ಮಾಡುವುದು. ಇತ್ಯಾದಿ.

ಸಹಕರಿಸಲು ಕೋರಿಕೆ

ಶರಣ ಬಂಧುಗಳೇ :

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ ಅಭಿನಂದನಾ ಸಮಿತಿಯು ಹಮ್ಮಿಕೊಂಡಿರುವ ಈ ಯೋಜನೆ-ಕಾರ್ಯಕ್ರಮಗಳನ್ನು ಪೂರೈಸಲು ಉದಾರವಾದ ಧನ ಸಹಾಯುವು ಬೇಕಲ್ಲವೆ ? ಆದ್ದರಿಂದ ತಾವು ಉದಾರ ಮನಸ್ಸಿನಿಂದ ಮುಂದೆ ಬರಬೇಕಾಗಿ ಕೋರುತ್ತೇವೆ.

1. ಮಹಾಪೋಷಕರು 5000 ರೂ. ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ,,
3. ಹಿತೈಷಿಗಳು 500 ರೂ. ,,

ಇನ್ನು ಅವರವರ ಶಕ್ತ್ಯಾನುಸಾರ ಕಾಣಿಕೆಗಳನ್ನು 101 ರಿಂದ 500 ರೂಗಳ ವರೆಗೆ ಕೊಡಬಹುದು.

ವಿವಿಧ ಯೋಜನೆಗಳಿಗೆ.

1. ಯೂ ಮ್ಯಾಟಿಕ್ ವೀಡಿಯೋ ಕೆಸೆಟ್ಟು ಮಾಡುತ್ತಿರುವುದರಿಂದ ಉಪನ್ಯಾಸದ ಒಂದು ಕೆಸೆಟ್ಟಿಗೆ, ಅಂದರೆ ಮಾತೃಸುರಳಿ ಮಾಡಲು 6000/- ರೂಪಾಯಿ ವೆಚ್ಚಬರುತ್ತಿದೆ. ಈ ಉದ್ದೇಶಕ್ಕೆಂದು ಒಬ್ಬರೇ ಪೂರ್ತಿ ಹಣ ಕೊಟ್ಟರೆ, ಕೆಸೆಟ್ಟು ಪ್ರಾರಂಭದಲ್ಲಿಯೇ ದಾನಿಗಳ ಹೆಸರನ್ನು ತೋರಿಸಲಾಗುವುದು. 3000/- ರೂ ಕೊಟ್ಟರೆ, ಇಬ್ಬರ ಹೆಸರನ್ನು ಪ್ರಾರಂಭದಲ್ಲಿ, ನಡುವಿನಲ್ಲಿ ತೋರಿಸಲಾಗುವುದು. ವೀಡಿಯೋ ಕೆಸೆಟ್ಟು ತಯಾರಿಕೆಗೆ ಎಂದು ಕನಿಷ್ಟ 1000/- ರೂದಂತೆ ಯಾರು ಕೊಡುವರೋ, ಅವರ ಹೆಸರುಗಳನ್ನು ಸಮಯದ ಆಧಾರದ ಮೇಲೆ ವರ್ಗೀಕರಿಸಿ ತೋರಿಸಲಾಗುವುದು.

2. ಪ್ರವಚನಗಳ ವಿಶೇಷ ವಿಷಯುಗಳನ್ನು ಆಯ್ದುಕೊಂಡು, ಒಂದೊಂದು ಗಂಟೆಯ **(C-60)** ಎರಡು ಕೆಸೆಟ್ಟುಗಳನ್ನು ಒಂದೊಂದು ವಿಷಯ ಕುರಿತಂತೆ ಸಿದ್ಧಪಡಿಸ ಲಾಗುವುದು. ಒಂದು ಗಂಟೆ ಆಡಿಯೋ ಕೆಸೆಟ್ಟು ಮಾತೃ ಸುರಳಿ (**Mother Tape**) ಸಿದ್ಧಪಡಿಸಲು 1500/- ರೂ ಬೇಕಾಗುತ್ತದೆ. ಆದ್ದರಿಂದ ದಾನಿಗಳು 1500/- ರೂದಂತೆ ಕೊಟ್ಟರೆ ಕೆಸೆಟ್ಟಿನ ಹೊದ್ದಿಕೆಯ ಮೇಲೆ ದಾನಿಗಳ ಹೆಸರನ್ನು ಮುದ್ರಿಸಲಾಗುವುದು. ಮತ್ತು ಕೆಸೆಟ್ಟಿನ ಉಚಿತ ಪ್ರತಿ ನೀಡಲಾಗುವುದು.

ಒಂದು ಉಪನ್ಯಾಸವು 2 ಗಂಟೆ ಕಾಲ ಧ್ವನಿ ಮುದ್ರಣಗೊಳ್ಳುವುದರಿಂದ ದಾನಿಗಳು ಪೂರ್ತಿ ವಿಷಯಕ್ಕೆ ತಮ್ಮ ಹೆಸರಿರಲಿ ಎನ್ನುವುದಾದರೆ 3000/- ರೂಗಳನ್ನು, ಒಂದೇ ಕೆಸೆಟ್ಟಿಗಾದರೆ 1500/- ರೂಗಳನ್ನು ಕೊಡಬೇಕು.

3. ಧರ್ಮ ಪ್ರಚಾರಕರ ನಿಧಿಗೆ 1001/- ರೂ ಕೊಡಬಹುದು.

4. ಪೂಜ್ಯ ಶ್ರೀಗಳ 61 ನೆಯ ಹುಟ್ಟು ಹಬ್ಬದ ನಿಮಿತ್ತ, ಸಂಸ್ಥೆಗೆ ಉಪಯೋಗ ವಾಗುವ ವಸ್ತುಗಳ ರೂಪದಲ್ಲಿಯೂ, ತಮ್ಮ ತಮ್ಮ ಊರುಗಳ, ಸಂಘ ಸಂಸ್ಥೆ ಗಳ ನೆನಪಿರುವಂತೆ ಕೊಡುಗೆಗಳನ್ನು ಕೊಡಲು ಅವಕಾಶ ಉಂಟು.

80 G ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಸೌಲಭ್ಯ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಹ ಈ ಗೌರವಾರ್ಪಣೆಯ ಕಾರ್ಯ ದಲ್ಲಿ ಭಾಗಿಯಾಗುತ್ತಲಿದ್ದು, ಇದು 500/- ರೂ ಮೀರಿದ ಮೇಲಿನ ಯಾವುದೇ ದೇಣಿಗೆಯನ್ನು ಕೊಡುವವರಿಗೆ 80 G ರಿಯಾಯಿತಿ ಸೌಲಭ್ಯವನ್ನು ಒದಗಿಸುತ್ತದೆ. ಈ ಸೌಲಭ್ಯ ಪಡೆದು ಕೊಳ್ಳಬೇಕು ಎನ್ನುವವರು, Basava Mahamane Charitable Trust, Bangalore ಹೆಸರಿಗೆ ಬ್ಯಾಂಕ್ ಡ್ರಾಫ್ಟ್/ಚೆಕ್ಕು/ನಗದು ಕಳಿಸಬಹುದು. ಆರಸೀತಿಯನ್ನು ದಾನಿಗಳಿಗೆ ಕೊಡಲಾಗುವುದು.

ಪ್ರಸ್ತುತ ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಿ, ಹೃತ್ಪೂರ್ವಕ ಸಹ ಕಾರ ನೀಡುವಿರಾಗಿ ನಂಬಿದ್ದೇವೆ.

ಶರಣ. ನಿಜಗುಣಾನಂದ ಸ್ವಾಮಿ,
ಸಹ-ಕಾರ್ಯದರ್ಶಿ

ಶರಣ. ಎಸ್. ಪುಟ್ಟರುದ್ರಪ್ಪ
ಪ್ರಧಾನ ಕಾರ್ಯದರ್ಶಿ

ದೂರವಾಣಿ : 325335

ವ್ಯವಹಾರಕ್ಕೆ ವಿಳಾಸ :

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ
ಅಭಿನಂದನಾ ಸಮಿತಿ, ಬಸವಮಂಟಪ, 2035, 2ನೇ ಬ್ಲಾಕು,
20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು–560010



ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲ ಸಿದ್ಧಮಲ್ಲಿಕಾರ್ಜುನಾ ॥

–ಶ್ರೀ ಸಿದ್ಧರಾಮೇಶ್ವರ

—ಮಾತಾಜಿ

೧. ದೀಪಗಳ ಬಗ್ಗೆ

ದಿ. ೨೯-೩-೧೯೯೧ ರಂದು, ಹುಬ್ಬಳ್ಳಿಯಲ್ಲಿ ಶರಣೆ. ಶೋಭಾದೇವಿ ಕಲ್ಯಾಣಪ್ಪ ಪರಮಾದಿ ಅವರ ಮನೆಯಲ್ಲಿ ಪೂಜೆಗೆ ಕುಳಿತಿದ್ದೆ. ತ್ರಾಟಕಯೋಗಕ್ಕೆಂದು ಅವರು ಭುಜದ ಎತ್ತರಕ್ಕೆ ಚಿಕ್ಕ ಚಿಕ್ಕ ಬಲ್ಬು ಹಾಕಿದ್ದಾರೆ, ಚೆನ್ನಾಗಿ ಉಪಯೋಗವಾಗುತ್ತವೆ. ಪೂಜೆಯಕಟ್ಟೆಯ ಮೇಲೆ ಗುರು ಬಸವಣ್ಣನವರ ಭಾವಚಿತ್ರವನ್ನು ಇಟ್ಟು, ಅಲ್ಲಿ ಎಣ್ಣೆಯ ದೀಪವನ್ನು ಇರಿಸಿದ್ದರು. ಬಹಳ ಸುಂದರವಾಗಿ ಕಟ್ಟಿಸಿರುವ ಪೂಜೆಯ ಕೋಣೆಯಲ್ಲಿ ಕುಳಿತು ಪೂಜೆಯನ್ನು ಮಾಡುತ್ತಲಿದ್ದೆ. ಕರ್ಪೂರವನ್ನು ಹಚ್ಚುವಾಗ ಕರ್ಪೂರದ ಬಿಲ್ಲೆಯನ್ನು ಹಿಡಿದು ತುಂಬಾ ಸಹಜವಾಗಿ ಕೈಯು ವಿದ್ಯುತ್ ಬಲ್ಬಿನ ಬಳಿಗೆ ಹೋಯಿತು. ತಟ್ಟನೆ ಅದರಿಂದ ಕರ್ಪೂರವನ್ನು ಹಚ್ಚಿಕೊಳ್ಳಲು ಬರದು ಎಂಬುದು ಅರಿವಿಗೆ ಬಂದಿತು. ನನ್ನ ಮರೆವಿಗೆ ನಾನೇ ನಕ್ಕು, ಎಣ್ಣೆಯ ದೀಪದಿಂದ ಕರ್ಪೂರ ಹಚ್ಚಿದೆ. ಆಗ ಒಂದು ಸ್ಫುರಣವು ಹೊಳೆಯಿತು.

ವಿದ್ಯುತ್ ಬಲ್ಬು ಎಷ್ಟೇ ಪ್ರಕಾಶಮಾನವಾಗಿದ್ದರೂ, ಅದರಿಂದ ದೀಪವನ್ನು ಹಚ್ಚಲು ಬರುವುದಿಲ್ಲ. ಎಣ್ಣೆಯ ಪ್ರಣತಿ ಎಷ್ಟೇ ಚಿಕ್ಕದಾಗಿದ್ದರೂ ಅದರಿಂದ ದೀಪಗಳನ್ನು, ಕರ್ಪೂರ, ಊದಿನ ಕಡ್ಡಿಗಳನ್ನು ಹಚ್ಚಬಹುದಷ್ಟೇ. ಹಾಗೆಯೇ ಕೆಲವು ಜನರು ಅತ್ಯದ್ಭುತ, ಅತಿಮಾನುಷ ವ್ಯಕ್ತಿಗಳೆಂದು ಪ್ರಚಾರ ಪಡೆದಿರುವರು. ಆದರೆ ಅವರು ಉರಿಯುವ ವಿದ್ಯುತ್ ಬಲ್ಬಿನಂತೆ. ಅವರು ತಮ್ಮಷ್ಟಕ್ಕೆ ತಾವೇ ದೊಡ್ಡವರೆಂದು ಪ್ರಚಾರ ಹೊಂದಿರುವರು. ತಮ್ಮಂತೆಯೇ ಇನ್ನಿತರರನ್ನು ರೂಪಿಸಲಾರರು.

ಇನ್ನು ಕೆಲವರು ಮಹಾತ್ಮರು, ಶರಣರು ಪ್ರಣತಿಯಂತೆ. ಅವರು ತಮ್ಮ ಬದುಕು, ಬೋಧನೆ, ಬರಹಗಳಿಂದ ಅಸಂಖ್ಯಾತ ದೀಪಗಳೆಂಬ ಬೋಧಕರನ್ನು, ಭಕ್ತರೆಂಬ ಊದಿನ ಕಡ್ಡಿಗಳನ್ನು ಹಚ್ಚಬಲ್ಲರು.

೨. ರೆಕಾರ್ಡಿಂಗ್ ರೂಂ ಒಳಗೆ

ಒಂದು ರೆಕಾರ್ಡಿಂಗ್ ಕೆಲಸವಿದ್ದಿತು. ಸ್ಟುಡಿಯೋಕ್ಕೆ ಹೋಗಿದ್ದೆವು. ರೆಕಾರ್ಡಿಂಗ್ ನಡೆಯುವಾಗ ಯಾರೋ ಬಾಗಿಲು ತೆಗೆದರು, ಒಳಗೆ ದಢಾರ್ ಶಬ್ದವಾಯಿತು. ಆಗ ರೆಕಾರ್ಡಿಂಗ್ ನಿಲ್ಲಿಸಿ ಪುನಃ ಆರಂಭಿಸಬೇಕಾಯಿತು. ಅದು ಶಬ್ದವು ಒಳಗೆ ಹಾಯದ ಕೋಣೆ. ಹೊರಗಿನ ಶಬ್ದವೇನೂ ಬರಲಿಲ್ಲ, ನಿಜ. ಆದರೆ ಒಳಗೆ ಆದ ಶಬ್ದವು ರೆಕಾರ್ಡಿಂಗ್‌ಗೆ ಆತಂಕವನ್ನು ಉಂಟು ಮಾಡಿತಷ್ಟೆ. ಆದೇ ರೀತಿ ಮನಸ್ಸಿನ ಒಳಗಿನ ತೊಳಲಾಟವು ಸಹ. ಯಾರು ಸ್ವಯಂ ಪ್ರೇರಣೆಯಿಂದ ಆದರ್ಶ ಜೀವನವನ್ನು ಸ್ವೀಕರಿಸದೆ ಪರಪ್ರೇರಣೆಯಿಂದಲೋ, ಅಥವಾ ಯಾವುದಾದರೂ ಆಮಿಷಕ್ಕೆ ಒಳಗಾಗಿಯೋ

ಬರುತ್ತಾರಲ್ಲ, ಅವರು ವಾಸಿಸುವುದು ಉತ್ತಮ ವಾತಾವರಣದಲ್ಲಿದ್ದರೂ, ಅಂತರಂಗ ಮಾತ್ರ ಆದರ್ಶಕ್ಕೆ ಹೊಂದಿಕೊಳ್ಳದೆ ಹೊಯ್ದಾಡುತ್ತದೆ. ಅಂಥವರನ್ನು ಕಂಡೇ ಜೇಡರ ದಾಸಿಮಯ್ಯನವರು ಹೇಳುವುದು.

ಬರುಶಠಗನ ಭಕ್ತಿ ದಿಟವೆಂದು ನಂಬಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ ॥

ಆದರೆ ತಮ್ಮ ದೌರ್ಬಲ್ಯಕ್ಕೆ ಈಡಾಗಿ, ಪುಟಕ್ಕನೆ ಆದರ್ಶವನ್ನು ಕೈಬಿಡುತ್ತಾರೆ. ಹೀಗ ತಮ್ಮ ತಪ್ಪನ್ನು ಎಂದೂ ಒಪ್ಪಿಕೊಳ್ಳದೆ, ಆ ಆದರ್ಶವನ್ನೇ ತಪ್ಪೆಂದು ಳೆಯುತ್ತಾರೆ.

ಕೆ. ಇ. ಬಿ. ನಗೆಹನಿಗಳು

ಸುಮಾರು ಒಂದೂವರೆ ದಿವಸ ವಿದ್ಯುತ್ ಇರಲಿಲ್ಲ. ಮಧ್ಯಾಹ್ನ ಇದ್ದಕ್ಕಿದ್ದಂತೆಯೇ ದೀಪಗಳು ಹೊತ್ತಿದವು. ಹಾಕಿದ ಸ್ವಿಚ್ ಹಾಗೇ ಇದ್ದು, ಕೋಣೆಯ ದೀಪ ಹೊತ್ತಿತ್ತು. ಎದ್ದು ಆರಿಸಬೇಕು ಎಂದುಕೊಂಡೆ. ಏನೋ ಬರೆಯುತ್ತಿದ್ದೆ. ಅಷ್ಟನ್ನು ಮುಗಿಸಿ ಆರಿಸೋಣ ಎಂದು ಬರವಣಿಗೆಯನ್ನು ಮುಂದುವರಿಸುವಾಗಲೇ ಯಾರೋ ಬಂದರು. "ಇದೇನು ಮಾತಾಜಿ, ಇಷ್ಟು ಹಗಲು ಹೊತ್ತಿನಲ್ಲಿ ದೀಪ?" ಎಂದು ಚಕಿತರಾದರು. ಆಗ ನಾನು ಹೇಳಿದೆ, " ಏನು ಮಾಡುವುದು ನಮಗೆ ಬೇಕಾದಾಗ, ರಾತ್ರಿ ಹೊತ್ತು ವಿದ್ಯುತ್ ಇರುವುದಿಲ್ಲ. ಆದ್ದರಿಂದ ವಿದ್ಯುತ್ ಇದ್ದಾಗ (ಮಧ್ಯಾಹ್ನವಾಗಿದ್ದರೂ) ಲಾದರೂ ದೀಪ ಹಚ್ಚಿಕೊಂಡು ಸಂತೋಷಪಡೋಣ. ಎಂಬ ಆಸೆ." ಎಂದು ನಗೆ ಚಟಾಕಿ ಹಾರಿಸಿದೆ.

ಧನ್ಯವಾದ ಯಾರಿಗೆ?

"ಬೆಂಗಳೂರು ಬಸವ ಮಂಟಪದಲ್ಲಿ ನೀರನ್ನು ಬಾಯಿಲರ್‌ದಲ್ಲಿ ಕಾಯಿಸುತ್ತಿದ್ದು ದರಿಂದ ವಿದ್ಯುತ್ ಬಿಲ್ ವಿಪರೀತ ಬರುತ್ತಿತ್ತು. ಇನ್ನೊಂದು ಕಡೆ ಕಟ್ಟಿಗೆ ವ್ಯರ್ಥವಾಗುತ್ತಿತ್ತು. ತೋಟದಲ್ಲಿ ಸಿಗುವ ತೆಂಗಿನ ಗರಿ, ತೆಂಗಿನ ಮಟ್ಟೆ ಉರವಲಿಗೆ ಆಗುತ್ತದೆ ಎಂದು ಬಾಯಿಲರ್ ತೆಗೆಸಿಬಿಟ್ಟೆ. ಅನೇಕರು ತಣ್ಣೀರು ಬಳಸುತ್ತಾರೆ. ಬಿಸಿ ನೀರು ಬೇಕಾದವರು ಒಲೆಹಚ್ಚಿ ಕಾಯಿಸಿಕೊಳ್ಳಲಿ." ಎಂದು ಹೇಳಿದೆ. ಆಗ ಜಯಮ್ಮ ಹೇಳಿದಳು, " ಇಲ್ಲಿ (ಕೂಡಲ ಸಂಗಮದಲ್ಲಿ) ನೋಡಿ ನಾವು ಹೆಚ್ಚು ಬಳಸುವುದಿಲ್ಲ. ನಮ್ಮ ವಿದ್ಯುತ್ ಬಿಲ್ ಮಿತವಾಗಿರುತ್ತದೆ." ಎಂದಳು. ಆಗ ನಾನು ಹೇಳಿದೆ, "ನಾವೇನು ನಿಮ್ಮನ್ನು ಹೊಗಳುವುದಿಲ್ಲ, ಕೆ. ಇ. ಬಿ. ಯವರನ್ನು ಕೊಂಡಾಡುತ್ತೇವೆ. ಏಕೆಂದರೆ ಕೂಡಲ ಸಂಗಮದಲ್ಲಿ ಸಾಮಾನ್ಯವಾಗಿ ವಾರಕ್ಕೆ ಮೂರು–ನಾಲ್ಕು ದಿವಸ ವಿದ್ಯುತ್ತು ಇರುವುದೇ ಇಲ್ಲ ಎಂದಾಗ ಉರಿಸುವುದೆಲ್ಲಿಂದ ಬಂದೀತು? ಆದ್ದರಿಂದ ಮಿತಬಳಕೆಗಾಗಿ ಧನ್ಯವಾದ ಸಲ್ಲಬೇಕಾದ್ದು ಕ. ವಿ. ಮಂಡಳಿಯವರಿಗೆ, ನಿಮಗಲ್ಲ," ಎಂದೆ.

ಕಲ್ಯಾಣ ಕಿರಣದ ಓದುಗರು ಮತ್ತು ಸದ್ಭಕರಲ್ಲಿ ಕೋರಿಕೆ

ಪರಮಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಪ್ರತಿಭಾನ್ವಿತ ಪ್ರವಚನಕಾರರಾಗಿ, ಅಪೂರ್ವ ತ್ಯಾಗಿಗಳಾಗಿ, ನಡೆವ ಜ್ಞಾನ ದೇಗುಲವಾಗಿ ನಾಡಿನಾದ್ಯಂತ ಸಂಚರಿಸಿ ಜ್ಞಾನವನ್ನು ಅಸಂಖ್ಯಾತರಿಗೆ ನೀಡಿದ್ದಾರೆ. ಗುರುವಾಗಿ ಅನುಗ್ರಹವನ್ನು ನೀಡಿ, ಜೀವನವನ್ನು ಪಾವನ ಮಾಡಿದ್ದಾರೆ. ಪೂಜ್ಯರ ಅಸಂಖ್ಯಾತ ಭಕ್ತರು, ಅಭಿಮಾನಿಗಳು ನಾಡಿನಲ್ಲೆಲ್ಲ ಇದ್ದಾರೆ. ಇಂತಹವರಲ್ಲಿ ಕೋರಿಕೆ ಏನೆಂದರೆ,

1. ಪೂಜ್ಯರ ಬದುಕು, ಬರಹ, ಪ್ರವಚನ, ದೀಕ್ಷೆ ಈ ಯಾವುದರಿಂದಲಾದರೂ ನೀವು ಪ್ರಭಾವಿತರಾಗಿ, ನಿಮ್ಮ ನಂಬಿಕೆ, ಆಚಾರ, ವಿಚಾರಗಳಲ್ಲಿ ಬದಲಾವಣೆಯಾಗಿದ್ದರೆ, ಅಂತಹ ಅನುಭವ ಕುರಿತು ಪತ್ರ ರೂಪದಲ್ಲಿ, ಪ್ರಬಂಧ ರೂಪದಲ್ಲಿ ಲೇಖನವನ್ನು ಕಳಿಸಬಹುದು.
2. " ಪೂಜ್ಯರನ್ನು ನೀವು ಕಂಡಂತೆ " ಅವರ ವ್ಯಕ್ತಿತ್ವ ಕುರಿತು ಲೇಖನ, ಕವನ ರೂಪದಲ್ಲಿ ಬರೆಯಬಹುದು.
3. ಪೂಜ್ಯರ ಪ್ರವಚನದಿಂದ ಸಮಾಜದಲ್ಲಿ ಆಗುವ ಜಾಗೃತಿ, ಸಮಾಜ–ಧರ್ಮಗಳಿಗೆ ಆದ ಕೊಡುಗೆ ಕುರಿತು ಬರೆಯಬಹುದು.
4. ಪೂಜ್ಯರ ಬಹಳ ಹಿಂದಿನ ಫೋಟೋಗಳು ಅವರ ಪೂರ್ವಾಶ್ರಮದ ಬಂಧುಗಳು, ಮಿತ್ರರು, ಸಹಪಾಠಿಗಳ ಬಳಿ, ಜಂಗಮ ದೀಕ್ಷೆ ಪಡೆದಾದ ನಂತರದ ಫೋಟೋಗಳು ಅಲ್ಲಲ್ಲೇ ಸದ್ಭಕ್ತರ ಮನೆಗಳಲ್ಲಿ, ಆಗ ಪ್ರವಚನ ಮಾಡಿದ ಊರುಗಳಲ್ಲಿ ಸಿಕ್ಕುವವು. ಅವುಗಳನ್ನು ಕಳಿಸಿದರೆ ಬಹಳ ಉಪಕಾರವಾಗುವುದು.

ತಾವು ಸಹಕರಿಸುವಿರೆಂದು ನಂಬುತ್ತೇವೆ.

ಸಹ ಕಾರ್ಯದರ್ಶಿ	ಪ್ರಧಾನ ಕಾರ್ಯದರ್ಶಿ
ಶರಣ. ನಿಜಗುಣಾನಂದ ಸ್ವಾಮಿ	ಶರಣ. ಎಸ್. ಪುಟ್ಟರುದ್ರಪ್ಪ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ
ಅಭಿನಂದನಾ ಸಮಿತಿ,
ಬಸವ ಮಂಟಪ, 2035, 2ನೇ ಬ್ಲಾಕ್,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560010

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ವಚನ ಸಾಹಿತ್ಯ

—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಆಗಿಹೋಗಿರುವ ಒಬ್ಬ ಶ್ರೇಷ್ಠ ವಿಚಾರವಾದಿಗಳು, ಸಮಾಜ ಸುಧಾರಕರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಅವರು ಕಲ್ಯಾಣದಲ್ಲಿ ಕಟ್ಟಿದಾಗ, ನಾಡಿನ ಮೂಲೆಮೂಲೆಗಳಿಂದ ಆಕರ್ಷಿತರಾಗಿ ಅನೇಕ ಸಾಧಕರು, ಸಿದ್ಧಪುರುಷರೂ ಕಲ್ಯಾಣಕ್ಕೆ ಆಗಮಿಸಿದರು. ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನರು ಸಮಾಜ ಪರಿವರ್ತನೆಯ ಒಂದು ಮಹಾನ್ ಪ್ರಯೋಗವನ್ನು ಕೈಗೊಂಡರು. ಮಳೆಯು ಕೇವಲ ಭೂಮಿಯ ಮೇಲ್ ಪದರವನ್ನು ತೋಯಿಸಿದ ಮಾತ್ರಕ್ಕೆ ಬೆಳೆಬರದು, ಮಳೆಯ ನೀರು ಕೆಳಗಿನ ಪದರುಗಳನ್ನು ತೋಯಿಸಿದಾಗ ಮಾತ್ರ ಸಮೃದ್ಧ ಬೆಳೆಯುಷ್ಟೆ. ಅದೇ ರೀತಿ ಧರ್ಮ-ದರ್ಶನ ಶಾಸ್ತ್ರಗಳ ವರ್ಷಾಧಾರೆ ಕೇವಲ ಮೇಲ್ವರ್ಗದವರನ್ನು ತಲ್ಪಿದರೆ, ತಣಿಸಿದರೆ, ಸಂಸ್ಕರಿಸಿದರೆ ಸಾಲದು. ಸಮಾಜದ ಅತ್ಯಂತ ಕೆಳ ಶ್ರೇಣಿಯಲ್ಲಿರುವವರನ್ನೂ ತಲ್ಪಬೇಕು, ತಣಿಸಬೇಕು ಮತ್ತು ಸಂಸ್ಕರಿಸಬೇಕು.

ಇಂಥ ಘನ ಉದ್ದೇಶ ಹೊಂದಿದ ಬಸವಣ್ಣನವರು ಮಾಡಿದ ಮಹತ್ತರ ಕಾರ್ಯವೆಂದರೆ, ಸಮಾಜ ಜಾಗೃತಿಗೆ ಅವರು ಆಯ್ದುಕೊಂಡದ್ದು ಆಡುಭಾಷೆಯನ್ನು, ಜನ ಸಾಮಾನ್ಯರ ಭಾಷೆ-ಕನ್ನಡವನ್ನು. ಧರ್ಮ ಸಾಹಿತ್ಯದ ಅಮೃತವು ವಚನ ವಾಙ್ಮಯ ರೂಪದಲ್ಲಿ ಹರಿದು ಬಂದುದರಿಂದ, ಕನ್ನಡವು ದಾರ್ಶನಿಕ ಭಾಷೆಯಾಯಿತು. ಜನ ಸಾಮಾನ್ಯರು ಪರಿವರ್ತನೆ ಹೊಂದಿ ಪುನೀತರಾದರು. ಸಾಮಾನ್ಯವಾಗಿ ಧಾರ್ಮಿಕ ಅಥವಾ ದಾರ್ಶನಿಕ ಸಾಹಿತ್ಯ ಕೇವಲ ಆಂತರಂಗಿಕ ಅನುಭವದ ಕಡೆಗೆ ಲಕ್ಷ್ಯವಿಟ್ಟು ಹೊರ ಜಗತ್ತಿನ ಉಸಾಬರಿಯನ್ನು ಕಡೆಗಣಿಸಿದರೆ, ವೈಚಾರಿಕ ಸಾಹಿತ್ಯ ಧಾರ್ಮಿಕಾನುಭವಗಳನ್ನು ವಿಡಂಬಿಸಿ, ಕೇವಲ ಸಮಾಜ ಪರಿವರ್ತನೆಯ ಕಡೆಗೆ ಗಮನ ಕೊಡುತ್ತದೆ. ವಚನ ಸಾಹಿತ್ಯವಾದರೋ ಎರಡನ್ನೂ ಸಮತೋಲನಗೊಳಿಸುತ್ತದೆ. 'ಕೇವಲ 'ಒಳಗೆ ರಣರಂಗವನ್ನು ಸೃಷ್ಟಿಸಿ, ಹೊರಗೆ ಶೃಂಗರಿಸುವ ಕ್ರಿಯೆಯನ್ನು,' 'ಏಕ ಆಂತರಂಗಿಕ ಸುಖವನ್ನು ಬಯಸಿ, ಪರಿಸರವನ್ನು ಸಮಾಜವನ್ನು ಕಡೆಗಣಿಸುವ' ವಿಮುಖ ಚಿಂತನಧಾರೆಯನ್ನು ವಿಡಂಬಿಸಿ ಅಂತರಂಗ-ಬಹಿರಂಗ, ವ್ಯಕ್ತಿ-ಸಮಾಜಗಳೆರಡರ ಸುಧಾರಣೆಯನ್ನು ಆಲೋಚಿಸುತ್ತದೆ. ವಚನ ಸಾಹಿತ್ಯದಲ್ಲಿ ಕೆಲವಾರು ಹಂತಗಳನ್ನು ಗುರುತಿಸಬಹುದು. ಅಂತರಂಗ ವೀಕ್ಷಣೆ, ಸಮಾಜದ ವಿಶ್ಲೇಷಣೆ, ಆದರ್ಶ ಸಮಾಜ ರಚನೆ, ಕಲ್ಯಾಣ ರಾಜ್ಯ ಸ್ಥಾಪನೆ:

ಲೋಕದ ಡೊಂಕ ನೀವೇಕೆ ತಿದ್ದುವಿರಿ,
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ಎಂಬಲ್ಲಿ, ಮೊಟ್ಟ ಮೊದಲು ತನ್ನ ಅಂತರಂಗದ ಶುದ್ಧೀಕರಣ ಬಲು ಮುಖ್ಯ ಎಂಬುದನ್ನು ಸಾರುತ್ತದೆ. ವ್ಯಕ್ತಿಯು ಸಮಾಜದ ಅವಿಭಾಜ್ಯ ಅಂಗ. 'ತಾನು ಉತ್ತಮನೂ, ಸಚ್ಚಾರಿತ್ರ್ಯವಂತನೂ ಆದರೆ ಸಾಕು. ಲೋಕದ ಗೊಡವೆ ಏಕೆ ?' ಎನ್ನುವಂತಿಲ್ಲ. ತನ್ನ ಸುತ್ತಲಿನ ಪರಿಸರ-ಸಮಾಜಗಳನ್ನು ಸುಧಾರಿಸದ ಹೊರತು ಆತ್ಮಶಾಂತಿ ಕಂಡುಕೊಳ್ಳಲಾರನು. "ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ" ಎಂದು ಬಸವಣ್ಣನವರು ಹೇಳುವಲ್ಲಿ ಕೇವಲ ಆತ್ಮಾನಂದದಲ್ಲೇ ತಲ್ಲೀನರಾದವರಿಗೆ ನಿಜ ಬೋಧೆ ಇದೆ. ಸಮಾಜದಲ್ಲಿ ತುಂಬಿರುವ ಮೌಢ್ಯ, ದೀನರು-ಅಜ್ಞಾನಿಗಳೂ ಆದವರ ಶೋಷಣೆ, ಧರ್ಮ ದೇವರ ಹೆಸರಲ್ಲಿ ನಡೆಯುವ ವಂಚನೆ ಇವೆಲ್ಲವನ್ನೂ ನಿಜ ಶರಣನು ವಿಶ್ಲೇಷಿಸುವನು. ಹೀಗೆ ಸಮಾಜ, ವ್ಯವಸ್ಥೆಯಲ್ಲಿರುವ ಕೆಡುಕುಗಳನ್ನು ಗುರುತಿಸಿದ ನಂತರ ಇವುಗಳ ಪರಿಹಾರಕ್ಕೆ ಯತ್ನಿಸುವನು. ಆದರ್ಶ ಸಮಾಜ ಒಂದರ ರಚನೆಗೆ ಕಟಿಬದ್ಧನಾಗುವನು.

ಹೀಗೆ ವಚನ ಸಾಹಿತ್ಯವು ಜಾತಿ ವರ್ಣ ವರ್ಗರಹಿತ, ಧರ್ಮ ಸಹಿತವಾದ ಕಲ್ಯಾಣ ರಾಜ್ಯದ ಪ್ರಣಾಳಿಕೆ ಮಾತ್ರವಲ್ಲ ಸಂವಿಧಾನವೂ ಹೌದು. ಮಾನವ ಕುಲದ ಹಕ್ಕು ಬಾಧ್ಯತೆಗಳಿಗಾಗಿ ನಡೆದ ಒಂದು ಮಹತ್ತರವಾದ ಕ್ರಾಂತಿಗೆ ವಚನ ಸಾಹಿತ್ಯ ಒಂದು ಸಾಧನವಾದರೆ, ಇನ್ನೊಂದು ಕಡೆ ಕ್ರಾಂತಿಯ ಫಲವಾಗಿಯೇ ರೂಪುಗೊಂಡಿತು. ಕೇವಲ ಸಾಹಿತ್ಯಕ ಮೌಲ್ಯಗಳಿಗೆ ಮಾತ್ರ ಸೀಮಿತವಾಗದೆ ವ್ಯಷ್ಟಿ-ಸಮಷ್ಟಿಗಳ ಉದ್ಧಾರಕ್ಕೆ ಅದು ಕಂಕಣ ಬದ್ಧವಾದ್ದರಿಂದ, ಅದು ಜೀವನ ಸಿದ್ಧಾಂತವೇ ಆಗಿ, ಜನಮನದಲ್ಲಿ ಮೊಳೆತು, ಬೆಳೆಯಿತು. ಪ್ರಜಾಪ್ರಭುತ್ವದ ಜೀವಾಳವಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಪರಿಕಲ್ಪನೆ ವಚನ ಸಾಹಿತ್ಯದಲ್ಲಿ ಅಂದೇ ಮೂಡಿರುವುದನ್ನು ಗುರುತಿಸಬಹುದು. ಗಾಂಧೀಜಿ-ವಿನೋಬಾಜಿಯವರ ಸರ್ವೋದಯ ಕಲ್ಪನೆ, ಜಯಪ್ರಕಾಶ ನಾರಾಯಣರ ಸಮಗ್ರಕ್ರಾಂತಿ, ಡಾ॥ ಬಿ. ಆರ್. ಅಂಬೇಡ್ಕರರ ದಲಿತೋದ್ಧಾರ, ವಿಶ್ವ ವಿಭೂತಿ ಬಸವಣ್ಣನವರ ಒಂದೇ ಒಂದು ವಚನ ವಾಕ್ಯ, 'ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ' ಎಂಬುದರಲ್ಲಿ ಘನೀಭೂತವಾಗಿದೆ. ಹೀಗಾಗಿ ವಚನ ಸಾಹಿತ್ಯವು ಎಂದೆಂದೂ ಜೀವಂತವಾಗಿರುವ ಮತ್ತು ಸಾರ್ವಕಾಲಿಕ ಮೌಲ್ಯಗಳ ಸಾಹಿತ್ಯ! ★

ಆದಿಯಲಿಂಗವ ಮೇದಿನಿಗೆ ತಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದನಯ್ಯಾ
ಸಂಗನ ಬಸವಣ್ಣನು

–ಪ್ರಭುದೇವ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಬಸವಣ್ಣನವರು ಕಟ್ಟಿದ ಕಲ್ಯಾಣರಾಜ್ಯ

—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ವಿಶ್ವಗುರು ಬಸವಣ್ಣನವರು ಬಹುಮುಖ ಪ್ರತಿಭೆಯ, ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವವುಳ್ಳ ಒಬ್ಬ ಕಾರಣಿಕ ಪುರುಷರು. ಹನ್ನೆರಡನೆಯ ಶತಮಾನದಲ್ಲಿ ಆಗಿ ಹೋದ ಬಸವಣ್ಣನವರು ಧಾರ್ಮಿಕ ದೃಷ್ಟಿಯಿಂದ ಒಬ್ಬ ಪ್ರವಾದಿ, ಮಂತ್ರಪುರುಷ, ಶಕಪುರುಷ, ಅನುಭಾವಿ, ದಾರ್ಶನಿಕ, ತತ್ತ್ವಜ್ಞಾನಿ, ಗಾನವಿಶಾರದ, ಜ್ಞಾನಯೋಗಿ, ಜೀವನ್ಮುಕ್ತ, ವಿಶ್ವಕುಟುಂಬಿ. ಸಾಮಾಜಿಕ ದೃಷ್ಟಿಯಿಂದ ಒಬ್ಬ ಸಮತಾವಾದಿ, ಶ್ರೇಷ್ಠ ಸಮಾಜ ಸುಧಾರಕ, ಉತ್ತಮ ಶಿಕ್ಷಣತಜ್ಞ, ಸ್ತ್ರೀಕುಲೋದ್ಧಾರಕ, ದಲಿತೋದ್ಧಾರಕ, ಮಾನವತಾವಾದಿ, ರಾಜಕಾರಣ ಮುತ್ಸದ್ದಿ, ಗಣಿತ ಶಾಸ್ತ್ರಜ್ಞ, ಲಿಪಿತಜ್ಞ, ಅರ್ಥಶಾಸ್ತ್ರಜ್ಞ, ತತ್ತ್ವನಿಷ್ಠ, ಸಾಹಿತ್ಯಸಾರ್ವಭೌಮ. ಹರಿವ ನದಿಗೆ ಮೈಯೆಲ್ಲ ಕಾಲು, ಉರಿಯುವ ಬೆಂಕಿಗೆ ಮೈಯೆಲ್ಲ ನಾಲಿಗೆ, ಬೀಸುವ ಗಾಳಿಗೆ ಮೈಯೆಲ್ಲ ಕೈ ಎನ್ನುವಂತೆ ಬಹುಮುಖದ ನಿಲುವು ವಿಶ್ವಗುರು ಬಸವಣ್ಣನವರದು.

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯ ಒಬ್ಬ ಶರಣನ
ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ
ಕೈಲಾಸವ ಮಾಡಿದನಾಗಿ,
ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು

ಶ್ರೀ ಅಲ್ಲಮ ಪ್ರಭುದೇವರ ವಚನದಲ್ಲಿ ಬಸವಣ್ಣನವರ ದಿವ್ಯ ಸಾಧನೆಯ ಸಂಕ್ಷಿಪ್ತ ವಿವರಣೆ ಇದೆ. ಈ ಮರ್ತ್ಯಲೋಕವು ಜಗತ್ಕರ್ತ ಸೃಷ್ಟಿಸಿದ ಸುಂದರವಾದ ಮಹಾಮನೆ. ದೇವರು ಉದಾತ್ತ ಉದ್ದೇಶದಿಂದಲೇ ಸೃಷ್ಟಿಸಿದನು. ಯಾವ ಭೇದ ಭಾವ, ಗಡಿ, ಬೇಲಿ ಇಲ್ಲದ ಸುಂದರ ಪೃಥ್ವಿಯನ್ನು, ಜೀವರಾಶಿಯನ್ನು ಸೃಷ್ಟಿಸಿದ. ಜಡ, ಸಸ್ಯ, ಪ್ರಾಣಿವರ್ಗ ಹೀಗೆ ಜೀವವು ಹಂತಹಂತವಾಗಿ ವಿಕಾಸ ಹೊಂದಿತು. ಸೃಷ್ಟಿಯ ಕಿರೀಟದಂತೆ ಮಾನವನ ಸೃಷ್ಟಿಯೂ ಆಯಿತು. ಆದರೆ ಈ ಮನುಷ್ಯ ಸ್ವಾರ್ಥಿಯಾದ ಶೋಷಕನಾದ, ಸೃಷ್ಟಿಕರ್ತನ ಉದಾತ್ತ ಉದ್ದೇಶವನ್ನೇ ಮರೆತ; ಮಾತ್ರವಲ್ಲ ಸೃಷ್ಟಿಕರ್ತನನ್ನೂ ಮರೆತ; ಆಗ ಕರ್ತನು ಕಳವಳಗೊಂಡು ಮರ್ತ್ಯದ, ಅದರ ಬಡ ಜೀವಿಗಳ ಉದ್ಧಾರಕ್ಕೆ ಒಂದು ವಿಶೇಷ ಚೈತನ್ಯವನ್ನು ಕಳಿಸಿದ. ಆತ ಬಂದು ಸಮಾಜದಲ್ಲಿ ಅಗಾಧ ಪರಿವರ್ತನೆ ತಂದ. ಮಾನವ ಸಮಾಜದಲ್ಲಿ ರೂಢಿಗೊಂಡಿದ್ದ ಅಸಮಾನತೆ, ಶೋಷಣೆ, ವಂಚನೆ ಮುಂತಾದುವುಗಳಿಂದ ಮನುಷ್ಯನು ತುಂಬಾ ದುಃಖಿತನಾಗಿದ್ದರೂ, "ಮರ್ತ್ಯವೆಂದರೆ ಇಷ್ಟೆ! ಇದರ ಲಕ್ಷಣವೇ ಅಸತ್ಯ; ಅಜ್ಞಾನ, ಅಂಧಕಾರ, ಅಸಮಾನತೆ ಇರುವವರೆಗೂ ಪಾಲಿಗೆ ಬಂದುದು ಪಂಚಾಮೃತ ಎಂದು ಅನುಭವಿಸಬೇಕು. ಸತ್ತ

ನಂತರ ಅತ್ಯಂತ ಸುಂದರವಾದ, ಯಾವ ಭೇದಗಳು, ಶೋಷಣೆ, ಹಸಿವು-ತೃಷೆ ಮುಂತಾದ ಕೋಟಲೆಗಳಿಲ್ಲದ ಕೈಲಾಸವು ಸಿಗುತ್ತದೆ. ಸತ್ತ ನಂತರ ಸಿಗುವ ಅದಕ್ಕಾಗಿ ಈಗ ತಾಳ್ಮೆಯಿಂದ ನೋವನ್ನು ಸಹಿಸಿಕೊಳ್ಳಬೇಕು" ಎಂದು ಸಮಾಧಾನ ಪಟ್ಟು ಕೊಳ್ಳುತ್ತ ವ್ಯವಸ್ಥೆಗೆ ಒಗ್ಗಿಕೊಂಡು ಬಿಟ್ಟಿದ್ದ ಈ ಪರಲೋಕವಾದಿಗಳ 'ಸಹನೆ', ವ್ಯವಸ್ಥೆಯೊಡನೆ ಮಾಡಿಕೊಂಡ ಹೊಂದಾಣಿಕೆ ನೋಡಿ ವಿಚಾರಶೀಲ ಬಸವಣ್ಣನವರು ದಿಗ್ಭ್ರಾಂತರಾದರು. ಮರ್ತ್ಯವನ್ನೇ ಸತ್ಯ, ಸದಾಚಾರ, ಸುಜ್ಞಾನದಿಂದ ಕೈಲಾಸವನ್ನಾಗಿ ಮಾಡಲು ಬರುತ್ತದೆ ಎಂಬ ಜಾಗೃತಿಯನ್ನು ಉಂಟುಮಾಡಲು ಯತ್ನಿಸಿದರು. ಸತ್ತ ನಂತರ ಸ್ವರ್ಗ, ಕೈಲಾಸ, ವೈಕುಂಠಗಳನ್ನು ಪಡೆಯುವುದು ಭ್ರಾಂತಿ ಮಾತ್ರ. ಇದು ಕಬ್ಬಿನ ದಂಟು ಬಿಟ್ಟು; ತುದಿಯ ಎಲೆಗಳನ್ನು ಜಗಿದಂತೆ.

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯ !
ಸತ್ತು ಬೆರಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ
ಕೂಡಲ ಸಂಗಮದೇವಾ.

ದೇವಲೋಕ-ಮರ್ತ್ಯಲೋಕವೆಂಬುವು ಬೇರೆ ಇಲ್ಲ. ಈ ಲೋಕದಲ್ಲೇ ಎಲ್ಲ ಲೋಕಗಳಿವೆ; ಸದಾಚಾರ, ಸಮಾನತೆ, ಸಂತೃಪ್ತಿ ಇದ್ದುದೇ ಶಿವಲೋಕ. ದಿವ್ಯ ಸಾಧನೆಯನ್ನು ಮಾಡಿದ ಶರಣನ ಕಾಯವೇ ಕೈಲಾಸ.

ಹೀಗೆ ಬಸವಣ್ಣನವರು ಜಗತ್ತಿಗೆ, ಜಗತ್ತಿನ ಜೀವನಕ್ಕೆ ಮಹತ್ವವನ್ನು ನೀಡಿ ವಾಸ್ತವವಾದವನ್ನು ಬೋಧೆ ಮಾಡಿದರು. ಮಾನವ ಶರೀರವನ್ನು ಸಹ ಮಿಥ್ಯೆ, ಬಾಧಕ ವಸ್ತು ಎಂದು ಭಾವಿಸದೆ, ದೇವನನ್ನೊಲಿಸಲು ಬಂದ ಪ್ರಸಾದ ಕಾಯ ಎಂದು ಭಾವಿಸಿದರು. ಜಗತ್ತು, ಜೀವನ, ದೇಹ, ಮುಂತಾದವು ಹೇಯವೆಂದು ಭಾವಿಸಿ, ಇವುಗಳನ್ನು ತಿರಸ್ಕರಿಸಿ ದೂರ ಹೋಗುವುದು ಅಧ್ಯಾತ್ಮವಲ್ಲ. ಇವುಗಳನ್ನು ದೇವಕೃಪೆ, ದಿವ್ಯಜ್ಞಾನ, ಮುಂತಾದುವುಗಳಿಂದ ದೈವೀಕರಣಗೊಳಿಸಿ ಸಾರ್ಥಕಗೊಳಿಸಬೇಕು ಎಂದು ಬೋಧಿಸಿದರು, ಇದರ ಅನುಷ್ಠಾನಕ್ಕೆ ಯತ್ನಿಸಿದರು. ಆದ್ದರಿಂದ ಸಿದ್ಧರಾಮೇಶ್ವರರು ಹೇಳುವರು, 'ಕಪಿಲಸಿದ್ಧ ಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣನು ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು' ಎಂಬುದಾಗಿ.

ಶಿವನ ಲೀಲಾರಂಗವು, ಅಪೂರ್ವ ಕಾರ್ಯವೂ ಆದ ಸೃಷ್ಟಿಯ ಕಿರೀಟದಂತಿರುವ ಮಾನವ ಸಮಾಜದ ಮಧ್ಯದಲ್ಲಿ ಕಲ್ಯಾಣ ರಾಜ್ಯವೊಂದನ್ನು ಕಟ್ಟುವ ಉದಾತ್ತ ಕಾರ್ಯವೊಂದನ್ನು ಬಸವಣ್ಣನವರು ಹಮ್ಮಿಕೊಂಡರು. ಜಾತಿ ವರ್ಣವರ್ಗ ರಹಿತ, ಧರ್ಮ ಸಹಿತ ಸಮತಾವಾದಿ ಸಮಾಜವೇ ಕಲ್ಯಾಣರಾಜ್ಯ. ಇದು ಕೇವಲ ಸುಖೀ ರಾಜ್ಯವಲ್ಲ, ಆದರ್ಶ ಸುಖೀ ರಾಜ್ಯದ ಕಲ್ಪನೆಯಲ್ಲಿ ಲೌಕಿಕ-ಸುಖ ಭೋಗಗಳಿಗೆ

ಮಹತ್ವವಿದ್ದರೆ ಕಲ್ಯಾಣ ರಾಜ್ಯದಲ್ಲಿ ಭೌತಿಕ-ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಮಧ್ಯೆ ಸಮತೋಲನ ಮಾಡುವ ಪ್ರಯತ್ನವಿದೆ. ಶ್ರೇಷ್ಠ ಚಿಂತಕ ಬಸವಣ್ಣನವರ ಕಲ್ಯಾಣ ರಾಜ್ಯದ ರೂಪುರೇಷೆ ಕುರಿತು ಜಗನ್ಮಾತಾ ಅಕ್ಕಮಹಾದೇವಿ ಹೀಗೆ ಹೇಳುತ್ತಾಳೆ :

ಕಲ್ಯಾಣವೆಂಬುದು ಇನ್ನಾರಿಗೂ ಹೋಗಬಾರದು, ಅಸಾಧ್ಯವಯ್ಯಾ!
ಆಸೆ-ಆಮಿಷವನಳಿದವರಿಗಲ್ಲದೆ ಕಲ್ಯಾಣದತ್ತ ಅಡಿ ಇಡಬಾರದು
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೋಗಬಾರದು
ನಾನೆಂಬುದ ಹರಿದವರಿಗಲ್ಲದೆ ಕಲ್ಯಾಣವ ಹೋಗಬಾರದು
ಒಳಗೆ ತಿಳಿದು ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ,
ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು.

ಇಲ್ಲಿ ಉನ್ನತ ತತ್ತ್ವಜ್ಞಾನಿ, ಅನುಭಾವಿ ಅಕ್ಕಮಹಾದೇವಿ 'ಕಲ್ಯಾಣ'ದ ಉದಾತ್ತ ಕಲ್ಪನೆ ನೀಡುತ್ತಾಳೆ. 'ಕಲ್ಯಾಣ' ಎಂದರೆ ಕೇವಲ ಒಂದು ಪಟ್ಟಣವೆ?, ಅದನ್ನು ಪ್ರವೇಶಿಸಲು ಇಷ್ಟೆಲ್ಲ ಅರ್ಹತೆಗಳಿರಬೇಕೆ? ಹಾಗಾದರೆ ಅಲ್ಲಿದ್ದ ಎಲ್ಲರಿಗೂ ಇಂತಹ ಅರ್ಹತೆಗಳಿದ್ದುವೇ ಎಂಬ ಸಂದೇಹವು ಬರಬಹುದು. 'ಕಲ್ಯಾಣ' ಎಂಬುದು ಒಂದು ತತ್ತ್ವವಾಚಕ ಪದ. ಇದು ಬಸವ ಧರ್ಮಕ್ಕೆ ಅನ್ವರ್ಥಕ ಪದವೆಂದರೂ ಉತ್ಪ್ರೇಕ್ಷೆಯಾಗದು. ಬಸವ ತತ್ತ್ವಾನುಯಾಯಿಯಾದವನಲ್ಲಿ ಯಾವ ಯಾವ ಲಕ್ಷಣಗಳಿರಬೇಕು ಎಂಬುದನ್ನು ಅಕ್ಕಮಹಾದೇವಿಯ ಈ ವಚನವು ವಿವರಿಸುತ್ತದೆ. ಕಲ್ಯಾಣಪದವು ದೈವೀ ರಾಜ್ಯ (Kingdom of God) ವನ್ನು ಸಂಕೇತಿಸುವ ಪದವೂ ಆಗಬಲ್ಲದು. ದೈವೀರಾಜ್ಯದ ಪ್ರಜೆಯೇ ಶರಣ. ಈ ಶರಣನಲ್ಲಿ ಯಾವಯಾವ ಲಕ್ಷಣಗಳಿರಬೇಕು?

ಆಸೆ-ಆಮಿಷವನಳಿದಿರಬೇಕು : ವ್ಯಕ್ತಿಯು ಆಸೆಗಳನ್ನು ಯಾವಾಗಲೂ ಒಂದು ನಿಯಂತ್ರಣದಲ್ಲಿ ಇಟ್ಟುಕೊಂಡಿರಬೇಕು. ಸರಳ, ಶುದ್ಧ ಜೀವನದ ಆದರ್ಶವು ಅಳವಡದ ಮನುಷ್ಯನಿಗೆ ಎಷ್ಟು ಸಂಪಾದನೆಯಾದರೂ ಸಮಾಧಾನವಿರದು. ಇದರಿಂದಾಗಿ ಕಾಂಚನಕ್ಕೆ ವೇಳೆಯನ್ನು ಕೊಡುತ್ತಾ ಲಿಂಗದೇವನಿಗಾಗಲೀ, ಅಥವಾ ಉದಾತ್ತ ಚಿಂತನೆಗಾಗಲೀ ವೇಳೆಯನ್ನೇ ಕೊಡುವುದಿಲ್ಲ. ಸೀಮಿತವಾದ, ಜೀವನದ ಅತ್ಯಗತ್ಯ ಅಂಶಗಳನ್ನು ಪೂರೈಸುವಷ್ಟು ಆಸೆಯನ್ನು ಇರಿಸಿಕೊಳ್ಳಬೇಕು. ಈ ಆಸೆಯೂ ಕೂಡ ವ್ಯಷ್ಟಿಗತವಾಗಿರದೆ ಸಮಷ್ಟಿಗತವಾಗಿರಬೇಕು. ಮನಸ್ಸು ತನ್ನ ಸ್ವಭಾವಕ್ಕನುಗುಣವಾಗಿ ಹೊರಹೊಮ್ಮಿಸುವ ಆಸೆಯ ಒತ್ತಡಕ್ಕಾಗಲಿ, ಹೊರಗಿನ ಸಮಾಜದಿಂದ ಎರಗುವ ಆಮಿಷದ ಸೆಳವಿನಲ್ಲಾಗಲೀ ವ್ಯಕ್ತಿಯು ಸಿಕ್ಕಿಕೊಳ್ಳಬಾರದು.

ಒಳಹೊರಗು ಶುದ್ಧವಾಗಬೇಕು : ಒಳಗು-ಹೊರಗು ಇದನ್ನು ಅನೇಕ ರೀತಿಯಲ್ಲಿ ಅನ್ವಯಿಸಬಹುದು. ನಡೆ-ನುಡಿ, ನಂಬಿಕೆ-ಹೇಳಿಕೆ, ಅಂತರಂಗ-ಬಹಿರಂಗಗಳಲ್ಲಿ ಹೊಂದಿಕೆ ಇರಬೇಕೇ ವಿನಾ ದ್ವಂದ್ವವಲ್ಲ. ಬಾಯಿಯಲ್ಲಿ ರಂಜನೀಯವಾಗಿ

ಸಮತಾವಾದವನ್ನು ಹೇಳಿ ನಂಬಿಕೆಯಲ್ಲಿ ಜಾತಿವಾದಿಯಾದರೆ ಹೇಗೆ? ನುಡಿಯಲ್ಲಿ ಆದರ್ಶವಾದಿಯಾಗಿ ನಡೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದರೆ ಹೇಗೆ? ಅದಕ್ಕೇ ಬಸವಣ್ಣನವರು ಹೇಳುವರು : 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವೇ ಘಟಸರ್ಪವಯ್ಯ.' ಎಂಬುದಾಗಿ.

ನಾನೆಂಬುದ ಹರಿಯಬೇಕು : ಕಲ್ಯಾಣ ರಾಜ್ಯದ ಪ್ರಜೆಯಾದ ಶರಣನು ಅಹಂಭಾವಿಯಾಗುವಂತಿಲ್ಲ, ಶಿವಭಾವದಲ್ಲಿರಬೇಕು, ದಾಸೋಹಂಭಾವಿಯಾಗಬೇಕು. ತನ್ನನ್ನೇ ಕೇಂದ್ರವಾಗಿಟ್ಟುಕೊಂಡು, ತನ್ನ ಸುಖವನ್ನೇ ಎಲ್ಲರ ಸುಖವೆಂದು ಭಾವಿಸಿದಾಗ ಸ್ವಾರ್ಥಪರವಾದ, ಕಿತ್ತಾಟದ ಸಮಾಜವು ರಚನೆಯಾಗುತ್ತದೆ. ಇತರರ ಲೇಸನ್ನೇ ಗುರಿಯಾಗಿಟ್ಟುಕೊಂಡು, ದೇವನನ್ನು ಕೇಂದ್ರವಾಗಿ ಇಟ್ಟುಕೊಂಡಾಗ ನಿಸ್ವಾರ್ಥ ಪರವಾದ, ಪರಸ್ಪರರ ಸಾಮರಸ್ಯದಿಂದ ಕೂಡಿದ ಶರಣ ಸಮಾಜವು ರೂಪುಗೊಳ್ಳುತ್ತದೆ. ಇದನ್ನು ತಮ್ಮೊಂದು ವಚನದಲ್ಲಿ ಬಸವಣ್ಣನವರು ಸ್ಪಷ್ಟವಾಗಿ ಹೇಳುತ್ತಾರೆ :

ಜನ್ಮಜನ್ಮಕ್ಕೆ ಹೋಗಲೀಯದೆ,
ಸೋಹಂ ಎಂದೆನಿಸದೆ,
ದಾಸೋಹಂ ಎಂದೆನಿಸಯ್ಯಾ,
ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯ
ಕೂಡಲ ಸಂಗಮದೇವಾ.

'ಸೋಹಂ' ಎಂಬುದು ಅಂತರಂಗದ ಗರ್ವವನ್ನು ತೋರಿಸಿದರೆ, ದಾಸೋಹಂ ಎಂಬುದು ದೇವನಲ್ಲಿ ಶರಣಾಗತಿಯನ್ನು ತೋರಿಸುತ್ತದೆ. ಈ ವಿನಯದಿಂದ ದೇವನ ಕೃಪೆ ಅಂದರೆ ಲಿಂಗಪ್ರಸಾದ ಮತ್ತು ಜಂಗಮ ಪ್ರಸಾದ ಅಂದರೆ ಸಮಾಜದ ಪ್ರೀತಿ ಎರಡೂ ಲಭ್ಯವಾಗುತ್ತವೆ. ಹೀಗೆ ಕಲ್ಯಾಣ ರಾಜ್ಯದ ಪ್ರಜೆ ನಾನೆಂಬುದನ್ನು ತೊರೆದು, ಸಮಷ್ಟಿಗೆ ಶರಣಾಗಬೇಕಾಗುತ್ತದೆ.

ಮಾರ್ಕ್ಸ್‌ನ ಸಾಮ್ಯವಾದದಲ್ಲಿಯೂ ವ್ಯಕ್ತಿಯು ಸಮಷ್ಟಿಗೆ ಶರಣಾಗುವ ಸಿದ್ಧಾಂತ ಕಾಣುತ್ತದೆಯಾದರೂ, ಅಲ್ಲಿ ವ್ಯಕ್ತಿ ತನ್ನ ವೈಶಿಷ್ಟ್ಯ–ವ್ಯಕ್ತಿತ್ವವನ್ನು ಕಡೆಗಣಿಸಿ, ಸಮಷ್ಟಿಗೆ ಶರಣಾಗುವನು. ಬಸವಣ್ಣನವರ ಆಧ್ಯಾತ್ಮಿಕ ಸಮತಾವಾದದಲ್ಲಿ ವ್ಯಕ್ತಿಯ ಪ್ರತಿಭೆ ಕಡೆಗಣಿಸಲ್ಪಡದೆಯೇ, ಅವನು ವಿಚಾರ ಸ್ವಾತಂತ್ರ್ಯವನ್ನು ಉಳಿಸಿಕೊಂಡು, ಸ್ವಯಂ ಪ್ರೇರಣೆಯಿಂದ ಲಿಂಗಕ್ಕೆ ಅಂದರೆ ದೇವರಿಗೆ, ಜಂಗಮಕ್ಕೆ ಅಂದರೆ ಸಮಾಜಕ್ಕೆ ಶರಣಾಗುವನು.

ಒಳಗೆ ತಿಳಿದು, ಚನ್ನಮಲ್ಲಿಕಾರ್ಜುನಂಗೊಲಿದು : ಎಂದು ಅಕ್ಕಮಹಾದೇವಿ ಹೇಳುವಲ್ಲಿ ಬಸವಣ್ಣನವರು ಕಟ್ಟಿದ ಕಲ್ಯಾಣರಾಜ್ಯದ ಅಡಿಪಾಯವು ಒಳಗನ್ನು ತಿಳಿಯುವ ಮತ್ತು ದೇವರಿಗೆ ಒಲಿಯುವ ಆಧ್ಯಾತ್ಮಿಕ ಮೌಲ್ಯಗಳ ಮೇಲೆ

ಆಧಾರಿತವಾದುದು ಎಂದು ತಿಳಿಯುತ್ತದೆ. ವ್ಯಕ್ತಿಯ ಅಂತರಂಗ ಶುದ್ಧಿಯಾಗದ ಹೊರತು ಆದರ್ಶ ಸಮಾಜವನ್ನು ಕಟ್ಟಲು ಸಾಧ್ಯವೇ ಇಲ್ಲ ಎಂಬುದೇ ಬಸವಣ್ಣನವರ ತತ್ತ್ವದ ತಿರುಳು. ಒಂದು ಬೃಹತ್ ನೀರಿನ ಟ್ಯಾಂಕ್ ಇದೆ ಎಂದುಕೊಳ್ಳೋಣ. ಅದ ರಲ್ಲಿ ಕೊಳಕು ನೀರನ್ನು ತುಂಬಿ, ಕೇವಲ ನಲ್ಲಿಯನ್ನು ನಾವು ಬದಲು ಮಾಡಿದರೆ ನೀರಿನ ಗುಣಮಟ್ಟ ಬದಲಾಗುವುದೇ ? ಹಾಗೆಯೇ ಆದರ್ಶವಂತ ವ್ಯಕ್ತಿಗಳನ್ನು, ಜನಾಂಗ ವನ್ನು ರೂಪಿಸದೆ ಕೇವಲ ಪಕ್ಷಗಳು, ಸಿದ್ಧಾಂತಗಳು ಬದಲಾದರೇನು ಪ್ರಯೋಜನ? ಆದ್ದರಿಂದ ಕಲ್ಯಾಣ ರಾಜ್ಯದ ಪ್ರಜೆ ' ಒಳಗೆ ತಿಳಿದವನು ' ಮತ್ತು ದೇವನಲ್ಲಿ ವಿಶ್ವಾಸವಿರಿಸಿದವನೂ ಆಗಿರಬೇಕು.

"ಉಭಯ ಲಜ್ಜೆಯಳಿದೆನಾಗಿ" ಎಂದು ಅಕ್ಕಮಹಾದೇವಿ ಹೇಳುವಲ್ಲಿ ಕಲ್ಯಾಣರಾಜ್ಯದಲ್ಲಿ ಸ್ತ್ರೀ-ಪುರುಷರಲ್ಲಿ ತಾರತಮ್ಯವಿಲ್ಲ ಎಂಬುದು ಧ್ವನಿತವಾಗುತ್ತದೆ. ಪುರುಷನಲ್ಲಿ ತಾನು ಆಳಲು ಅರ್ಹ ಎಂಬ ಅಹಂ ತುಂಬಿದ್ದರೆ, ಸ್ತ್ರೀಯಲ್ಲಿ 'ತಾನು ಸ್ತ್ರೀ, ತನಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ, ಕೀಳು; ಆಳಿಸಿಕೊಳ್ಳಲು ಅರ್ಹಳು' ಎಂಬ ಕೀಳ ರಿಮೆ ತುಂಬಿದ್ದರೆ, ಆಗ ಅವರು ದೈವೀರಾಜ್ಯವನ್ನು ಹೋಗಲು ಅನರ್ಹರು. ಮೇಲ ರಿಮೆ-ಕೀಳರಿಮೆ ದೇಹೋಹಂ ಭಾವವಿದ್ದಾಗ ಮಾತ್ರ ಸಾಧ್ಯ. ಶಿವಭಾವ ಆಳವಟ್ಟಾಗ ಅದಿರದು.

ವಿಶ್ವಗುರು ಬಸವಣ್ಣನವರು ಕೇವಲ ತತ್ತ್ವಜ್ಞಾನಿಯಾಗಿ ಆದರ್ಶ ಕಲ್ಯಾಣ ರಾಜ್ಯ ಒಂದರ ಕಲ್ಪನೆಯನ್ನು ಕೊಟ್ಟುಬಿಡದೆ, ಪ್ರಯೋಗಶೀಲ ಸಮಾಜ ನಿರ್ಮಾಪ ಕರು, ಸುಧಾರಕರು ಆದರು. ಹುಟ್ಟಿನಿಂದಲೇ ವ್ಯಕ್ತಿಯನ್ನು ಮೇಲು-ಕೀಳು ಎಂದು ವಿಭಜಿಸುವ ವರ್ಣವಾದ ಅಥವಾ ಜಾತಿವಾದ, ಉದ್ಯೋಗದಿಂದ ಶ್ರೇಷ್ಠ-ಕನಿಷ್ಠ ಎಂದು ವಿಭಜಿಸುವ ವರ್ಗವಾದ, ಸಿರಿವಂತ-ಬಡವ ಎಂದು ವಿಂಗಡಿಸುವ ಅಂತಸ್ತು ಬೇಧ, ಸ್ತ್ರೀ-ಪುರುಷರಲ್ಲಿ ತಾರತಮಭಾವ ತೋರುವ ಲಿಂಗಬೇಧ ಇವುಗಳೆಲ್ಲವನ್ನು ನಿರಾಕರಿಸಿ ಸಮಾನತೆಯಿಂದ ಕೂಡಿದ ಸಮಾಜವೊಂದನ್ನು ಬಸವಣ್ಣನವರು ರೂಪಿಸಿ ದರು. ಅನುಭವ ಮಂಟಪ ಎಂಬ ಅಭೂತಪೂರ್ವ ಸಂಸ್ಥೆಯು, ಜಗತ್ತಿನ ಪ್ರಪ್ರಥಮ ಸಂಸತ್ ಆಗಿ ಸಮತಾವಾದವನ್ನು ಬಿತ್ತರಿಸುವ ವೇದಿಕೆಯಾಯಿತು. ಪ್ರಜಾಪ್ರಭುತ್ವದ ಕಲ್ಪನೆಯಿನ್ನೂ ಇನ್ನಿತರ ದೇಶ, ಜನಾಂಗಗಳಲ್ಲಿ ಸುಳಿಯದಿರುವಾಗ ತನ್ನ ಅನುಯಾಯಿ ಗಳಿಗೆ ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಅಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆಚಾರ ಸ್ವಾತಂತ್ರ್ಯಗಳನ್ನು ನೀಡಿ ಪ್ರಜಾಪ್ರಭುತ್ವದ ಕಲ್ಪನೆಗೆ ಬಸವಣ್ಣನ ವರು ನಾಂದಿ ಹಾಡಿದರು. ಇದರ ಪ್ರತಿಫಲವಾಗಿ ವಚನ ವಾಙ್ಮಯವು ಉದಿಸಿತು. ವಚನ ಶಾಸ್ತ್ರವು ಜನಜಾಗೃತಿಯ ಮಾಧ್ಯಮವೂ ಆಯಿತು. ಪುನಃ ಫಲವೂ ಆಯಿತು. ಅದನ್ನು ಬಹಳ ಮಾರ್ಮಿಕವಾಗಿ ಜನಪದ ಕವಿಗಳು ಹೇಳುತ್ತಾರೆ :

ಬಸವ ಸಾರಿದನಂದು ಕುಶಲದಲಿ ವಚನಗಳ
ಮಸುಕಿರುಳು ಹರಿದು ನಸುಕಾತು। ಜಗದೊಳಗೆ
ಹೊಸಮತದ ಸೂರ್ಯನುದಿಸಿದನು ॥

ಈ ವಚನ ವಾಙ್ಮಯಕ್ಕೆ, ಅದು ಪ್ರತಿಪಾದಿಸಿದ ತತ್ತ್ವ-ಸಿದ್ಧಾಂತಗಳಿಗೆ ಮಾರು ಹೋದ ಜನರು ನಾಡಿನಾದ್ಯಂತದಿಂದೆಲ್ಲ ಕಲ್ಯಾಣಕ್ಕೆ ಧಾವಿಸಿದರು.

ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ
ಮೂಸಿ ಬಂದಂತೆ ಗುಂಗಿಗಳು। ಹೂಗಳಿಗೆ
ರಾಸಿ ಜನ ಬಂತು ಮಂಟಪಕೆ ॥

ಆನಂದನಾಮ ಸಂವತ್ಸರದ ವೈಶಾಖ ಮಾಸದಲ್ಲಿ ರೋಹಿಣಿ ನಕ್ಷತ್ರದಲ್ಲಿ ಅಂದರೆ 1106ರಲ್ಲಿ ಬಾಗೇವಾಡಿಯಲ್ಲಿ ಹುಟ್ಟಿದ ಬಸವಣ್ಣನವರು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿಯಂದು ಬಯಲಾದರು. 62 ವರ್ಷ 3 ತಿಂಗಳು 2 ದಿವಸಗಳ ಕಾಲ ಮೃಣ್ಮಯ ಶರೀರಧಾರಿಯಾಗಿದ್ದ ಬಸವಣ್ಣನವರು ಬಿಜಾಪುರ ಜಿಲ್ಲೆಯ ಕೂಡಲ ಸಂಗಮದಲ್ಲಿ ಉರಿಯುಂಡ ಕರ್ಪೂರದಂತೆ ದೇವನಲ್ಲಿ ಒಂದಾದರು. ಕಾರ್ಯಕ್ಷೇತ್ರವನ್ನಾಗಿ ಅವರು ಆರಿಸಿಕೊಂಡ ಕಲ್ಯಾಣವು ಪ್ರಣತಿಯಾಗಿ, ಭಕ್ತಿ ರಸವೇ ತೈಲವಾಗಿ, ಸದಾಚಾರದ ಬತ್ತಿಯನ್ನು ಹೊಂದಲು, ತಾವೇ ಜ್ಯೋತಿಯಾದರು, ಅಲ್ಲಿಂದ ಶಿವನ ಪ್ರಕಾಶವು ತೊಳಗಿ ಬೆಳಗಿತು. ಅದಕ್ಕೆಂದೇ ಆರ್ಥರ್ ಮೈಲ್ಸ್ ಎಂಬ ತತ್ತ್ವಜ್ಞಾನಿ ಹೇಳುತ್ತಾನೆ, Whatever legend may say about Basava, the fact is fully clear that he is the first Indian Free Thinker. He can be called the Martin Luther of India.

1918 ನೆಯ ಇಸವಿಯಲ್ಲಿ ಬಸವ ಜಯಂತಿಯಂದು ಸಂಪಾದಕೀಯವನ್ನು ಬರೆದ ಮುಂಬಯಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಹೀಗೆ ಹೇಳುತ್ತದೆ.

"It was the distinctive featuer of Basava's mission, while illustrious religious and social reformers in India, before him had laid emphasis on one or other items of social and religious reform either subordinating or ignoring them altogether.

Basava sketched and boldly tried to work out a large and comprehensive programme of social reform with the elevation and independence of womanwood as its guiding point.

The present day social reformer in India is but speaking the language and seeking to enforce the mind of Basava."

ಬೆಳಗಾಂವಿಯ 39 ನೆಯ ಕಾಂಗ್ರೆಸ್ ಅಧಿವೇಶನಕ್ಕೆ 1924ರಲ್ಲಿ ಆಗಮಿಸಿದ ರಾಷ್ಟ್ರಪಿತ ಗಾಂಧೀಜಿಯವರು ಹೀಗೆ ಹೇಳುತ್ತಾರೆ :

"ಹಿಂದಿನ ಕಾಲದಲ್ಲಿ ಎಂಟುನೂರು ವರ್ಷಗಳ ಆಚೆ ಬಸವೇಶ್ವರರು ಯಾವ ತತ್ತ್ವವನ್ನು ಆಚರಿಸಿ ಉಪದೇಶಿಸಿದರೋ ಅಷ್ಟೆಲ್ಲ ತತ್ತ್ವಗಳನ್ನು ನನಗೆ ಆಚರಿಸಲಿಕ್ಕೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ತ್ವಗಳನ್ನು ನಾನು ಆಚರಿಸುತ್ತಿದ್ದೇನೆ. ನಾನು

ಸಾಧಕ ಸ್ಥಿತಿಯಲ್ಲಿದ್ದೇನೆ; ಸಿದ್ಧನಲ್ಲ. ಆದರೆ ಬಸವಣ್ಣನವರು ಹೇಳಿದ ತತ್ತ್ವಗಳನ್ನೆಲ್ಲ ಆಚರಣೆಯಲ್ಲಿ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾ ನಿವಾರಣೆ, ಕಾಯಕ ತತ್ತ್ವ ಬಲು ಮುಖ್ಯವಾದವು. ಯಾವುದೇ ಪ್ರಕಾರದ ಜಾತಿಭೇದ ಅವರಲ್ಲಿ ಕಂಡು ಬರುವುದಿಲ್ಲ. ಈ ಕಾಲದಲ್ಲಿ ಅವರು ಇರುತ್ತಿದ್ದರೆ ಜಗತ್ತಿಗೇ ಪೂಜ್ಯ ವ್ಯಕ್ತಿಯಾಗಿ ಪರಿಣಮಿಸುತ್ತಿದ್ದರು. ಆ ಧರ್ಮಾನುಯಾಯಿಗಳಾದ ನೀವು ಅವರು ಉಪದೇಶಿಸಿದ ತತ್ತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತ ಭೂಮಿಯನ್ನಷ್ಟೇ ಏಕೆ ಜಗತ್ತನ್ನೇ ಉದ್ಧಾರ ಮಾಡಬಲ್ಲಿರಿ."

ವಿಶ್ವಗುರು ಬಸವಣ್ಣನವರು ಹೇಳಿದಂತೆ, "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ; ಇಲ್ಲಿ ನಾವು ಸಲ್ಲುವ ನಾಣ್ಯಗಳಾಗಬೇಕು." 'ಇವನಾರವ ಇವನಾರವ ಇವನಾರವ' ಎಂದು ಜಾತಿ, ವರ್ಗ, ಅಂತಸ್ತು ಭೇದ ಹಿಡಿದು ಯಾರನ್ನೂ ತಿರಸ್ಕರಿಸದೆ, 'ಇವ ನಮ್ಮವ, ಇವನಮ್ಮವ. ಇವನಮ್ಮವ' ಎಂದು ಎಲ್ಲರನ್ನೂ ಆದರಿಸಬೇಕು, ಇಂಬಿಟ್ಟುಕೊಳ್ಳಬೇಕು. ಆಗ ಮಾತ್ರ ನಾವು ಕರ್ತನ ಮಹಾಮನೆಯ ಮಕ್ಕಳು, ವಿಶ್ವಕುಟುಂಬಿಗಳೂ ಆಗಲು ಸಾಧ್ಯ ! ★

(ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು ಗುಲಬರ್ಗಾ ಆಕಾಶವಾಣಿಯಿಂದ ದಿ. 15-1-91 ರಂದು ರಾತ್ರಿ 9-16ಕ್ಕೆ ಮಾಡಿದ ಭಾಷಣದ ವರದಿ.)

ಕಲ್ಯಾಣ ಕಿರಣ ಮಾಸಪತ್ರಿಕೆಗೆ 300 ರೂ ಕೊಟ್ಟು ಆಜೀವ ಸದಸ್ಯರಾದವರ ಯಾದಿ.

(ಏಪ್ರಿಲ್- 1990 ರ ಸಂಚಿಕೆಯಿಂದ ಮುಂದುವರಿದುದು)

ಚಂದಾ ಸಂಖ್ಯೆ	ಹೆಸರು	ಊರು.
	ಶರಣರುಗಳಾದ :	
3537.	ಎಂ. ಗಂಗಮ್ಮ ಮಲಿಯಪ್ಪ	ಹೊಸಪೇಟೆ
3538.	ಎನ್. ಬಿ. ಅಕ್ಕಮಹಾದೇವಿ	ನಾಗರಘಟ್ಟ(ತಾ-ತಿಪಟೂರು)
3539.	ಜಿ. ಪಿ. ಕುಲಕರ್ಣಿ	ಶಿವಾಜಿನಗರ (ಮಹಾರಾಷ್ಟ್ರ)
3540.	ವೀರಪ್ಪ ದೇವೇಂದ್ರಪ್ಪ ಮುಮ್ಮಿಗಟ್ಟಿ	ಧಾರವಾಡ.
3541.	ಆರ್. ಶಿವಣ್ಣ	ಮಲ್ಲೇಶ್ವರಂ
3542.	ವಿ. ಐ. ನಿಡಗುಂಡಿ	,,
3543.	ಎ. ಷಡಕ್ಷರಪ್ಪ	ನಾಯಕನ ಹಟ್ಟಿ
3544.	ಕಲ್ಲಪ್ಪ ಅಪ್ಪಾರಾವ್ ಮೆಂಗಾ	ಬೀದರ
3545.	ಸಿದ್ರಾಮಪ್ಪ. ಕೆ. ಸಿರಗಾಪುರ	ಗುಲಬರ್ಗ
3546.	ಶಿವರಾಜ ಪಾಟೀಲ	,,
3547.	ವಿಜಯಕುಮಾರ ನಾಗಮೂರಪಳ್ಳಿ	ಬೀದರ
3548.	ಎಂ. ಸಹದೇವಪ್ಪ	ಬೀದರ
3549.	ಜ್ಞಾನ ಚಂದ್ರ	,,
3550.	ಕರಿಬಸಪ್ಪ ಮಲ್ಲಶಟ್ಟಪ್ಪ ವೈರಾಗಿ	ಹುಡಗಿ (ಬೀದರ)
3551.	ವಿಶ್ವನಾಥ ಬಲ್ಲೂರ	ಬೀದರ
3552.	ಮಲ್ಲಯ್ಯಸ್ವಾಮಿ ವೀರಭದ್ರಯ್ಯಸ್ವಾಮಿ	ಬೀದರ
3553.	ಎಸ್. ಜಿ. ಪಸಾರ	ಸುಲ್ಫೇಪೇಟ
3554.	ಶಿವರಾಜಪ್ಪ ಹಣಮಂತಪ್ಪ ಕೆಂಚಾ	ಬೀದರ
3555.	ಶಿವಲಿಂಗಪ್ಪ ಹಳ್ಳಿಖೇಡ	ರಂಜೋಲಖೇಣಿ
3556.	ಶಿವರಾಜ ಶರಣಪ್ಪ ಶಟ್ಟಿ	ರಂಜೋಲಖೇಣಿ
3557.	ಶ್ರೀ ಚನ್ನವೀರ ಶಿವಾಚಾರ್ಯರು	ಹಾರಕೊಡ
3558.	ಸೋಮನಾಥ ಬಿರಾದಾರ	ಸರೋಜಿನಿನಗರ (ಹೊಸದೆಹಲಿ)
3559.	ಶಿವಮೂರ್ತಿ ಕಂತಿಮಠ	ಬೀದರ
3560.	ಶರಣಬಸಪ್ಪ ಪಾಟೀಲ	ಬಸವನಗರ
3561.	ಡಾ॥ ಚಂದ್ರುಶೆಟ್ಟಿ ಸಿದ್ಧೇಶ್ವರ	ನಂದಗಾಂವ

ಚಂದಾ ಸಂಖ್ಯೆ	ಹೆಸರು	ಊರು
	ಶರಣರುಗಳಾದ ;	
3562.	ಸದಾಶಿವ ಎಸ್. ಜನಗೌಡರು	ಧಾರವಾಡ
3563.	ತಿಮ್ಮನಗೌಡ್ರು ಪೋಲೀಸ್ ಪಾಟೀಲ	ಕಾಚಾಪುರ
3564.	ಸಿ. ಎ. ಚಿಕ್ಕಮುನಿಯಪ್ಪ ಮತ್ತು ಮಕ್ಕಳು	ನಗರ್ತಪೇಟೆ
3565.	ಬಿ. ಜೆ. ದೇವರಾಜ	ಬಳ್ಳಗೇರಿ(ತುಮಕೂರು)
3566.	ಚನ್ನಮ್ಮ ಡಾ॥ ಕೆ. ಚಂಗಲಪ್ಪ	ಪನ್ರೂಟಿ
3567.	ಹೆಚ್. ಶಾರದಮ್ಮ	ದೊಡ್ಡಬಳ್ಳಾಪುರ
3568.	ಎ. ಜ್ಞಾನಮೂರ್ತಿ	ಸುಬ್ರಮಣ್ಯಪುರ
3569.	ಮಲ್ಲಿನಾಥ ಮೊಳಜಿ	ಬಾಪೂಜಿನಗರ
3570.	ಆರ್. ಎಸ್. ಸ್ವಾಮಿ	ತಳಗುಪ್ಪ
3571.	ಬಿ. ಹೆಚ್. ಪಂಚಾಕ್ಷರಯ್ಯ	ಮಧುಗಿರಿ
3572.	ಮಲ್ಲಪ್ಪ ಈರಪ್ಪ ಬೆಟಗೇರಿ	ಬೈಲಹೊಂಗಲ
3573.	ಡಿ. ಟಿ. ಶಿವಮೂರ್ತಿ	ಚಳ್ಳಕೆರೆ
3574.	ಎಸ್. ಎಂ. ಉಷಾ	ಚಳ್ಳಕೆರೆ
3575.	ಸಿ. ವಿ. ಶ್ರೀನಿವಾಸಲು	ಗಾಂಧಿನಗರ
3576.	ಶಂಕರ ಹೆಬಸೂರು	ಧಾರವಾಡ
3577.	ಮೇಜರ್ ಬಿ. ಎ. ಪಾಟೀಲ	ಪುಣೆ(DEHU)
3578.	ಎ. ಸಿ. ಪಟ್ಟಣದ	ಬದಾಮಿ
3579.	ನಾರಾಯಣಪ್ಪ ವೆಂಕಪ್ಪ ಬಳುಲದ	ಬದಾಮಿ
3580.	ಪ್ರಿನ್ಸಿಪಾಲರು (S. G. M. ಕಲ್ಯಾಣ ಶಟ್ಟಿ P. U. ಕಾಲೇಜ್)	ಬದಾಮಿ
3581.	ಆರ್. ಸುಬ್ರಮಣ್ಯಂ ತಿರುಮಲ ವೆಂಕಟೇಶ್ವರ ಅಂಡ್ ಕೋ	ಚಳ್ಳಕೆರೆ
3582.	ಡಿ. ಎನ್. ನಾಗಲಿಂಗಪ್ಪ	ಗಾಂಧಿನಗರ
3583.	ಬಿ. ಎಂ. ನಿಶಾನದಾರ	ಛೇರ್ಡಿ
3584.	ಕಾರ್ಯಾಧ್ಯಕ್ಷರು, ಶಿವಶರಣ ಕೇತೇಶ್ವರ ಬಳಗ	ಬಳ್ಳಾರಿ
3585.	ನಿಜಲಿಂಗಪ್ಪ ತಗಾರೆ	ಬೀದರ
3586.	ಎ. ಎಸ್. ಮಂಜುಳಮ್ಮ	ಜಯನಗರ
3587.	ಜಿ. ಬಸಪ್ಪ	ರಾಜಾಜಿನಗರ
3588.	ಸಿದ್ಧಪ್ಪ ಲಗಮಪ್ಪ ಕುಂಬಾರ	ಯಮಕನಮರಡಿ
3589.	ಸಂಗಮೇಶ. ರೇ. ಗಣಾಚಾರಿ	ಚಿಂಚೋಳಿ
3590.	ಸುಭಾಷ್ ಚನ್ನಪ್ಪ ಕೋರಿ	ರಂಜಣಗೆ

ಚಂದಾ ಸಂಖ್ಯೆ	ಹೆಸರು	ಊರು
	ಶರಣರುಗಳಾದ :	
3591.	ಕೆ. ಸಿದ್ಧರಾಮಪ್ಪ	ಆರಬಗಟ್ಟ
3592.	ಹೆಚ್. ಎಸ್. ನೀಲಕಂಠಮೂರ್ತಿ	ಹಿರಿಯೂರು
3593.	ಎಂ. ಎಸ್. ಮಂಜುಳ ವೀರಭದ್ರಪ್ಪ	ತುದೀಪೇಟೆ
3594.	ಹಾಲು ಉತ್ಪಾದಕರ ಸಹಕಾರ ಸಂಘ	ಮುಳ್ಳೇನಹಳ್ಳಿ
3595.	ಸಿ. ಬಿ. ಮಲ್ಲೇಗೌಡ	ಚಿಕ್ಕಮಗಳೂರು
3596.	ಬಸವಪ್ರಭು ಡಾ॥ ಸೋಲಾಪುರ	ಕಮಲನಗರ
3597.	ಆರ್. ಬಿ. ಗಾಣೇಗೇರ್	ಹಾವೇರಿಪೇಟೆ
3598.	ವಿ. ಎಸ್. ಕಂಬಳಿ	ರಾಯಚೂರು
3599.	ಅಕ್ಕಮಹಾದೇವಿ ಬಸವಲಿಂಗಪ್ಪ ಮಾಮಲೆ ಪಟ್ಟಣಶೆಟ್ಟಿ	ಬಂಕಾಪುರ
3600.	ಬಿ. ರುದ್ರಪ್ಪ ಮತ್ತು ಮಕ್ಕಳು	ಅಲಸೂರು
3601.	ಎಂ. ಸಿ. ಸೀತಾರಾಮಶೆಟ್ಟರು	ತುಮಕೂರು
3602.	ಆಧುನಿಕ ಹರಳಯ್ಯನವರು	ಮಿಣಜಿಗಿ
3603.	ಕೆ. ರಮಣನ್‌ರಾವ್	ಕಂಕನಾಡಿ
3604.	ಬಸವರಾಜಪ್ಪ ನಾಡಗೌಡ ಗಣಜಲಿ	ಮುಂಡರಗಿ
3605.	ಎಸ್. ಎಂ. ತೋಟದ	ಧಾರವಾಡ
3606.	ಸಂಗೀತಾ ಕೊಟಗಿ	ಚಿಕ್ಕಮಗಳೂರು
3607.	ಶಿ. ಜ. ಚನ್ನಪ್ಪಗೌಡರು	ಸಪ್ಪಾಪುರ
3608.	ಗವಿಸಿದ್ದಪ್ಪ ಸಿದ್ರಾಮಪ್ಪ ಕುದುರೆಮೋತಿ	ಕೊಪ್ಪಳ
3609.	ಬಿ. ಎ. ಕಡಕೋಳ	ಧಾರವಾಡ
3610.	ರತ್ನಮ್ಮ ಮಲ್ಲಿಕಾರ್ಜುನಪ್ಪ ಸಣ್ಣಗೌಡ	ಶಾಮನೂರು
3611.	ಸರ್ಪಭೂಷಣ ಹಿರೇಮಠ	ರಾಣೇಬೆನ್ನೂರು
3612.	ಶಿವಯೋಗಿ ಎಸ್. ಹಿರೇಮಠ	ರಾಣೇಬೆನ್ನೂರು
3613.	ಶಿವಪ್ಪ ಬಸಪ್ಪ ಬಣಗಾರ	ಸಿದ್ಧೇಶ್ವರನಗರ
3614.	ಎಂ. ಸಿ. ಕಾಕೋಳ	ರಾಣೇಬೆನ್ನೂರು
3615.	ಶಕುಂತಲಾ ಶ್ರೀಕಂಠಪ್ಪ ಕೋರಿಶಟ್ಟರು	ರಾಣೇಬೆನ್ನೂರು
3616.	ಡಾ॥ ಸಿ. ಎಸ್. ಪುರಾಣಮಠ	ರಾಣೇಬೆನ್ನೂರು
3617.	ಎಸ್. ಎಲ್. ಮೊಕಾಶಿ	ಪುಣೆ
3618.	ಎಸ್. ರಾಜಮ್ಮ	ಎಲ್. ಎನ್. ಪುರಂ
3619.	ಸಿ. ಎಂ. ಸಾವಕಾರ್	ಗೂಟಿ (ಆ. ಪ್ರ.)
3620.	ಎಚ್. ದೇವೇಂದ್ರಪ್ಪ	ತಳಕಟ್ಟ
3621.	ಬಿ. ಎಂ. ನಿಡಗುಂದಿ	ಸಿದ್ದೇಶ್ವರನಗರ
3622.	ಡಾ॥ ಜಿ. ರಂಗಸ್ವಾಮಿ	ತುಮಕೂರು

ವಿಶ್ವಗುರು ಬಸವಣ್ಣನವರ ಜನ್ಮದಿನ ಮತ್ತು ಜೀವಿತಾವಧಿ ಕುರಿತು

—ಪೂಜ್ಯ ಶ್ರೀ ಜಗದ್ಗುರು ಮಾತೆ
ಮಹಾದೇವಿ, ಬಸವ ಧರ್ಮ ಪೀಠ,
ಕೂಡಲ ಸಂಗಮ.

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಸಮತಾವಾದಿ, ಕ್ರಾಂತಿಯೋಗಿ, ಸ್ವತಂತ್ರ ವಿಚಾರವಾದಿ, ಉತ್ತುಂಗ ಸಾಹಿತಿ, ಶ್ರೇಷ್ಠ ಅನುಭಾವಿ, ಉತ್ತಮ ರಾಜಕಾರಣ ಮುತ್ಸದ್ದಿ. ಪರಮಾತ್ಮನ ಸೃಷ್ಟಿಯಾದ ಈ ಮರ್ತ್ಯದಲ್ಲಿ, ಕರ್ತನೆಂಬ ಕಲಾವಿದ ಕಟೆದ ಬಹು ಶ್ರೇಷ್ಠ ಶಿಲ್ಪ ವಿಶ್ವಗುರು ಬಸವಣ್ಣನವರು. ಶಿಲ್ಪಿಯು ಹಲವಾರು ಮೂರ್ತಿಗಳನ್ನು ಕಟೆದರೂ, ಕೆಲವು ಮಾತ್ರ ಶಿಲ್ಪಿಯನ್ನು ಅಮರವಾಗಿ ಮಾಡುವಂತೆ ಪರಮಾತ್ಮನನ್ನು ಕೀರ್ತಿ ವಿಶೇಷಿತನನ್ನಾಗಿ ಮಾಡಿದವರು ಬಸವಣ್ಣನವರು– ದೇವನ ಕರುಣೆಯನ್ನು ಅದ್ಭುತವಾಗಿ ಮೈಗೂಡಿಸಿಕೊಂಡು ಪ್ರಗತಿಪರ ವಿಚಾರಧಾರೆಯ ಪ್ರತಿಪಾದಕರಾಗಿ ಬಸವಣ್ಣನವರು ತಮ್ಮ ಕಾಲಕ್ಕಿಂತಲೂ ಶತಶತಮಾನ ಮುಂದೆ ಇದ್ದುದರಿಂದ, ಈಗೀಗ ಶತಮಾನಗಳು ಸರಿದಂತೆಲ್ಲ ಅವರು ಹೆಚ್ಚು ಹೆಚ್ಚು ಅರ್ಥವಾಗುತ್ತಿದ್ದಾರೆ ; ಬಯಲ ಬ್ರಹ್ಮನಾಗಿ ಬೆಳೆದು ನಿಂತು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವವನನ್ನು ಮೂಕವಿಸ್ಮಿತನನ್ನಾಗಿ ಮಾಡುತ್ತಿದ್ದಾರೆ.

ಇಂತಹ ವಿಶ್ವವಿಭೂತಿ ಬಸವಣ್ಣನವರ ಜೀವಿತದ ಕಾಲಾವಧಿ, ಹುಟ್ಟಿದ ಮತ್ತು ಲಿಂಗೈಕ್ಯರಾದ ದಿವಸ, ಈ ಬಗ್ಗೆ ಹೆಚ್ಚಿನ ತಿಳುವಳಿಕೆ ಹೊಂದುವುದು ಅತ್ಯಗತ್ಯವಾಗಿದೆ. ಭಾರತ ದೇಶದಲ್ಲಿ ಹುಟ್ಟಿದ ಅನೇಕ ಮಹಾತ್ಮರನ್ನು ಕುರಿತು ಲಭ್ಯವಾಗುವ ಐತಿಹಾಸಿಕ ದಾಖಲೆಗಳು, ದಿನಾಂಕಗಳು ಬಹಳ ಅಸ್ಪಷ್ಟವಾಗಿರುತ್ತವೆ. ಮುಖ್ಯ ಕಾರಣವೆಂದರೆ ಶರಣರು, ಮಹಾತ್ಮರು ಶರೀರದ ಹುಟ್ಟನ್ನು, ಶರೀರಕ್ಕೆ ಜನ್ಮವಿತ್ತ ತಾಯಿತಂದೆಯರನ್ನು ತಮ್ಮ ಬರಹಗಳಲ್ಲಿ ಉಲ್ಲೇಖಿಸದಿರುವುದು. ತಮ್ಮ ಬರಹಗಳಲ್ಲಿ ಮಹಾತ್ಮರು ದೀಕ್ಷೆ, ಪಾರಮಾರ್ಥಿಕ ಘಟನೆಗಳು, ಗುರುಕಾರುಣ್ಯ, ಸಾಕ್ಷಾತ್ಕಾರ ಮುಂತಾದುವನ್ನು ಮಾತ್ರ ಪ್ರಸ್ತಾಪಿಸುವ ಕಾರಣ ದೀಕ್ಷಾ ಪೂರ್ವದ ವಿವರಗಳು ಲಭ್ಯವಾಗುವುದು ಬಲು ಕಡಿಮೆ. ಆಮೇಲಿನ ಜೀವನದಲ್ಲಾದರೂ ಅಷ್ಟೆ, ತಮ್ಮ ವೈಯಕ್ತಿಕ ಜೀವನವನ್ನು ತಮ್ಮ ಬರಹಗಳಲ್ಲಿ ಬಿಂಬಿಸದೆ ತಾತ್ತ್ವಿಕ ಚಿಂತನೆಯ ಕಡೆಗೆ, ಸಮಾಜ ಸುಧಾರಣೆಯ ಕಡೆಗೆ ಲಕ್ಷ್ಯವಹಿಸುವರು. ಹೀಗಾಗಿ ನಾವು ಐತಿಹಾಸಿಕ ವಿವರಗಳನ್ನು ಶರಣರ ಸಮಕಾಲೀನರು, ಶಿಷ್ಯರು ಬರೆದ ಬರಹಗಳಲ್ಲಿ ಮತ್ತು ಅವರನ್ನು ಕುರಿತು ರಚನೆಯಾದ ಕಾವ್ಯ–ಪುರಾಣಗಳಲ್ಲಿ ಹುಡುಕಿಕೊಳ್ಳಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರು ಸ್ವತಃ ಬರೆದ ವಚನಗಳಲ್ಲಿ ಅವರ ವ್ಯಕ್ತಿಗತ ಜೀವನದ ಐತಿಹಾಸಿಕ ವಿವರ, ಅದೂ ಪೂರ್ವಾಶ್ರಮ ಕುರಿತಾದ

ವಿವರ ಸಿಗುವುದು ಅತ್ಯಲ್ಪ. ವಿವರಗಳನ್ನು ಒದಗಿಸುವ ಪ್ರಮುಖ ಆಕರಗಳೆಂದರೆ ಸಮಕಾಲೀನ ಶರಣರ ವಚನಗಳು, ನಂತರದ ಕವಿಗಳ ಕಾವ್ಯ-ಪುರಾಣಗಳು, ಮತ್ತು ಕಾಲಜ್ಞಾನ ವಚನಗಳು. ಕಾಲಜ್ಞಾನ ವಚನಗಳು ಬಾಯಿಂದ ಬಾಯಿಗೆ ಹರಿದು ಬಂದು, ತರಬೇತಿ ಇಲ್ಲದ ಅವಿದ್ಯಾವಂತ 'ಸಂದೇಶ ವಾಹಕ' ರಿಂದ ಸಂಗ್ರಹಿಸಲ್ಪಟ್ಟು. ಕೇವಲ ಕೆಲವು ದಶಕಗಳಿಂದೀಚೆಗೆ ಮುದ್ರಣಗೊಂಡಿರುವುದರಿಂದ ಶುದ್ಧ ರೂಪದಲ್ಲಿ ದೊರೆಯುತ್ತಲಿಲ್ಲ. ಅವುಗಳಲ್ಲಿ ವಚನ ಸಾಹಿತ್ಯದ ಸೊಗಡು ಕಣ್ಮರೆಯಾಗುತ್ತಿದೆಯಾದರೂ, ಕಾಲಜ್ಞಾನ ವಚನಗಳು ಐತಿಹಾಸಿಕ ದಾಖಲೆಗಳು ಎಂಬುದನ್ನು ಮರೆಯಲಾಗದು. ಕೆಲವೊಂದು, ಆದಿ ಶರಣರು ನುಡಿದ ಭವಿಷ್ಯವಾಣಿ (Prophecy) ಯಂತೆ ಕಂಡರೂ ಬಹುಪಾಲು ಕಾಲಜ್ಞಾನ ವಚನಗಳು ಬಸವಾದಿ ಪ್ರಮಥರ ಬದುಕು, ಶರಣ ಧರ್ಮದ ಇತಿಹಾಸ, ನಡೆದ ಘಟನೆಗಳು, ವಚನ ವಾಙ್ಮಯ ರಕ್ಷಣೆ– ಇವನ್ನೇ ಕುರಿತು ತಮ್ಮ ಧರ್ಮಾನುಯಾಯಿಗಳಿಗೆ ಹೇಳುತ್ತಾ ಹೋದಂತಿವೆ. ಒಂದು ಉದಾತ್ತ ಧ್ಯೇಯಕ್ಕಾಗಿ ಕಲ್ಯಾಣ ಕ್ರಾಂತಿಯಾಗಿ ಶರಣರು ಚದುರಿ ಚಲ್ಲಾಪಿಲ್ಲಿಯಾಗಿ ಹೋಗಿ, ಅವರು ಹೋಗಿ ನೆಲೆಸಿವಲ್ಲೆಲ್ಲ ಲಿಂಗವಂತ ಧರ್ಮ ಹಬ್ಬಿದಾಗ, **'ಸಾರುವ ಅಯ್ಯ'**ನವರು ಸಂಚರಿಸಿ, ಕಾಲಜ್ಞಾನ ವಚನಗಳ ಮೂಲಕ ಐತಿಹಾಸಿಕ ಸಂಗತಿಗಳನ್ನು ತಿಳಿಸಿದಂತೆ ಕಾಣುತ್ತದೆ. ಈ ದಿಕ್ಕಿನಲ್ಲಿ ಕೊಡೈಕಲ್‌ನವರ ಕಾಲಜ್ಞಾನವು ಹೆಚ್ಚಿನ ನಿಖರತೆ, ಐತಿಹಾಸಿಕ ಮಹತ್ವ ಹೊಂದಿರುತ್ತವೆ. ಆದ್ದರಿಂದ ನಾನು ಪ್ರಸ್ತುತ ಬರಹವನ್ನು ಕಾಲಜ್ಞಾನ ವಚನಗಳನ್ನು ಹೆಚ್ಚು ಆಧರಿಸಿ ಬರೆಯುತ್ತಿದ್ದೇನೆ.

ಗುರು ಬಸವಣ್ಣನವರ ಜೀವಿತದ ಕಾಲಾವಧಿ

ಗುರು ಬಸವಣ್ಣನವರು ಐಕ್ಯವಾದ ವರ್ಷ ನಳನಾಮ ಸಂವತ್ಸರ ಎಂಬುದರಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲ. ಬೇರೆಬೇರೆ ಸಂದೇಶವಾಹಕರು ಹೇಳಿರುವ ಕಾಲಜ್ಞಾನಗಳಲ್ಲಿ ಈ ವಿಚಾರದಲ್ಲಿ ಮಾತ್ರ ಒಮ್ಮತವಿದೆ. ಇದು ಕ್ರಿ. ಶ. 1168 ಕ್ಕೆ ಕೂಡಿ ಬರುತ್ತದೆ. ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದುದು ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ 12 ನೆಯ ದಿವಸ. ಅಲ್ಲಿಂದ ಮುಂದೆ ಸಂಚರಿಸುತ್ತ ಬಂದು ಕೂಡಲ ಸಂಗಮದಲ್ಲಿ ಅನುಷ್ಠಾನ ಮಾಡುತ್ತಲಿದ್ದು, ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಸೂರ್ಯೋದಯವಾದ ಮೂವತ್ತು ಗಳಿಗೆಗೆ ಬಯಲಾಗಿದ್ದಾರೆ. ಕಾಲಜ್ಞಾನ ವಚನಗಳಲ್ಲಿ ಕೆಲವು ಕಡೆ ಪಾಡ್ಯ, ಮತ್ತು ಕೆಲವು ಕಡೆ ಪಂಚಮಿ ಎಂದು ಬಂದಿರುವುದು. ಆದರೆ ಶ್ರಾವಣ ಮಾಸ, ಮಂಗಳವಾರ ಎಂಬ ಬಗ್ಗೆ ನಿಖರತೆ ಒಮ್ಮತ ಇರುವ ಕಾರಣ, ಶ್ರೀ ಡಾ|| ಬಾಡಾಲ ರಾಮಯ್ಯನವರು ಮಂಗಳವಾರದಂದು ಪಂಚಮಿಯಾಗಿತ್ತು ಎಂಬುದಾಗಿ ಖಚಿತಪಡಿಸಿದ್ದಾರೆ. ಹಾಗಾದರೆ ಜನ್ಮಿಸಿದ್ದು ಯಾವ ವರ್ಷ ಎಂದು ಆಲೋಚಿಸಿದರೆ ಆನಂದ ನಾಮ ಸಂವತ್ಸರ ಎನ್ನಿಸುತ್ತದೆ. ಅನೇಕರು ತಿಳಿದಂತೆ ಬಸವಣ್ಣನವರು ಜೀವಿಸಿದ್ದು ಕೇವಲ 36 ವರ್ಷಗಳಲ್ಲ, 63 ವರ್ಷಗಳು :

ಖಚಿತವಾಗಿ ಹೇಳಬೇಕಾದರೆ 62 ವರ್ಷ, 3 ತಿಂಗಳು, 2 ದಿವಸ. ಗುರು ಬಸವಣ್ಣನವರ ಆತ್ಮಕಥೆಯಂತಿರುವ ವಚನಗಳಲ್ಲಿ ಹೀಗೆ ಬರುತ್ತಿದೆ.

"ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ **ಮೂವತ್ತಾರು ವರ್ಷ**
ಅಯ್ಯಾ, ಅನುಭವಕ್ಕೆ ಶಿವಸದನವಾದುದು **ಇಪ್ಪತ್ತೇಳು ವರ್ಷ**
ಅಯ್ಯಾ, ಹಿಂದಿನಂತೆ ಅನುಭವ– ಭಕ್ತಿ ಇಲ್ಲ
ಮೂರು ಮಾಸದೊಳಗಾಗಿ
(ಬ. ಷ. ವ-೧೧೬೬)

ಈ ವಚನದ ಪ್ರಕಾರ ಶ್ರೀ ಗುರು ಬಸವಣ್ಣನವರು ಕಲ್ಯಾಣದಲ್ಲಿ ವಾಸವಾಗಿದ್ದುದು 36 ವರ್ಷ; ಆಗ ಅದು ಭಕ್ತಿಗೆ ಬೀಡಾಯಿತು. ಅವರು ಬಂದು ನೆಲೆಸಿದಾಗಿನಿಂದಲೂ ಧರ್ಮ ಪ್ರಚಾರ, ಅನುಭವ ಗೋಷ್ಠಿ, ಜನಜಾಗೃತಿ ಆರಂಭವಾಯಿತಾದರೂ, **'ಅನುಭವ ಮಂಟಪ'** ಎಂಬ ಸಂಸ್ಥೆಯು ಅಧಿಕೃತವಾಗಿ ಪ್ರಾರಂಭವಾದುದು ಬಸವಣ್ಣನವರು ಕಲ್ಯಾಣಕ್ಕೆ ಬಂದು ನೆಲೆಸಿದ 9 ವರ್ಷಗಳ ನಂತರ. ಹೀಗಾಗಿ ಇದು ನಡೆದುದು 27 ವರ್ಷ. ಹೀಗೆ ಬಸವಣ್ಣನವರು ಕಲ್ಯಾಣದಲ್ಲಿ ಇದ್ದ ಕಾಲಾವಧಿಯೇ 36 ವರ್ಷ ಎಂದಾಗ, ಜೀವಿತದ ಅವಧಿ ಜಾಸ್ತಿ ಇರಲೇಬೇಕಲ್ಲವೆ ?

ಕಾಲಜ್ಞಾನದ ವಚನಗಳ ಪ್ರಕಾರ ಗುರು ಬಸವಣ್ಣನವರು ಮಂಗಳವೇಡೆಯನ್ನು ಬಿಟ್ಟು ಕಲ್ಯಾಣವನ್ನು ಪ್ರವೇಶಿಸಿದ್ದು, ವಿಕ್ರಮ ನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಸೋಮವಾರ, ಕಲಿವರ್ಷ ನಾಲ್ಕುಸಾವಿರದ ಒಂದು ನೂರತೊಂಭತ್ತೆರಡರಲ್ಲಿ. ವಿಕ್ರಮನಾಮ ಸಂವತ್ಸರದಿಂದ ನಳನಾಮ ಸಂವತ್ಸರದ ವರೆಗಿನ ಸಮಯ ಮೂವತ್ತಾರು ವರ್ಷಗಳು ಎಂಬುದು ಗಮನಾರ್ಹ.

ಗುರು ಬಸವಣ್ಣನವರು ಹಾಕಿಕೊಂಡ ಯೋಜನೆ, ಸಾಧಿಸಿದ ಸಿದ್ಧಿ. ತಂದ ಸಮಾಜ ಪರಿವರ್ತನೆಗಳ ದೃಷ್ಟಿಯಿಂದ ನೋಡಿದರೆ 36 ವರ್ಷಗಳ ಜೀವಿತಾವಧಿಯಲ್ಲಿ ಇದೆಲ್ಲ ಸಾಧ್ಯವೇ ಇಲ್ಲ ಎನಿಸುತ್ತದೆ. ಶ್ರೀ ಶಂಕರಾಚಾರ್ಯರು. ಶ್ರೀ ವಿವೇಕಾನಂದರು, ಶ್ರೀ ಏಸುಕ್ರಿಸ್ತರು ಮುಂತಾದವರ ಉದಾಹರಣೆ ನೀಡಿ ಅವರೆಲ್ಲ ಸ್ವಲ್ಪ ಸಮಯದಲ್ಲೇ ಅಗಾಧವಾದುದನ್ನು ಮಾಡಲಿಲ್ಲವೇ ಎಂದು ಕೆಲವರು ವಾದಿಸುವರು. ಒಂದು ಸಿದ್ಧಾಂತದ ಪ್ರತಿಪಾದನೆಯನ್ನಾಗಲೀ, ಕಾವ್ಯ ರಚನೆಯನ್ನಾಗಲೀ ಮಾಡುವುದು ಬೇರೆ. ಸಮಾಜದಲ್ಲಿ ಮೂಲಭೂತ ಪರಿವರ್ತನೆ ತರುವುದು ಬೇರೆ. ಅದೂ ಮಡುಗಟ್ಟಿ, ಮಲೆತು ಹೋಗಿದ್ದ ಸಮಾಜದಲ್ಲಿ ನೂತನ ಚೈತನ್ಯ ಸಂಚಾರ ಮಾಡಿ, ಅಮೂಲಾಗ್ರ ಬದಲಾವಣೆ ತರುವುದು ಜಾದೂ ಕಟ್ಟಿಗೆಯಿಂದ ಆಗುವಂತಹುದಲ್ಲ ತಾನೆ? ಬೋಧಕ ಜಂಗಮರು ಶಾರೀರಿಕವಾಗಿಯೇ ಸಂಚರಿಸಿ, ಸಂದೇಶಗಳನ್ನು ಪ್ರತ್ಯಕ್ಷವಾಗಿ ಕೊಂಡೊಯ್ದು ಜನರಿಗೆ ಮುಟ್ಟಿಸುವ ಅನಿವಾರ್ಯತೆ ಇದ್ದ ಕಾಲವದು. ಇಂದಿನಂತೆ ತ್ವರಿತವಾಗಿ ಜನರಿಗೆ ಸಂದೇಶ ಮುಟ್ಟಿಸಲು ಬಾನುಲಿ ಕೇಂದ್ರಗಳಾಗಲೀ, ವೃತ್ತ ಪತ್ರಿಕೆಗಳಾಗಲೀ, ತ್ವರಿತ ಸಾರಿಗೆ ವ್ಯವಸ್ಥೆಯಾಗಲೀ ಇಲ್ಲದ ಕಾಲವಷ್ಟೆ. ಈ ಎಲ್ಲ

ದೃಷ್ಟಿಯಿಂದ ಗುರು ಬಸವಣ್ಣನವರ ಜೀವಿತದ ಅವಧಿ ಸುಮಾರು 63 ವರ್ಷ ಎಂದು ಕೊಂಡರೆ ಆಗ ಅವರ ಹುಟ್ಟು ಆನಂದ ನಾಮ ಸಂವತ್ಸರದಲ್ಲಿ ಎಂದು ಆಗುತ್ತದೆ. ಇದು ಕ್ರಿ. ಶ. 1106 ಕ್ಕೆ ಬರುತ್ತದೆ,

ಜನ್ಮವು ರೋಹಿಣಿ ನಕ್ಷತ್ರದಲ್ಲಿ

ಹುಬ್ಬಳ್ಳಿಯ ಖ್ಯಾತ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ ವೇ. ಪಂ. ಚನ್ನವೀರ ಶಾಸ್ತ್ರಿಗಳು ಸಾಲೀಮಠ, ವಿದ್ಯಾಸಾಗರ ಪಂಚಾಂಗಕರ್ತರು ಈ ಬಗ್ಗೆ '**ಬಸವ ಜಯಂತಿಯ ನಿರ್ಣಯ**' ಎಂಬ ಶಾಸ್ತ್ರೋಕ್ತವಾದ ಪುಸ್ತಕವನ್ನು ರಚಿಸಿದ್ದಾರೆ. ಹಸ್ತ ಪ್ರತಿಯ ರೂಪದಲ್ಲಿ ಇರುವ ಅದನ್ನು ಅಧ್ಯಯನ ಮಾಡಿದಾಗ ಅವರ ವಾದ ತಾರ್ಕಿಕವೂ ಸುಸಂಬದ್ಧವೂ ಎನ್ನಿಸದೆ ಇರದು. ರೋಹಿಣಿ ನಕ್ಷತ್ರವು ಸಾಮಾನ್ಯವಾಗಿ ದ್ವಿತೀಯ, ತೃತೀಯ, ಚತುರ್ಥಿ ಈ ಮೂರೂ ದಿವಸಗಳಲ್ಲಿ ಒಂದು ದಿವಸ ಬರುತ್ತದೆ. ಬಸವಣ್ಣನವರು ಜನ್ಮಿಸಿದ ದಿವಸ ರೋಹಿಣಿ ನಕ್ಷತ್ರವು ಅಕ್ಷಯ ತೃತೀಯಾದಂದು ಬಂದಿರುವ ಸಂಭವವಿದೆಯಾದರೂ "ಭಾರತೀಯ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ನಕ್ಷತ್ರವು ಮುಖ್ಯವಾದುದರಿಂದ, ನಾವು ರೋಹಿಣಿ ನಕ್ಷತ್ರವು ಬಂದ ದಿನದಂದು ಬಸವ ಜಯಂತಿಯನ್ನು ಆಚರಿಸುವುದೇ ಸೂಕ್ತ." ಎಂದು ಶ್ರೀ ಸಾಲೀಮಠ ಚನ್ನವೀರ ಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. ಅಕ್ಷಯ ತೃತೀಯದಂದು ಆಚರಿಸುವ ಬದಲಿಗೆ ರೋಹಿಣಿ ನಕ್ಷತ್ರವು ಒದಗಿ ಬರುವ ಬಿದಿಗೆ, ತದಿಗೆ, ಚೌತಿ–ಈ ಯಾವುದೇ ದಿನದಂದು ಆಯಾ ವರ್ಷದ ಲೆಕ್ಕಾಚಾರದಂತೆ ಮಾಡಬೇಕೆಂಬ ಶ್ರೀ ಶಾಸ್ತ್ರಿಗಳ ಅಭಿಪ್ರಾಯ ಗಮನಾರ್ಹವಾಗಿದೆ.

ಜನ್ಮವು ಅರ್ಧೋದಯುದಲ್ಲಲ್ಲ

ಪಾಲ್ಕುರಿಕೆ ಭೀಮ ಕವಿಗಳ ಬಸವ ಪುರಾಣಗಳನ್ನು ಆಧಾರವಾಗಿರಿಸಿಕೊಂಡು 'ಶಿಶೋರರ್ಧೋದಯೇ ಜಾತೇ' ಎಂಬ ಕವಿಗಳ ಮಾತಿನ ಆಧಾರದ ಮೇಲೆ ಕೆಲವರು ಶ್ರೀ ಬಸವಣ್ಣನವರು ಅರ್ಧೋದಯ ಮುಹೂರ್ತದಲ್ಲಿ ಜನಿಸಿದರು ಎಂಬುದನ್ನು ಶ್ರೀ ಚನ್ನವೀರ ಶಾಸ್ತ್ರಿಗಳು ಸಶಾಸ್ತ್ರೀಯವಾಗಿ ನಿರಾಕರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಅರ್ಧೋದಯುಕ್ಕೆ ಈ ರೀತಿಯಾದ ವಿವರಣೆ ಇದೆ, ಎಂಬುದವರ ಪ್ರತಿಪಾದನೆ.

ಮಾಘ ಮಾಸಿರವಾದರ್ಶೇ ವ್ಯತಿಪಾತೇ ಶ್ರವಾನ್ವಿತೇ
ಅರ್ಧೋದಯಾಭಿದೋ ಯೋಗಃ ಸೂರ್ಯಪರ್ವ ತತಾಧಿಕಾಃ (1
ಅಯ ಮುಕ್ತೋ ದಿವಾಯೋಗಃ ಕಿಂಚಿನ್ನ್ಯೂನೋ ಮಹೋದಯಃ (2

ಮಾಘ ಮಾಸದಲ್ಲಿ ಅಮವಾಸ್ಯೆ ಬಂದಾಗ, ಅಂದು ರವಿವಾರ ಇರಬೇಕು. ಆ ದಿನ ಸೂರ್ಯೋದಯವಾಗುವ ಕಾಲಕ್ಕೆ ವ್ಯತಿಪಾತಯೋಗ ಶ್ರವಣ ನಕ್ಷತ್ರ ಇರಬೇಕು. ಇದಕ್ಕೆ ಅರ್ಧೋದಯ ಮುಹೂರ್ತವೆಂದು ಹೆಸರು. ಶ್ರೀ ಶಾಸ್ತ್ರಿಗಳವರು ಬಸವಣ್ಣನವರು ಅರ್ಧೋದಯುದಲ್ಲಿ ಜನಿಸಿಲ್ಲ ಎಂಬುದಕ್ಕೆ ಹೋರಾಶಾಸ್ತ್ರದ ಬಲವಾದ ಕಾರಣವೊಂದನ್ನು ಕೊಡುತ್ತಾರೆ. ಈ ಮುಹೂರ್ತದಲ್ಲಿ ಜನಿಸಿದವರು ಮಹಾತ್ಮರೂ ಆಗುವುದಿಲ್ಲ;

ಮತ್ತು ರಾಜಯೋಗವಿರುವುದಿಲ್ಲವಾದ್ದರಿಂದ ರಾಜರಾಗಲೀ, ಮಂತ್ರಿಯಾಗಲೀ ಆಗುವುದಿಲ್ಲ ಎಂಬುದು ಅದು. ಆದರೆ ಬಸವಣ್ಣನವರಲ್ಲಿ ರಾಜಯೋಗವಿದ್ದ ಕಾರಣವೇ ಅವರು ಮಹಾಮಂತ್ರಿಯಾದರು ಎಂಬುದಾಗಿ, ಪ್ರತಿಪಾದಿಸುತ್ತಾರೆ. ಸಾಮಾನ್ಯವಾಗಿ ಅರ್ಧೋದಯುದಲ್ಲಿ ಶಿಶುವು ಹುಟ್ಟಿತು ಎಂಬ ಪಾಲ್ಕುರಿಕೆ ಸೋಮನಾಥ, ಭೀಮ ಕವಿಗಳಿಗೆ ಜ್ಯೋತಿಷ್ಯಾ ಪ್ರಾವೀಣ್ಯತೆ ಇಲ್ಲದ ಕಾರಣ, ಅರ್ಧೋದಯವೆಂದು ಊಹಾತ್ಮಕವಾಗಿ ಹೇಳಿರಬಹುದು ಎಂದು ಅಭಿಪ್ರಾಯಪಡುತ್ತಾರೆ.

ಸಂಸ್ಕೃತದಲ್ಲಿ ಬರೆಯಲ್ಪಟ್ಟ ಶಂಕರಾರಾಧ್ಯ (1320) ವಿರಚಿತ ಬಸವ ಪುರಾಣವನ್ನು ಎತ್ತಿ ಹಿಡಿಯುವ ಶ್ರೀ ಚನ್ನವೀರ ಶಾಸ್ತ್ರಿಗಳು ಹೀಗೆ ಅಭಿಪ್ರಾಯ ಪಡುತ್ತಾರೆ. 4ನೇ ಅಧ್ಯಾಯ 34-35 ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ:

ಮೀನಸ್ಥಿತೇ ಭೃಗೋಃ ಪುತ್ರೇ ಮೇಷಸ್ಥೇಚ ದಿವಾಕರೇ
ತುಲಾಸ್ಥಿತೇ ಚ ತತ್ಪುತ್ರೇ ಕರ್ಕಟಸ್ಥೇ ಬೃಹಸ್ಪತೌ (1)
ಶಶಾಂಕೇ ರೋಹಿಣಿ ಸಂಸ್ಥೇ ಮಕರಸ್ಥೇಚ ಭೂಸುತೇ
ಶಿಶೋರರ್ಧೋದಯೇ ಜಾತೇ ಲಗ್ನ ಕರ್ಕಟ ಸಂಜ್ಞಕೇ (2)

ಜನ್ಮ ಲಗ್ನ ಕುಂಡಲಿಯಲ್ಲಿ ಮೀನದೊಳಗೆ (ಭೃಗೋಃ) ಶುಕ್ರನಿರುತ್ತಾನೆ. ಕರ್ಕದಲ್ಲಿ (ಬೃಹಸ್ಪತೌ) ಗುರು ಇರುತ್ತಾನೆ. "ಶಶಾಂಕೇ ರೋಹಿಣಿ ಸಂಸ್ಥೆ"– ಚಂದ್ರನು ರೋಹಿಣಿ ನಕ್ಷತ್ರದಲ್ಲಿದ್ದಾನೆ. ಮಕರದಲ್ಲಿ (ಭೂಸುತೇ) ಮಂಗಳನಿರುತ್ತಾನೆ. "ಲಗ್ನ ಕರ್ಕಟ ಸಂಜ್ಞಕೇ" ಅಂದರೆ ಜನ್ಮಲಗ್ನವು ಕರ್ಕಟ (ಕರ್ಕ)ವಾಗಿದೆ.

ಬಸವಣ್ಣನವರ ಜನ್ಮಕುಂಡಲಿ

12 ಶು	1 ಬುಧ ರವಿ	2 ಚಂದ್ರ	3 ರಾಹು
11			4 ಲಗ್ನ ಗುರು
10 ಕುಜ			5
9 ಕೇ	8	7 ಶನಿ ವ 5	6

ಅರ್ಥೋದಯದ ಅರ್ಥವನ್ನು ಶ್ರೀ ಸಾಲೀಮಠರು ಹೀಗೆ ಮಾಡುತ್ತಾರೆ ; ಕರ್ಕಟ ಲಗ್ನದಲ್ಲಿ ಒಟ್ಟು 30 ಅಂಶಗಳು, 15 ಅಂಶಗಳು ಕಳೆದ ನಂತರ 5ನೆಯ ನವಾಂಶದಲ್ಲಿ (ವೃಶ್ಚಿಕಾಂಶದಲ್ಲಿ) ಶಿಶುವು ಜನಿಸಿತು. ಉತ್ತರಾರ್ಧದಲ್ಲಿ ಜನಿಸಿದರೆ ವ್ಯಕ್ತಿಯು ನಿರೋಗಿಯೂ, ಮಹಾಪುರುಷನು, ತೇಜಸ್ವಿಯೂ, ಪೂರ್ವಾರ್ಧದಲ್ಲಿ ಜನಿಸಿದರೆ ವಿಷಯ ಲಂಪಟನೂ, ರೋಗಗ್ರಸ್ತ ಶರೀರಿಯೂ ಆಗುತ್ತಾನೆ ಎಂಬ ಹೋರಾ ಶಾಸ್ತ್ರದ ಪ್ರಕಾರವೂ, ಕರ್ಕಟ ಲಗ್ನದ ಉತ್ತರಾರ್ಧದಲ್ಲೇ ಬಸವಣ್ಣನವರು ಜನಿಸಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಬಸವ ಜಯಂತಿಯ ಆಚರಣೆ ಪ್ರಾರಂಭ

ಮುರುಘಾಮಠದ ಪೂಜ್ಯ ಲಿಂ॥ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಲಿಂ॥ ಶರಣ ಹರ್ಡೇಕರ್ ಮಂಜಪ್ಪನವರು, ಪ್ರೊ. ಲಿಂ॥ ಬಸವನಾಳ ಶಿವಲಿಂಗಪ್ಪನವರು ಮುಂತಾದ ಮಹನೀಯರು, ಲಿಂಗಾಯತ ಸಮಾಜದ ಜಾಗೃತಿ, ಸಂಘಟನೆ, ಸಂಸ್ಕಾರ ದೃಷ್ಟಿಯಿಂದ ಗುರು ಬಸವಣ್ಣನವರ ಜಯಂತಿಯನ್ನು ಆಚರಿಸಬೇಕೆಂಬ ನಿರ್ಣಯವನ್ನು ಕೈಗೊಂಡು, 1911ರಲ್ಲಿ ಪ್ರಪ್ರಥಮವಾಗಿ ಆಚರಿಸಿದರು. ಜನನ ಕಾಲದ ವಿಷಯವಾಗಿ ಇನ್ನೂ ಭಿನ್ನಾಭಿಪ್ರಾಯವಿರುವುದರಿಂದ, ಆ ಬಗ್ಗೆ ಚರ್ಚಿಸುತ್ತ ಸಮಯ ಹರಣ ಮಾಡದೆ ವೈಶಾಖ ಮಾಸದ ಅಕ್ಷಯ ತೃತೀಯದಂದು– ಅಂದರೆ ಸಾಡೇ ತೀನ್ ಮುಹೂರ್ತವೆಂದು ಪ್ರಸಿದ್ಧಿ ಹೊಂದಿರುವಂದು, ಆಚರಿಸಬೇಕೆಂದು ನಿರ್ಧಾರ ತಳೆದರು. ಆದ್ದರಿಂದ, ಬಹಳ ವ್ಯತ್ಯಾಸವನ್ನೇನೂ ಉಂಟು ಮಾಡದ, ರೋಹಿಣಿ ನಕ್ಷತ್ರವೆಂದು ಎಲ್ಲ ಮೂಲಗಳಿಂದಲೂ ತಿಳಿದು ಬರುವ ದಿನದಂದು ಬಸವ ಜಯಂತಿಯನ್ನು ಆಚರಿಸಬೇಕು ಎಂಬುದು ಸೂಕ್ತ ವಿಚಾರ. ಬಿದಿಗೆ, ತದಿಗೆ, ಚೌತಿ ಈ ಮೂರಲ್ಲಿ ಯಾವುದೇ ದಿನ ರೋಹಿಣಿ ನಕ್ಷತ್ರ ಬಂದರೂ, ಬಸವಣ್ಣನವರು ಅವತರಿಸಿದ ದಿನವೆಂದು ಆಚರಿಸುವುದು ಸಶಾಸ್ತ್ರೀಯವಾಗುವುದು.

ಶ್ರೀ ಗುರು ಬಸವಣ್ಣನವರು ಜನಿಸಿದ ವರ್ಷ ಕ್ರಿ. ಶ. 1106 ಎಂದು ಮಿ॥ ಈ. ಥರಸ್ಟನ್, ಲಿಂ॥ ಬಸವನಾಳರು, ಆರ್. ಸಿ. ಕಾರ್ ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಸಿದ್ಧ ಸಂಶೋಧಕರು, ಬರಹಗಾರರೂ ಆದ ಡಾ॥ ಹಿರೇಮಲ್ಲೂರ ಈಶ್ವರನ್‌ರವರು, ಹುಟ್ಟು 1106 ರಲ್ಲಿ, ಬಸವಣ್ಣನವರು ಜೀವಿಸಿದ್ದು ಸುಮಾರು 63 ವರ್ಷ ಎಂದೇ ಅಭಿಪ್ರಾಯ ಪಡುತ್ತಾರೆ. ವಿವಿಧ ಮೂಲಗಳಿಂದ ಸಿಗುವ ದಾಖಲೆಗಳು ಮತ್ತು ಗುರು ಬಸವ ತಂದೆಯವರು ಸಾಧಿಸಿದ ಪವಾಡ ಸದೃಶ ಕಾರ್ಯಗಳನ್ನು ನೋಡಿದ್ದೇ ಆದರೆ ಅವರು ಸುಮಾರು 62–63 ವರ್ಷಕಾಲ ಬದುಕಿರುವುದೇ ಸತ್ಯ ಎಂಬುದು ಖಚಿತವಾಗುತ್ತದೆ. ಆದ್ದರಿಂದ ಅವರ ಜೀವಿತದ ಕಾಲಾವಧಿ ಕ್ರಿ. ಶ. 1106 ರಿಂದ 1168 ಎಂದು ಭಾವಿಸಿ ಕೆಲವು ಪ್ರಮುಖ ಘಟನೆಗಳನ್ನು ಹೀಗೆ ಗುರುತಿಸಬಹುದು.

ಒಂದು ವಿಶೇಷ ಕೋರಿಕೆ ನಮ್ಮದಾಗಿ ಏನೆಂದರೆ, ಭಾರತೀಯ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಕೊಟ್ಟಿರುವ ವರ್ಷ, ಮಾಸಗಳನ್ನು ಮತ್ತು ದಿನಾಂಕಗಳನ್ನು ಖಚಿತ

ವಾಗಿ ಇಂಗ್ಲೀಷ್ ತೇದಿಗೆ ವಿದ್ವಾಂಸರು ಪರಿವರ್ತಿಸಿದರೆ ಮಹದುಪಕಾರವಾಗುವುದು. ಕಾಲಜ್ಞಾನ ವಚನಗಳು ಪ್ರಮುಖ ಘಟನೆಗಳು ನಡೆದ ದಿನಗಳನ್ನು ತೋರಿಸಿಕೊಡುತ್ತಲಿವೆ. ಇವನ್ನು ಇಂಗ್ಲೀಷ್ ತೇದಿಗಳಲ್ಲಿ ಕೊಟ್ಟರೆ, ಅದಕ್ಕೆ ಹೊಂದಿಕೊಂಡಿರುವ ಜನಕ್ಕೆ ತುಂಬಾ ಉಪಕಾರವಾಗುವುದು.

1. ಗುರು ಬಸವಣ್ಣನವರ ಜನನ– ಆನಂದನಾಮ ಸಂವತ್ಸರ, ವೈಶಾಖ ಶುದ್ಧ ರೋಹಿಣಿ ನಕ್ಷತ್ರದಲ್ಲಿ, ಅಕ್ಷಯ ತೃತೀಯದಂದು- ಕ್ರಿ. ಶ. 1106.
2. ಮನೆಯಿಂದ ನಿರ್ಗಮನ, ಕೂಡಲ ಸಂಗಮಕ್ಕೆ ಆಗಮನ- ದುಂದುಭಿ ನಾಮ ಸಂವತ್ಸರದಲ್ಲಿ– 1113-1114.
3. ಗುರುಕುಲವಾಸ ಪೂರೈಕೆ– ಕನಸು– ಸಗುಣ ಸಾಕ್ಷಾತ್ಕಾರ- ಹೊಸ ಧರ್ಮದ ಕಲ್ಪನೆ ರೂಪುಗೊಂಡುದು- ಘೋಷಣೆ-ಶ್ರೀಮುಖ ಸಂವತ್ಸರ-ಕ್ರಿ.ಶ. 1126. ಆಗ ಬಸವಣ್ಣನವರ ವಯಸ್ಸು 21 ವರ್ಷ.
4. ಗುರುಕುಲದಿಂದ ಹೊರಟು ಮಂಗಳವೇಢೆಗೆ- ಮಂಗಳವೇಢೆಯಲ್ಲಿ ಸುಮಾರು 7 ವರ್ಷ. ಶ್ರೀಮುಖ ನಾಮ ಸಂವತ್ಸರದಿಂದ ವಿಕ್ರಮನಾಮ ಸಂವತ್ಸರ ಆಷಾಢದ ವರೆಗೆ. ಕ್ರಿ. ಶ. 1126-1132. ವಿವಾಹವು ಮಂಗಳವೇಢೆಯಲ್ಲೇ ಆಯಿತು.
5. ಮಂಗಳವೇಢೆಯಿಂದ ಕಲ್ಯಾಣಕ್ಕೆ- ವಿಕ್ರಮ ನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ, ಬೆಳಗಿನ ಹೊತ್ತಿಗೆ ಕಲ್ಯಾಣವನ್ನು ಪ್ರವೇಶಿಸಿದರು- 1132.
6. ಕಲ್ಯಾಣಕ್ಕೆ ಬಂದ 9 ವರ್ಷಗಳ ನಂತರ ಅನುಭವ ಮಂಟಪ ಸಂಸ್ಥೆಗೆ ಸಾಂಘಿಕ ರೂಪ, ವಿರೋಧಿ ನಾಮ ಸಂವತ್ಸರದಲ್ಲಿ– ಕ್ರಿ. ಶ. 1141.
7. ನಂದನ ನಾಮ ಸಂವತ್ಸರ 1144 ರಲ್ಲಿ ಚನ್ನಬಸವಣ್ಣನವರ ಜನನ ;
8. ಅಲ್ಲಮ ಪ್ರಭು-ಸಿದ್ಧರಾಮೇಶ್ವರರ ಆಗಮನ- ಕ್ರೋಧಿ ನಾಮ ಸಂವತ್ಸರ ಕ್ರಿ. ಶ. 1156.
9. ಹನ್ನೆರಡು ವರ್ಷದ ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಂದ ಮಹಾಯೋಗಿ ಸಿದ್ಧರಾಮೇಶ್ವರರಿಗೆ ದೀಕ್ಷೆ, ಪ್ರಭುದೇವರ ಶೂನ್ಯ ಪೀಠಾರೋಹಣ- ಚೈತ್ರ ಶುದ್ಧ ಪಾಡ್ಯ (ಯುಗಾದಿ) ಸೋಮವಾರ ರೇವತಿ ನಕ್ಷತ್ರದಲ್ಲಿ. ಈ ಕ್ರೋಧಿ ನಾಮ ಸಂವತ್ಸರವನ್ನು ಪ್ರಭುನಾಮ ಸಂವತ್ಸರ ಎಂದು ಕಾಲಜ್ಞಾನ ವಚನ ದಲ್ಲಿ ಕರೆಯಲಾಗಿದೆ. — ಕ್ರಿ. ಶ. 1156.
10. ಹರಳಯ್ಯ-ಮಧುವರಸರ ಸಂಬಂಧ; ಶೀಲವಂತಯ್ಯ- ಲಾವಣ್ಯವತಿಯರ ವಿವಾಹ— ರಾಕ್ಷಸನಾಮ ಸಂವತ್ಸರ ಕ್ರಿ. ಶ. 1168.

11. ಬಸವಣ್ಣನವರು ಕಲ್ಯಾಣದಿಂದ ದಂಡಗೊಂಡು ಹೊರಟುದು- ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿ (12 ನೆಯ) ದಿವಸದಂದು. ಕ್ರಿ.ಶ. 1168. ಇಂದಿಗೂ ಬಿಜಾಪುರ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ದಂಡಗೊಂಡ (ಕಲ್ಯಾಣ) ಬಸವಣ್ಣನವರ ಗುಡಿಗಳನ್ನು ಕಾಣಬಹುದು.

12. ಹರಳಯ್ಯ-ಮಧುವರಸರ ಕ್ಷಿಪ್ರ ವಿಚಾರಣೆ — ಮರುದಿವಸ

13. ಶರಣರಿಗೆ ಎಳೆಹೂಟೆ ಶಿಕ್ಷೆ — ಫಾಲ್ಗುಣ ಮಾಸದ ಶುದ್ಧ ಚತುರ್ದಶಿ (14 ನೆಯ) ದಿವಸ — 1168

14. ಬಿಜ್ಜಳನ ಹತ್ಯೆ – ಚಾಲುಕ್ಯ ನಿಷ್ಠ ಸೇವಕರಾದ ಜಗದೇವ, ಮಲ್ಲಣ್ಣ, ಬೊಮ್ಮಣ್ಣನವರಿಂದ, ಫಾಲ್ಗುಣ ಮಾಸದ ಹುಣ್ಣಿಮೆಯ ದಿವಸ—1168

15. ವಚನ ಸಾಹಿತ್ಯವನ್ನು ಹೊತ್ತು ಮುಂದೆ ಸಾಗಿದ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಸಹ್ಯಾದ್ರಿಯ ಗುಡ್ಡಗಳನ್ನು ಸೇರಿದ್ದು ನಳನಾಮ ಸಂವತ್ಸರ ವೈಶಾಖ ಬಹುಳ ಬಿದಿಗೆ, ಬುಧವಾರ ರೋಹಿಣಿ ನಕ್ಷತ್ರದಲ್ಲಿ — 1168

16. ಶ್ರೀ ಗುರು ಬಸವಣ್ಣನವರು ಶಿವಯೋಗಾನಂದದಲ್ಲಿ ತಲ್ಲೀನರಾಗಿ, ದೇವನಿಂದ ಕರೆ ಬರಲು ಇಚ್ಛಾಮರಣಿಯಾಗಿ ಬಯಲಾದುದು ಶ್ರಾವಣ ಶುದ್ಧ ಪಂಚಮಿ- ನಳನಾಮ ಸಂವತ್ಸರ- ಮಂಗಳವಾರ- ಸೂರ್ಯೋದಯವಾದ 30 ಗಳಿಗೆಗೆ.

ಹೀಗೆ ಕಾಲಜ್ಞಾನ ವಚನಗಳು ತುಸು ದೋಷಗಳಿಂದ ಕೂಡಿದ್ದರೂ ಕೆಲವಾರು ವಿವರಗಳನ್ನಾದರೂ ಒದಗಿಸುತ್ತವೆ. ಈ ದೃಷ್ಟಿಯಿಂದ ಬಸವಣ್ಣನವರು ಜೀವಿಸಿದ್ದು 62 ವರ್ಷ, 3 ತಿಂಗಳು, 2 ದಿವಸ. ಆದ್ದರಿಂದ ಬಸವ ಶಕೆಯನ್ನು ಲೆಕ್ಕಮಾಡುವಾಗ 1106 ರಿಂದ ಹಿಡಿಯಬೇಕು. 1991 ರ ಬಸವ ಜಯಂತಿಯು ಮೇ 15ಕ್ಕೆ ಒದಗಿ ಬಂದಿದ್ದು, ಅಂದಿನಿಂದ ಬಸವ ಶಕೆಯ 886 ನೆಯ ವರ್ಷ ಆರಂಭವಾಗುತ್ತದೆ.

ಅಂದು ನಾವು–ನೀವೆಲ್ಲರೂ ಶ್ರೀ ಗುರು ಬಸವಣ್ಣನವರ ದಿವ್ಯ ಜೀವನ-ಸಾಧನೆ-ಸಂದೇಶಗಳನ್ನು ಮನನ ಮಾಡುವುದರ ಮೂಲಕ ಬಸವ ಜಯಂತಿಯನ್ನು ಆಚರಿಸೋಣ. ★

(ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯು ದಿ. 15-5-91 ರಂದು ಬಸವ ಜಯಂತಿಯ ವಿಶೇಷ ಪುರವಣಿಯಲ್ಲಿ ಈ ಲೇಖನವನ್ನು ಪ್ರಕಟಿಸಿದೆ.)

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ.

ಕೂಡಲ ಸಂಗಮದ ಬಸವ ಧರ್ಮ ಪೀಠದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳಿಗೆ ನೆರವು ನೀಡಿದ ಧನ ದಾಸೋಹಿಗಳು

ಶರಣರುಗಳಾದ :

1.	ಎಸ್. ಬಿ. ಪಾಟೀಲ್, ಗುಲಬರ್ಗಾ (ಒಂದು ಕೋಣೆಗೆ)	30001-00
2.	ಎಸ್. ಎಸ್. ಪಾಟೀಲ್, ಗುಲಬರ್ಗಾ (ಒಂದು ಕೋಣೆಗೆ)	30001-00
3.	ಸಿದ್ಧರಾಮಪ್ಪ ಶಿವಶರಣಪ್ಪ ಬಾಲಪ್ಪಗೋಳ್, ಗುಲಬರ್ಗಾ (ಒಂದು ಕೋಣೆಗೆ)	30001-00
4.	ಗುಪ್ತದಾನಿಗಳು, ಗುಲಬರ್ಗಾ (ಒಂದು ಕೋಣೆಗೆ)	30001.00
5.	ವಿದ್ಯಾವತಿ ರವೀಂದ್ರನಾಥ ಬಿರಾದಾರ, ಗುಲಬರ್ಗಾ (ಒಂದು ಕೋಣೆಗೆ)	30001-00
6.	ವಿಠ್ಠಲರಾವ ಹನುಮಂತಪ್ಪ ಅಗರಖೇಡ ಮತ್ತು ಆನಂದರಾವ್ ಹನುಮಂತಪ್ಪ ಆಗರಖೇಡ, ಗುಲಬರ್ಗಾ (ಒಂದು ಕೋಣೆಗೆ)	30001-00
7.	ಬಸವಣ್ಣೆಪ್ಪ ಪಾಟೀಲ್, ನೀಲೂರು ಮತ್ತು ಶಂಕರಪ್ಪ ಗುಂಡಪ್ಪ ಮಹಾಂತಗೋಳ, ಗುಲಬರ್ಗಾ (ಒಂದು ಕೋಣೆಗೆ)	30001-00
8.	ಪುತಳಾಬಾಯಿ ಶಿವಶರಣಪ್ಪ ಜಂಗಳೆ, ಗುಲಬರ್ಗಾ (ಒಂದು ಕೋಣೆಗೆ)	30001.00

ಮೂರ್ತಿಗಳನ್ನು ಮಾಡಲು ಮತ್ತು ಕಟ್ಟಡ ನಿಧಿಗೆ

ಶರಣರುಗಳಾದ :

1.	ಎಸ್. ಆರ್. ಪಾಟೀಲ (ಕಂದಗೂಳ)	ಗುಲಬರ್ಗಾ	5001-00
2.	ಸುಶೀಲಾ ಮತ್ತು ಡಿ. ವಿ. ಪಾಟೀಲ	,,	5001-00
3.	ಅಮೃತ ಮತ್ತು ಬಿ. ಎಸ್. ಹಳಕಟ್ಟಿ,	,,	5001-00
4.	ಎಸ್. ಎನ್. ಪಾಟೀಲ,	,,	5001-00
5.	ವೀರಯ್ಯ ಸ್ವಾಮಿ, ಎಂ. ಎಲ್. ಸಿ.	,,	5001-00
6.	ಶಿವನಪ್ಪ ಶಿವಪ್ಪ ಮಡಿವಾಳರ	,,	5001-00
7.	ಸಾಹುಕಾರ ಈರಣ್ಣ ಮಟಮಾರಿ,	ರಾಯಚೂರು	1001-00
8.	ಅನಿತಾ ಶಂಕರಯ್ಯ ಗವಿಮಠ,	ಗಾದಗಿ	1001-00
9.	ಕಲ್ಯಾಣರಾವ್ (ರಿಟೈರ್ಡ್ ಪಬ್ಲಿಕ್ ಪ್ರಾಸಿಕ್ಯುಟರ್)	,,	501-00
10.	ಸೋಮಶೇಖರಯ್ಯ ಗುಂಡಯ್ಯ ಭಂಡಯ್ಯ	ಭಂಡಯ್ಯಗೋಳ	501-00
11.	ಬಾಬೂರಾವ ಮಠಪತಿ	,,	511-00
12.	ನಾಗಶೆಟ್ಟಿ ಕಾಳಗಿ	,,	501.00
13.	ಅಣ್ಣಾರಾವ ಬಸವಣ್ಣೆಪ್ಪ ನಾಗೂರು	,,	501-00

14. ಶಾರದಾದೇವಿ ಗುರುಮೂರ್ತಿ — ಉರ್ಕಿಮಠ (ಕ.ನಿ) — 501-00
15. ಶಿವಯೋಗಪ್ಪ ಶಿವಶರಣಪ್ಪ ಕಲಶೆಟ್ಟಿ — ,, — 501-00
16. ಮಲ್ಲಿನಾಥ ಆರ್. ಕೂಡ್ಲಿ — ,, — 501.00
17. ಶಂಕರಪ್ಪ ಆಳಗುಂಡಿ, — ,, — 501-00
18. ಬಸವಣ್ಣಪ್ಪ ಪಟ್ಟಣ, — ,, — 501-00

ಪುಸ್ತಕ ಮುದ್ರಣಕ್ಕೆ ನೆರವು (ವಿ .ಕ. ಮಿ. ಖಾತೆ)

ಚುಳುಕಾದ ಚೇತನ (6000 ಪ್ರತಿಗಳು)

1. ಶರಣೆ. ಶಶಿಕಲಾ ಮತ್ತು ಡಾ॥ ಶರಣಪ್ಪಗಿರಿ,
ಗುಲಬರ್ಗಾ. 2000 ಪ್ರತಿಗಳು — 10001-00
2. ಶರಣ. ಶಂಕರಪ್ಪ ಗುಂಡಪ್ಪ ಮಹಾಂತಗೋಳ, ಗುಲಬರ್ಗಾ
1000 ಪ್ರತಿಗಳು — 5001-00
3. ಶರಣೆ. ಶಾರದಾದೇವಿ ಮತ್ತು ಶರಣ. ಶಿವನಾಗಪ್ಪ,
ಗುಬಲರ್ಗಾ. 1000 ಪ್ರತಿಗಳು — 5001.00

ನಿತ್ಯ ದಾಸೋಹ ನಿಧಿಗೆ 1111-00 ರೂ ಸಲ್ಲಿಸಿರುವ ದಾಸೋಹಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಶರಣರುಗಳಾದ :

662. ಬಿ. ಶಿವಾನಂದ, — ದೊಡ್ಡ ಬೆಳಹೊಂಗಲ
663. ನೀಲಮ್ಮ ದಾದಪ್ಪ ಧನ್ನೂರು, — ಮಿಣಜಿಗಿ
664. ದೊಡ್ಡಪ್ಪ ಸಂಗಪ್ಪ ಬಿದರಕುಂದಿ, — ತಾಳೀಕೋಟೆ
665. ಎಸ್. ಎಸ್. ಹಿರಂಡಗಿ, — ಬಿಜಾಪುರ
666. ಬಸಣ್ಣ ದೇವಣಗಾಂವ, — ಗುಲಬರ್ಗಾ
667. ಮಲ್ಲಿಕಾರ್ಜುನ ಸೂರ್ಯಕಾಂತ ಟೆಂಗಳಿ, — ,,
668. ಕಲ್ಯಾಣಪ್ಪ ವಿರುಪಾಕ್ಷಪ್ಪ ಹೆಗ್ಗಣಿ, — ,,
669. ಬಸವರಾಜ ನಾಗೋರ್, ಜೆ. ಇ. — ,,
670. ಅಮೃತಾ ಬಿ. ಎಸ್. ಹಳಕಟ್ಟಿ — ,,
671. ವಿದ್ಯಾವತಿ ರವೀಂದ್ರನಾಥ ಬಿರಾದಾರ — ,,
672. ಶಂಕರಪ್ಪ ಸಂಗಶೆಟ್ಟಿ — ,,
673. ಕುಮಾರಿ ಶಂಕರಮ್ಮ ತಿಪ್ಪಣ್ಣ ಜಕಾತಿ — ,,
674. ಬಸವಣ್ಣೆಪ್ಪ ನಿಗ್ಗುಡಗಿ — ,,
675. ಬಿ. ಎಸ್. ಪಾಟೀಲ (ದಾಸ್ಯಾಳ) — ,,

676. ಶಿವಶರಣಪ್ಪ ಭೋಜರಾಜ ಶಿವಶೆಟ್ಟಿ — ಗುಲಬರ್ಗಾ
677. ಬಸವರಾಜ ಕೋಟನೂರು — ,,
678. ಶಿವಶರಣಪ್ಪ ನಿಗ್ಗುಡಗಿ — ,,
679. ಎ. ಎಸ್. ಪಾಟೀಲ (ಸರಡಗೆ) — ,,
680. ಬಸವಣ್ಣೆಪ್ಪ ಪೋಲೀಸ್ ಪಾಟೀಲ (ಖಣದಾಳ) — ,,
681. ಶಿವಶಂಕರೆಪ್ಪ ಶಿವಪ್ಪ ನಂದ್ಯಾಳ — ,,
682. ಬಸವರಾಜ ಅಡಿವೆಪ್ಪ ಕಾಳಗಿ — ,,
683. ಡಿ. ವೀರಣ್ಣ ಆ್ಯಂಡ್ ಕಂಪೆನಿ — ,,
684. ಶಿವಲಿಂಗಪ್ಪ ಭೀಮರಾವ ಎಳವಂತಗೇಕರ್ — ,,
685. ಚಂದ್ರಮುಖಿ ಉಪ್ಪೆ
686. ಚಂದ್ರಶೇಖರ ಕಿಣಗಿ, ಸಿಂದಗಿ
687. ಸಾತಮ್ಮ C/o ಚಂದ್ರಕಾಂತ ಪಾಟೀಲ, — ಗುಲಬರ್ಗಾ
688. ಸಂಗನ ಬಸಪ್ಪ ಮೂಲೀಮನಿ — ,,
689. ಬಸವಂತರಾವ ಬೆಳಂಬಗಿ (ಧುತ್ತರಗಾಂವ) — ,,
690. ಉಮಿಯ-ವಿಜಯಾ ಸಾಮಿಲ್ — ,,
691. ಶಿವನಗೌಡ ಪಾಟೀಲ, ಚುಳಕಿ, ಬೆಳಗಾಂವ
692. ಸಂಗಪ್ಪ ಹೋತಪೇಟೆ, ಗುಲಬರ್ಗಾ
693. ಅರುಣಾದೇವಿ ಮಹಾದೇವ ಬತಾಲೆ, ನಳದುರ್ಗ, ಮಹಾರಾಷ್ಟ್ರ
694. ಬಸವರಾಜ ಕರಂಜಿ (ಕಲ್ಯಾಣ), — ಗುಲಬರ್ಗಾ
695. ರೇವಣಪ್ಪ ಕಲ್ಲಪ್ಪ ಹೆಗ್ಗಣಿ — ,,
696. ರೇವಪ್ಪ ಹಾಲಪ್ಪ ಬೊಮ್ಮಣ್ಣ — ,,
697. ಕಲಾವತಿ ಶಿವಲಿಂಗಯ್ಯ ಉರ್ಕಿಮಠ — ,,
698. ವೀರಮ್ಮ ಪೋಲೀಸ್ ಪಾಟೀಲ, ಐನಳ್ಳಿ — ,,
699. ರಾಜೇಂದ್ರ ಪಾಟೀಲ ಪಚ್ಚಾ, ಕೋರವಾರ — ,,
700. ರಾಜಶೇಖರ ವೀರಣ್ಣ ಬೊಮ್ಮನಹಳ್ಳಿ — ,,
701. ಕುಮಾರಿ ಶ್ರೀದೇವಿ ವೀರಣ್ಣ ಬೊಮ್ಮನ ಹಳ್ಳಿ — ,,
702. ಸುಭಾಷ್‌ಚಂದ್ರ ಲಿಂಗಪ್ಪ ಕೋಣೇನ — ,,
703. ಬಸವರಾಜ ಶಿವಶಂಕರಪ್ಪ ಭೀಮಳ್ಳಿ — ,,
704. ಸೂಗಣ್ಣ ಸಿದ್ಧಣ್ಣ ಯಲಗಟ್ಟಿ — ,,
705. ಎ. ವೈ. ಪಾಟೀಲ — ,,
706. ಎಸ್. ಎಸ್. ಪಾಟೀಲ — ,,
707. ಎಸ್. ಎಸ್. ಮುಗಳಿ

708.	ನಾಗರಾಜ ಬಾಸಗಿ	ಗುಲಬರ್ಗಾ
709.	ಶಿವಲಿಂಗಪ್ಪ ಶಾಬಾದಿ	,,
710.	ಮಹಾಲಿಂಗಪ್ಪ ಬಿರಾದಾರ (ಶಿರಗಾಪುರ)	,,
711.	ದೇವೇಂದ್ರಪ್ಪ ಭೀಮಸೇನ ಬನ್ನೂರು (ರಾಜಾಪುರ)	,;
712.	ರಾಜಶೇಖರ ರೇವಪ್ಪ ಜಾವಳಗಿ	,,
713.	ಶಿವನಪ್ಪ ಶಿವಪ್ಪ ಮಡಿವಾಳರ	,,
714.	ಗುರಣ್ಣ ಕವಲಗಿ	ಗುಲಬರ್ಗಾ
715.	ಹನುಮಂತರಾವ್ ಗುರುಲಿಂಗಪ್ಪ ಪಾಟೀಲ	,,
716.	ಸಿದ್ಧರಾಮಪ್ಪ ಬಸಪ್ಪ ರಂಜೋಳಕರ	,,
717.	ರಾಜೇಶ್ವರಿ ಅಣವೀರಪ್ಪ ಬಳ್ಳಾ	,,
718.	ಡಾ|| ಬಸವರಾಜ್ ವಾರದ	,,
719.	ಶಿವಲಿಂಗಪ್ಪ ಚನ್ನವೀರಪ್ಪ ಚಂದನಕೇರಿ (ನಾಗೂರು)	,,
720.	ಉಳುವೆಪ್ಪ ಚನ್ನಬಸಪ್ಪ ವಾರದ	,,
721.	ಶಾಂತಕುಮಾರ ಜಟ್ಟೂರು	,,
722.	ವೀರಭದ್ರಪ್ಪ ಶರಣಣ್ಣ ಭಾವಿಕಟ್ಟಿ	,,
723.	ಧೂಳಪ್ಪ ಹುಡಗೆ	,,
724.	ಚಂದ್ರಶೇಖರಪ್ಪ ಗೋಲಗೇರಿ	,,
725.	ಸರೋಜಾ ಮಹಾದೇವಪ್ಪ ಸರಗಾಪುರ	,,
726.	ಕೇಶವ ಭಾಯಿ ಅರ್ಜುನ ಪಟೇಲ್	,,
727.	ಗೀತಾ ಸಾ ಮಿಲ್	,,
728.	ಜಿ. ಎಂ. ಪಾಶ್ಚಾಪುರ	,,
759.	ತುಕಾರಾಂ ಕಲ್ಲಪ್ಪ ಭಜಂತ್ರಿ	,,
730.	ಅಂಬಣ್ಣ ಖಾನಪುರ	,,
731.	ಸಿದ್ಧರಾಮಪ್ಪ ಹೊನ್ನಪ್ಪ ಕರಡಿ	ಧಾರವಾಡ
732.	ಸಿ. ವಿ. ಮಾಲೀ ಪಾಟೀಲ	ಗುಲಬರ್ಗಾ
733.	ರಾಜಶೇಖರ ಬಸವರಾಜಪ್ಪ ನಾಡಗೌಡ	,,
734.	ಪ್ರಕಾಶ ಸಂಗಪ್ಪ ದಾಬಶಟ್ಟಿ	,,
735.	ಮಹಾಂತಪ್ಪ. ಎಸ್. ಹಾವನಳ್ಳಿ	,,
736.	ಎಂ. ಎ. ಅಮರಶೆಟ್ಟಿ	,,
737.	ಅಣ್ಣರಾವ್ ಗೌಡ, ಸರ್ವಪ್ರಿಯ ವಿಹಾರ	ನವದೆಹಲಿ
738.	ಬಿ. ಚನ್ನಶೆಟ್ಟಿ	ಗುಲಬರ್ಗಾ
739.	ಬಸವರಾಜ ತುಪ್ಪದ	ಗುಲಬರ್ಗಾ

740.	ಎಂ. ಗಿರಿಜಾಪತಿ ಮುಂಡರಗಿ ಮಠ	ಕವಿತಾಳ
741.	ಮಹಾದೇವಪ್ಪ ಕ್ಯಾಮಾ	ಗುಲಬರ್ಗಾ
742.	ಅಪ್ಪಾಸಾಹೇಬ ನೂರೊಂದಪ್ಪ ಮಾಣಕರ	,,
743.	ರಾಜಕುಮಾರಿ ಜಗದೀಶ ದಯಾಳ	,,
744.	ಪ್ರಭಾಕರ ನಂದಿ	,,
745.	ನೀಲಕಂತಪ್ಪ ಕಂಠಿ	,,
746.	ಶಿವಶರಣಯ್ಯ ಕಂತಿ	,,
747.	ಶಿವಶರಣಪ್ಪ ಸಿದ್ಧಪ್ಪ ಪಾಟೀಲ್ (ಬೆಳಕೋಟಾ)	,,
748.	ಸೀತಾಬಾಯಿ ಮಲ್ಲಿಕಾರ್ಜುನಪ್ಪ (ಅಪರಾದಿ)	,,
749.	ಶಕುಂತಲಾ ಸಿದ್ಧರಾಮ ಶೆಟ್ಟಿ	ಬೀದರ

(ಮುಂದುವರಿಯುವುದು)

ಶರಣ ಬಂಧುಗಳಿಗೆ ಸೂಚನೆ

ಅನೇಕರು ದಾಸೋಹ ನಿಧಿ, ಪೂಜಾ ನಿಧಿಗೆ ಕ್ರಮವಾಗಿ 1111-00 ರೂ. 501-00 ರೂ ಕೊಡುತ್ತಾರಾದರೂ ದಾಸೋಹ ಮಾಡುವ, ಪೂಜೆ ಮಾಡುವ ದಿನಾಂಕ ಮತ್ತು ನಿಮಿತ್ತ ಕಾರಣ, ತಿಳಿಸುವುದಿಲ್ಲ. ಆದ್ದರಿಂದ ಏನಾದರೂ ನಿಮಿತ್ತ ಕಾರಣ, ಅಂದರೆ ಹುಟ್ಟು, ವಿವಾಹ, ಸಾವು, ಗಣಾರಾಧನೆ ಮುಂತಾದುವನ್ನು ತಿಳಿಸ ಬಹುದು. ಹಾಗೇನೂ ವಿಶಿಷ್ಟ ಉದ್ದೇಶವಿರದಿದ್ದಲ್ಲಿ ನಮ್ಮ ಆಯ್ಕೆಗೆ ಬಿಟ್ಟರೆ ನಾವೇ ದಿನಾಂಕ ಹೊಂದಿಸುತ್ತೇವೆ. ಅಥವಾ ಶರಣರ ಜಯಂತಿಗಳನ್ನು ಸೂಚಿಸಬಹುದು. ಕಲ್ಯಾಣ ಕಿರಣದಲ್ಲಿ ಮುದ್ರಣಗೊಂಡ ಕ್ರಮ ಸಂಖ್ಯೆಯ ಉಲ್ಲೇಖ ಮಾಡಿಯೇ ಪತ್ರ ಬರೆಯಬೇಕು. ಹುಡುಕಾಟ ಸುಲಭವಾಗುತ್ತದೆ ಎಂಬುದನ್ನು ದಾಸೋಹಿಗಳ ಗಮ ನಕ್ಕೆ ತರಬಯಸುತ್ತೇವೆ.

ಧರ್ಮಗ್ರಂಥ ನಿಧಿಗೆ 1001 ರೂಗಳನ್ನು ಕೊಟ್ಟ ದಾಸೋಹಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಶರಣರುಗಳಾದ :

354.	ಬಸಣ್ಣ ದೇವಣಗಾಂವ	ಗುಲಬರ್ಗಾ
355.	ಬಸವಂತರಾವ ಪಾಟೀಲ	,,
356.	ಕಲ್ಯಾಣಪ್ಪ	,,
357.	ಸಿದ್ಧರಾಮಪ್ಪ ಗುರುಪಾದಪ್ಪ ಲಖಮಣ	,,
358.	ಮಹಾದೇವಿ ಶಿತಿಕಂಠಯ್ಯ ಸ್ವಾಮಿ	,,
359.	ಬಸವಣ್ಣೆಪ್ಪ ನಿಗ್ಗುಡಗಿ	,,
360.	ಬಿ. ಎಸ್. ಪಾಟೀಲ (ದಾಸ್ಯಾಳ)	,,
361.	ಅಪ್ಪಣ್ಣ ಬಸವಂತಪ್ಪ ಜೀರಾ	

362.	ಗಂಗಮ್ಮ ಸಿಂಧವಾಳ	ಗುಲಬರ್ಗಾ
363.	ಚಂದ್ರಕಾಂತ ಪಾಟೀಲ	,,
364.	ಸಂಗಣ್ಣ ಪರಶಿವಪ್ಪಗೋಳ	,,
365.	ಸಂಗನ ಬಸಪ್ಪ ಮಾಲೀಮನಿ	,,
366.	ರಾಜೇದ್ರ ಕರೇಕಲ್	,,
367.	ಚಿವ್ರೆ ಶಂಕರಯ್ಯ ಸ್ವಾಮಿ	,,
368.	ವೀರಣ್ಣ ಬಿ. ರಾಯರಾಮ	,,
369.	ಗುರಣ್ಣ ಕವಲಗಿ	,,
370.	ಸಿದ್ಧರಾಮಪ್ಪ ಬಸಪ್ಪ ರಂಜೋಳಕರ್	,,
371.	ಅಕ್ಕಮಹಾದೇವಿ ಮೊಗಲಾಯಿ	,,
372.	ರಾಜಶೇಖರ ರೇವಣಸಿದ್ಧಪ್ಪ ದಸ್ತಾಪುರ	,,
373.	ಶಾಂತಕುಮಾರ ಜಟ್ಟೂರು	,,
374.	ವೀರಭದ್ರಪ್ಪ ಮಹಾಲಿಂಗಪ್ಪ ಪಾರಶೆಟ್ಟಿ	,,
375.	ಸಾಹೇಬಗೌಡ ಪಾಟೀಲ	,,
376.	ಅಣ್ಣಾರಾವ ಬಿರಾದಾರ	,,
377.	ಎಂ. ಎ. ಅಮರಶೆಟ್ಟಿ	,,
378.	ಶಿವಶರಣಪ್ಪ ಮಹಾಂತಪ್ಪ, ಕಲಬುರ್ಗಿ	(ಫರಹತಾಬಾದ)
379.	ರವೀಂದ್ರ ಶಾಬಾದಿ	ಗುಲಬರ್ಗಾ
380.	ಬಸವರಾಜ ತುಪ್ಪದ	,,
381.	ರೇವಣಸಿದ್ಧಪ್ಪ, ಚಿ, ಶೆಟಗಾರ	,,

(ಮುಂದುವರಿಯುವುದು)

ಪೂಜಾನಿಧಿಗೆ 501 ರೂ ಸಲ್ಲಿಸಿದವರು

ಶರಣರುಗಳಾದ :

194. ಆಶಾದೇವಿ ವಿಶ್ವನಾಥ ಖೂಬಾ, ಗುಲಬರ್ಗಾ
195. ಶಶಿಕಲಾ ಡಾ॥ ಶರಣಪ್ಪ ಗಿರಿ, ಗುಲಬರ್ಗಾ
196. ಸಿದ್ಧರಾಮಪ್ಪ ಬಸಪ್ಪ ರಂಜೋಳಕರ, ಗುಲಬರ್ಗಾ
197. ಡಾ॥ ಶೀಲಾ ಸಿದ್ಧರಾಮು, ಗುಲಬರ್ಗಾ
198. ಭಗವಂತಪ್ಪ ಬಸವಂತಪ್ಪ ಕಡನಿ, ಗುಲಬರ್ಗಾ
199. ರುದ್ರವ್ವ ಕೀರ್ತೆಪ್ಪ ನಾಗತಾಣ, ಗುಲಬರ್ಗಾ
200. ರುದ್ರಪ್ಪ ಬಿಲಗುಂದಿ, ಗುಲಬರ್ಗಾ
201. ಸಿದ್ಧಪ್ಪ ಗಂಗಪ್ಪ ಭೂಷಣ್ಣವರು, ಗುಲಬರ್ಗಾ
202. ಬಸವಶ್ರೀ, ಬೆಂಗಳೂರು

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನದ ವೀಡಿಯೋ ಕೆಸೆಟ್ಟಿಗೆ ನೆರವು ನೀಡಿದವರು

1. ಶರಣ. ಮಲ್ಲಣ್ಣಗೌಡ ಶಿವಶರಣಪ್ಪಗೌಡ ಪಾಟೀಲ (ಕಲ್ಲೂರು) ಇವರು 2500-00 ರೂ ಕೊಟ್ಟಿದ್ದಾರೆ.
2. ಹಿಂದಿನ ಸಂಚಿಕೆಯಲ್ಲಿ ಮೈಸೂರು ಸುಬ್ಬಣ್ಣ, ಬೆಂಗಳೂರು ಎಂದಿದೆ ಮೈಸೂರು ಸುಬ್ಬಣ್ಣ, ಧಾರವಾಡ ಎಂದಾಗಬೇಕು.
3. 3ನೆಯ ಶರಣ ಮೇಳಕ್ಕೆ 501 ರೂ ದೇಣಿಗೆ ನೀಡಿದ್ದ, ಶರಣೆ. ಮಹಾದೇವಮ್ಮ ಬಸವಲಿಂಗಪ್ಪ ಗೌಡ, ಬಾಳಗೂಡು ಗ್ರಾಮ, ತಾ- ಸಾಗರ ಇವರ ಹೆಸರು ಪ್ರಕಟಿಸದಿದ್ದುದಕ್ಕೆ ವಿಷಾದಿಸುತ್ತೇವೆ.

ಪ್ರವಚನದ ಸಿಬ್ಬಂದಿ ವೆಚ್ಚಕ್ಕಾಗಿ ದೇಣಿಗೆ ನೀಡಿದ ದಾಸೋಹಿಗಳು

ಶರಣ. ಸಿದ್ಧರಾಮಪ್ಪ ಬಾಲಪ್ಪಗೋಳ. ಗುಲಬರ್ಗಾ	1 ಚೀಲ ಅಕ್ಕಿ
ಶರಣ. ಶಿವಶರಣಪ್ಪ ನಿಗ್ಗುಡಗಿ, ಗುಲಬರ್ಗಾ	1 ಚೀಲ ತೊಗರಿಬೇಳೆ
ಶರಣ. ತಿಪ್ಪಣ್ಣ ಜಕಾತಿ, ಗುಲಬರ್ಗಾ	501-00
ಶರಣ. ಎನ್. ಶಿವಲಿಂಗಯ್ಯ, ಗುಲಬರ್ಗಾ	501.00
ಕುಮಾರಿ ಶ್ರೀದೇವಿ ವೀರಣ್ಣ ಬೊಮ್ಮನಹಳ್ಳಿ	501-00
ಶರಣ. ಶಂಕರಪ್ಪ ಗುಂಡಪ್ಪ ಮಹಾಂತಗೋಳ, ಗುಲಬರ್ಗಾ	1 ಚೀಲ ಅಕ್ಕಿ
,, ,,	1 ಚೀಲ ಗೋಧಿ
ಗುಪ್ತವಾಗಿ ಪ್ರಸಾದ ವೆಚ್ಚಕ್ಕಾಗಿ, ಗುಲಬರ್ಗಾ	501-00
ಶರಣ. ಸಿ. ಎಸ್. ಮಲ್ಲಿಕಾರ್ಜುನ, ಗುಲಬರ್ಗಾ	501.00
ಶರಣೆ. ಯೋಗಮ್ಮ ಬಿರಾದಾರ, ಗುಲಬರ್ಗಾ	501-00
ಶರಣ. ಕರಿಬಸಪ್ಪ ಶಿವಶರಣಪ್ಪ ಕಲಶೆಟ್ಟಿ, ಗುಲಬರ್ಗಾ	501-00
ಶರಣೆ. ಶಾಂತಾಬಾಯಿ ಹಾಗರಗಿ, ಗುಲಬರ್ಗಾ	501-00
ಶರಣೆ. ಡಾ॥ ಅನ್ನಪೂರ್ಣಮ್ಮ ಹಾಗರಗಿ. ಗುಲಬರ್ಗಾ	1 ಚೀಲ ಗೋಧಿ
,, ,,	1 ಪೆಂಟೆ ಬೆಲ್ಲ
ಶರಣ. ಬಸವರಾಜಪ್ಪ ಕಾಳಗಿ, ಗುಲಬರ್ಗಾ	50 ಕೆ. ಜಿ. ಅಕ್ಕಿ
ಶರಣ. ರುದ್ರಪ್ಪ ಬಿಲಗುಂದಿ, ಗುಲಬರ್ಗಾ	2 ಚೀಲ ಅಕ್ಕಿ

ಶುಭಹಾರೈಕೆಗಳು

ಕಲ್ಯಾಣನಾಡಿನ ರಾಜಧಾನಿಯಾಗುತ್ತ ಬೃಹತ್ತಾಗಿ ಬೆಳೆಯುತ್ತಿರುವ ಕಲುಬರ್ಗಿ ನಗರದ ಜನರು ಅಧಿಕ ಪ್ರಮಾಣದಲ್ಲಿ ನೆರೆದು, ಪ್ರವಚನ ಕೇಳಿದ್ದೇ ಅಲ್ಲದೆ ಉದಾರ ವಾಗಿ ಧನ ದಾಸೋಹ ಮಾಡಿದ್ದಕ್ಕಾಗಿ ಹೃತ್ಪೂರ್ವಕವಾಗಿ ಶುಭವನ್ನು ಹಾರೈಸುತ್ತೇವೆ. ವಿಶ್ವಗುರು ಮಂತ್ರ ಪುರುಷ ಬಸವಣ್ಣನವರು ಈ ದಾಸೋಹಿಗಳಿಗೆ, ಅವರ ಕುಟುಂಬ ವರ್ಗಕ್ಕೆಲ್ಲ ಆಯುರಾರೋಗ್ಯಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

—**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,**
ಬಸವ ಧರ್ಮ ಪೀಠ, ಕೂಡಲ ಸಂಗಮ.

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರ

ಪ್ರತಿವರ್ಷವೂ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು ಅಕ್ಟೋಬರ್ ತಿಂಗಳಲ್ಲಿ 15 ದಿವಸ ಕಾಲ ನಡೆಯುವುದಷ್ಟೆ. 1991 ನೇ ಸಾಲಿನ ಶಿಬಿರವು ಅಕ್ಟೋಬರ್ 13 ರಿಂದ 27 ರ ವರೆಗೆ ನಡೆಯಲಿದೆ. ಪ್ರತಿವರ್ಷವೂ ಅಕ್ಟೋಬರ್ 2 ರಿಂದ 16 ರ ವರೆಗೆ ಇರುತ್ತಲಿದ್ದಿತು. ಈ ಬಾರಿ ಮಹತ್ವಪೂರ್ಣ ಕಾರಣಕ್ಕಾಗಿ ದಿನಾಂಕಗಳಲ್ಲಿ ಬದಲಾವಣೆಯಾಗಿದೆ.

1. ಭಾನುವಾರ 13-10-1991 ರ ಬೆಳಿಗ್ಗೆ 10 ಗಂಟೆಗೆ ಶಿಬಿರದ ಉದ್ಘಾಟನೆ ನಡೆಯುತ್ತದೆ.
2. ಭೃತ್ಯಾಚಾರ ಗಣದ ತರಬೇತಿಯೂ ಜೊತೆಗೇ ಆರಂಭವಾಗುತ್ತದೆ.
3. 25–10–1991 ಮತ್ತು 26–10–1991 ರಂದು ಭಕ್ತಿ ಪಕ್ಷ ಸಮ್ಮೇಳನ, ಬಸವ ಧರ್ಮ ಸಂಸತ್ ಸಭೆ ನಡೆಯುತ್ತಲಿದ್ದು, ರಾಷ್ಟ್ರೀಯ ಬಸವ ದಳ ಸಂಘಟನೆ ಮತ್ತು ಶರಣ ಮೇಳ ಪ್ರಚಾರದ ರೂಪುರೇಷೆ ನಿರ್ಧರಿಸಲಾಗುವುದು.
4. ಭಾನುವಾರ 27–10–1991 ರಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಷಷ್ಠ್ಯಬ್ದಿ ಸಮಾರಂಭ ಮತ್ತು ಅಭಿನಂದನ ಕಾರ್ಯಕ್ರಮ ಜರುಗಲಿವೆ. ಈ ಕಾರ್ಯಕ್ರಮ ನಡೆಯುವ ಸ್ಥಳದ ವಿವರವನ್ನು ನಂತರ ತಿಳಿಸಲಾಗುವುದು.

ದಿ. 13-10-1991 ರಿಂದ 26-10-1991ರ ವರೆಗೆ ನಡೆಯುವ ಎಲ್ಲ ಕಾರ್ಯಕ್ರಮಗಳೂ ಬಸವ ಗಂಗೋತ್ರಿಯಲ್ಲಿ ಜರುಗುತ್ತವೆ. ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಸಮೀಪವಿದ್ದು, ಬೆಂಗಳೂರಿನಿಂದ 21 ಕಿ. ಮೀಟರ್ ದೂರದಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿದೆ.

1. ಊಟ-ವಸತಿಯ ಶುಲ್ಕ 150 ರೂ.
2. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ 100 ರೂ.
3. ಭೃತ್ಯಾಚಾರ ಗಣ ತರಬೇತಿ ಕಮ್ಮಟದಲ್ಲಿ ಭಾಗವಹಿಸಿ, ಗಣದ ಸದಸ್ಯರಾಗಿ ಶರಣ ಮೇಳದಲ್ಲಿ ಸೇವೆ ಮಾಡುವ ಸ್ವಯಂ ಸೇವಕರಿಗೆ ಉಚಿತ.
4. ಆರ್ಥಿಕ ಅನಾನುಕೂಲತೆ ಇದ್ದು, ತರಬೇತಿ ಪಡೆದುಕೊಳ್ಳಬೇಕು, ಶರಣರ ಸಂಗದಲ್ಲಿ ಇರಬೇಕು ಎನ್ನುವವರು ಮೊದಲೇ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು.
5. ಅಕ್ಟೋಬರ್ 25, 26 ರಂದು ನಡೆಯುವ ಭಕ್ತಿಪಕ್ಷ ಸಮ್ಮೇಳನದಲ್ಲಿ ಭಾಗವಹಿಸುವ ಸದಸ್ಯರು ಊಟ ವಸತಿಗಳ ಶುಲ್ಕವೆಂದು ಒಬ್ಬರಿಗೆ 40 ರೂ.

ಕೊಡಬೇಕು. ಪೂರ್ಣಾವಧಿ ಶಿಬಿರಶುಲ್ಕ 150 ರೂ ಕಟ್ಟಿದವರು, ಈ ಶುಲ್ಕವನ್ನೇನೂ ಕಟ್ಟಬೇಕಾಗಿಲ್ಲ.

ವಿಶೇಷ ಸೂಚನೆ

ತರಬೇತಿಯ ಅವಧಿಯಲ್ಲಿ ಪ್ರಾರ್ಥನೆ, ಪೂಜೆ, ಧ್ಯಾನ, ಯೋಗಾಸನ, ಪ್ರವಚನ ಉಪನ್ಯಾಸ ಮಾಡುವದನ್ನು ಕಲಿಸಲಾಗುವುದು. ಮತ್ತು ಅನೇಕ ರಾಷ್ಟ್ರೀಯ ಬಸವ ದಳಗಳವರು ಪ್ರಾಯೋಗಿಕ ತರಬೇತಿ ಇಲ್ಲದೆ ಸರಿಯಾಗಿ ಚಟುವಟಿಕೆ ನಡೆಸಲು ಆಗದು. ಪ್ರತಿ ರಾಷ್ಟ್ರೀಯ ಬಸವ ದಳದಿಂದ ಕನಿಷ್ಟಪಕ್ಷ ಇಬ್ಬರಾದರೂ ತರಬೇತಿ ಹೊಂದುವುದು ಅತ್ಯಗತ್ಯ. ಬಸವ ಧರ್ಮ ಸಂಸತ್ ಸದಸ್ಯರು ಸಹ ತಾತ್ತ್ವಿಕ ನಿಖರತೆ ಮತ್ತು ಪ್ರಾಯೋಗಿಕ ತರಬೇತಿ ಹೊಂದಿರಬೇಕು. ಬಸವ ಧರ್ಮ ಸಂಸತ್ ಸದಸ್ಯರು, ಶಾಸಕರ ರೀತಿ ನಿರ್ಣಾಯಕ ಕರ್ತವ್ಯದ ಹೊಣೆಹೊತ್ತವರು. ಅವರೇ ತಾತ್ತ್ವಿಕ ದೋಷ ಎಸಗುತ್ತಿದ್ದರೆ, ನೋಡುವವರಿಗೆ ವಿಲಕ್ಷಣವೆನಿಸುವುದು. ಆದ್ದರಿಂದ ಶಿಬಿರದಲ್ಲಿ ಭಾಗವಹಿಸಿ ತಾತ್ತ್ವಿಕ ಸಂದೇಹ, ಆಚಾರದ ವ್ಯತ್ಯಾಸವನ್ನು ಪರಿಹರಿಸಿಕೊಳ್ಳಬೇಕು. ಶರಣ ಬಂಧುಗಳು ಒಟ್ಟಾಗಿ ಸೇರುವುದು ಶರಣ ಮೇಳದಲ್ಲಿ. ಆಗ ಹೆಚ್ಚಿನವರಿಗೆ ಬೇರೆ ಬೇರೆ ಹೊಣೆಗಾರಿಕೆ ಇರುತ್ತದೆ. ಮತ್ತು ಕಾರ್ಯಕ್ರಮದ ಒತ್ತಡದಲ್ಲಿ ಚರ್ಚೆ ಮಾಡಲು ಹೆಚ್ಚಿನ ಅವಕಾಶವೂ ಇರುವುದಿಲ್ಲ. ಆದ್ದರಿಂದ ಶಿಬಿರದಲ್ಲಿ ಭಾಗವಹಿಸುವ ಬಗ್ಗೆ ಸಮಯಾವಕಾಶ ಮಾಡಿಕೊಳ್ಳಬೇಕು. ಹೊರರಾಜ್ಯಗಳ ರಾಷ್ಟ್ರೀಯ ಬಸವ ದಳಗಳವರು ಕನ್ನಡ ಬಲ್ಲಂತಹ ಕಾರ್ಯಕರ್ತರನ್ನು ತರಬೇತಿಗೆ ಕಳಿಸಿಕೊಡಬೇಕು.

ಭೃತ್ಯಾಚಾರ ಗಣಕ್ಕೆ ತರಬೇತಿ ಕೊಡುವ ಗಣನಾಯಕರು ಈ ಶಿಬಿರದಲ್ಲಿ ಎಲ್ಲ ಶರಣ ಬಂಧುಗಳಿಗೆ ಧ್ವಜ ನಿವೇಶನ ರಚನೆ, ಧ್ವಜ ವಂದನೆ, ಧ್ವಜಗೀತೆ, ಮುಂತಾದ ತರಬೇತಿಯನ್ನು ಕೊಡಲಿದ್ದಾರೆ. ಇದನ್ನು ಕಲಿತು, ಅದೇ ಶಿಸ್ತಿನಿಂದ ಎಲ್ಲ ಕಡೆಯಲ್ಲೂ ಧ್ವಜಾರೋಹಣ ನಿರ್ವಹಿಸಬೇಕು. ಧಾರ್ಮಿಕ ಶಿಬಿರದಲ್ಲಿ, ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ತರಬೇತಿ ನೀಡಿದರೆ, ಯೋಗಾಸನ ಪಟುಗಳಾದ ಶರಣ. ಬಾಣೂರು ಚನ್ನಪ್ಪ, ಶರಣ. ಜಗದೀಶ ತಿಪಟೂರು ಅವರು ಯೋಗಾಸನ ತರಬೇತಿಯನ್ನು, ಶರಣ ಬಸವರಾಜಪ್ಪ, ದೊಡ್ಡಬಳ್ಳಾಪುರ, ಶರಣ. ದಾಸಪ್ಪ, ತಿಪಟೂರು ಇವರು ಶಿಸ್ತು, ಸೇವೆ, ಶ್ರಮದಾನದ ತರಬೇತಿ ನೀಡಲಿರುವರು.

ಶಿಬಿರದ ನಿರ್ವಹಣೆಯನ್ನು ಹೊತ್ತಿರುವ ಕೆಳಕಂಡ ಸಂಸ್ಥೆಗೆ ಶಿಬಿರ ಶುಲ್ಕ, ಸಮ್ಮೇಳನ ಶುಲ್ಕಗಳನ್ನು ಕಳಿಸಬೇಕು.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 2 ನೇ ಬ್ಲಾಕ್,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560010

ರಾಷ್ಟ್ರೀಯ ಬಸವ ದಳ ಮತ್ತು ಬಸವ ಧರ್ಮ ಸಂಸತ್ ಸದಸ್ಯರ ವಿಳಾಸ ಸೂಚಿ (ಶರಣ ಮಾಲೆ)

ಪ್ರತಿವರ್ಷಕ್ಕೊಮ್ಮೆ ರಾಷ್ಟ್ರೀಯ ಬಸವ ದಳಗಳ ಮತ್ತು ಬಸವ ಧರ್ಮ ಸಂಸತ್ ಸದಸ್ಯರ ವಿಳಾಸವನ್ನು ಒಳಗೊಂಡ ವಿಳಾಸ ಸೂಚಿ (*Directory*) ಮಾಡಬೇಕೆಂಬ ಸೂಚನೆ ಕೆಲವು ಸದಸ್ಯರಿಂದ ಬಂದಿದೆ.

೧. ರಾಷ್ಟ್ರೀಯ ಬಸವ ದಳ -

ಸ್ಥಾಪನೆಗೊಂಡ ದಿನಾಂಕ, ಕಾರ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಅವರ ಪೂರ್ಣವಿಳಾಸ (ಫೋನ್ ನಂಬರ್ ಸಹಿತ), ಆ ಊರಿನಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸುವ ಸ್ಥಳ, ವಾರ, ಸಮಯ, ಪ್ರಾರ್ಥನಾ ಸ್ಥಳಕ್ಕೆ ಬರುವ ಮಾರ್ಗ ಸೂಚನೆ- ಇಷ್ಟನ್ನು ವಿವರವಾಗಿ ತಿಳಿಸಬೇಕು.

ಇದೇ ರಾಷ್ಟ್ರೀಯ ಬಸವ ದಳ ಘಟಕವು, ಇನ್ನಿತರ ದಿವಸಗಳಲ್ಲಿ ಸ್ಥಳೀಯವಾಗಿ ಅಥವಾ ಪರಸ್ಥಳಗಳಿಗೆ ಹೋಗಿ ಪ್ರಾರ್ಥನೆ-ಪ್ರವಚನ ಮಾಡಿ ಬರುತ್ತಿದ್ದರೆ ಅದರ ಸಮಯ, ವಾರ, ಊರಿನ ಹೆಸರು ತಿಳಿಸಬೇಕು. ಅಲ್ಲಿ ಸಮಿತಿ ಆಗಿದ್ದರೆ, ಪ್ರತ್ಯೇಕವಾಗಿ ನೋಂದಾಯಿಸಬೇಕು. ಈ ಮಾಹಿತಿಯೊಡನೆ ಮುದ್ರಣ ವೆಚ್ಚಕ್ಕೆ ಮತ್ತು ಒಂದು ಉಚಿತ ಪ್ರತಿಗೆಂದು 50 ರೂಗಳನ್ನು ಎಂ. ಓ. ಅಥವಾ ಡಿ. ಡಿ. ರೂಪದಲ್ಲಿ ಕಳಿಸಬೇಕು.

2. ಬಸವ ಧರ್ಮ ಸಂಸತ್ ಸದಸ್ಯರು.

ಬಸವ ಧರ್ಮ ಸಂಸತ್ ಸದಸ್ಯರು, ತಮ್ಮ ಪೂರ್ತಿ ಹೆಸರು, ತಂದೆ ಹೆಸರು, ಅಡ್ಡ ಹೆಸರು, ವಯಸ್ಸು, ಕಾಯಕ, ಪೂರ್ಣ ವಿಳಾಸ, ಫೋನ್ ನಂಬರು, ವಿಶೇಷ ಸಾಧನೆ, ವಿಶೇಷ ಅಭಿರುಚಿ, ಜೀವನದ ಧ್ಯೇಯ ಕುರಿತು ಬರೆದು ಕಳಿಸಬೇಕು. ಸ್ಪಷ್ಟವಾಗಿ ಇರುವ ಕಪ್ಪು-ಬಿಳುಪು ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಕಳಿಸಬೇಕು. ಮುದ್ರಣ ವೆಚ್ಚಕ್ಕೆ ಮತ್ತು ಒಂದು ಉಚಿತ ಪ್ರತಿಗೆಂದು (ಬ್ಲಾಕ್ ತಯಾರಿಕೆ ವೆಚ್ಚ ಸೇರಿ) 65 ರೂ ಕಳಿಸಬೇಕು. ವಿಳಾಸ ಸೂಚಿಯನ್ನು ಶಿಬಿರದ ಮುಕ್ತಾಯದಂದು ಬಿಡುಗಡೆ ಮಾಡಿ, ಸದಸ್ಯರಿಗೆ ಉಚಿತ ಪ್ರತಿ ವಿತರಣೆ ಮಾಡಲಾಗುವುದು. ಬಾಕಿ ಆಸಕ್ತರು ಬಸವ ಧರ್ಮ ಸಂಸತ್ ಸದಸ್ಯರ ವಿವರ ಮತ್ತು ರಾಷ್ಟ್ರೀಯ ಬಸವ ದಳಗಳ ವಿವರ ಬೇಕೆನ್ನುವವರು ಪ್ರತಿಗಳನ್ನು ಕೊಳ್ಳಲು ಬರುವಂತೆ ಸ್ವಲ್ಪ ಹೆಚ್ಚಿಗೆ ಪ್ರತಿ ಮಾಡಿಸಲಾಗುವುದು. ಈ ವಿಳಾಸ ಸೂಚಿಯಲ್ಲಿ ಅತ್ಯಗತ್ಯವಾದ ಇನ್ನೂ ಕೆಲವು ಮಾಹಿತಿ ಕೊಡಲಾಗುವುದು.

ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು ಮತ್ತು ಬಸವ ಧರ್ಮ ಸಂಸತ್ ಸದಸ್ಯರು ಮರೆಯದೆ, ಉದಾಸೀನ ಮಾಡದೆ ಜುಲೈ 31 ರೊಳಗೆ ತಲ್ಪುವಂತೆ ವಿವರಗಳನ್ನು ಮತ್ತು ನಿಗದಿ ಪಡಿಸಿದ ಹಣವನ್ನು ಕಳಿಸಬೇಕು, ಈ ವಿನೂತನ ಪ್ರಯೋಗ ಯಶಸ್ವಿಯಾಗುವಂತೆ ಸಹಕರಿಸಬೇಕು.

ಶ್ರೀ ನಿಜಗುಣಾನಂದ ಸ್ವಾಮಿ
ಬಸವಮಂಟಪ, 2035, 2ನೇ ಬ್ಲಾಕು,
20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು-10

ಬೆಳಗುತಿವೆ ಬಸವಜ್ಯೋತಿಗಳೆರಡು

ನೋಡಿಲ್ಲಿ ಬೆಳಗುತಿವೆ ಬಸವ ಜ್ಯೋತಿಗಳೆರಡು
ಸದ್ಗುರು ಲಿಂಗಾನಂದ, ಮಾತಾಜಿ ರೂಪದಲಿ ||ಪ||
ಬಸವ ಗುರು ಕರುಣೆಯಿಂ ಬಸವ ಕಿರಣಗಳಾಗಿ,
ಬಸವ ವಚನದ ಸುಧೆಯ ನೀಡಿ ಜಗಕೆ ।
ಬಸವ ಬೆಳಕನು ಹರಿಸಿ ಮುನ್ನಡೆಸಿ ಹರಸುತಲಿ
ನೋಡಿಲ್ಲಿ ಬೆಳಗುತಿವೆ ಬಸವ ಜ್ಯೋತಿಗಳೆರಡು ||೧||
ಸ್ವಾರ್ಥದಾ ಸುಖ ತೊರೆದು ನಿಸ್ವಾರ್ಥ ಸೇವೆಯಲಿ
ನುಡಿಯಲ್ಲಿ ನಡೆಯಲ್ಲಿ ಬಸವ ಚೇತನ ತುಂಬಿ
ಜೀವನವೇ ಮುಡಿಪಾಯ್ತು ಬಸವ ನಿನಗೆಂದೇ
ನೋಡಿಲ್ಲಿ ಬೆಳಗುತಿವೆ ಬಸವ ಜ್ಯೋತಿಗಳೆರಡು ||೨||
ವಿಶ್ವಗುರು ನೀನೆಂದು, ಮಂತ್ರಪುರುಷ ನೀನೆಂದು
ಆರಾಧ್ಯ ಗುರುವೆಂದು ನಿರುತ ನಂಬುತಲಿಂದು
ಕೂಡಲ ಸಂಗಮದ ಕಲ್ಯಾಣವಾಗಿಸುತ
ನೋಡಿಲ್ಲಿ ಬೆಳಗುತಿವೆ ಬಸವ ಜ್ಯೋತಿಗಳೆರಡು ||೩||
ತಿಳಿದಾಯ್ತು ಚಿತ್ತ-ಮನ ಇವರ ವಾಣಿಯ ಕೇಳಿ
ಪುಳಕಗೊಂಡಿತು ಜೀವ ಬಸವ ಪಥದಲ್ಲಿ ನಡೆದು
ಸಕಲ ಜೀವರ ಹಿತಕೆ ಶ್ರೀಗಂಧದೊಲು ಸವೆವ
ದಿವ್ಯ ಚೇತನಗಳಿಗೆ ನಮಿಸುವೆವು ಎಂದೆಂದು ||೪||

(ಗುಲಬರ್ಗಾ ಪ್ರವಚನದ ಮುಕ್ತಾಯ ಸಮಾರಂಭದಲ್ಲಿ ಸಾಲಿಮಠ ಸಹೋದರಿಯರು ರಚಿಸಿ, ಹಾಡಿದ ಗೀತೆ.)

—ಶರಣೆ. ಇಂದುಮತಿ ಜಿ. ಮಠ, ಎಂ.ಎ.
ಸಮಾಜ ಶಾಸ್ತ್ರದ ಉಪನ್ಯಾಸಕಿ, ಬಿಜಾಪುರ.

ಉದಾರವಾಗಿ ದೇಣಿಗೆಗಳನ್ನು ನೀಡುವ ದಾನಿಗಳಿಗೆ ಸಂತೋಷದ ಸುದ್ದಿ

ಕೂಡಲ ಸಂಗಮ ಸುಕ್ಷೇತ್ರವು ಲಿಂಗವಂತ ಧರ್ಮಾನುಯಾಯಿಗಳ ಪವಿತ್ರ ಕ್ಷೇತ್ರವಾಗಿದ್ದು, ನಿತ್ಯವೂ ಬರುವ ಪ್ರವಾಸಿಕರ ಸಂಖ್ಯೆ ಬೆಳೆಯುತ್ತಿದೆ. ಈ ಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸಲು ಬಸವ ಧರ್ಮ ಪೀಠ ವಿಶ್ವಸ್ಥ ಸಂಸ್ಥೆಯು 1987ರಿಂದ ಕಾರ್ಯಮಗ್ನವಾಗಿದೆಯಷ್ಟೆ. ಈ ಸಾರ್ವಜನಿಕ ಹಿತಾಸಕ್ತಿಯ ಪವಿತ್ರ ಕಾರ್ಯದಲ್ಲಿ ಸಂಪೂರ್ಣವಾಗಿ ಭಾಗಿಯಾಗಲು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಮುಂದೆ ಬಂದಿದೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80 G ಇನ್‌ಕಮ್ ಟ್ಯಾಕ್ಸ್ ರೀಯಾಯಿತಿಯನ್ನು ಹೊಂದಿದೆ ಎಂದು ತಿಳಿಸಲು ಅತೀವ ಸಂತೋಷವೆನಿಸುತ್ತಿದೆ. ಈ ವರ್ಷದ ರೀಯಾಯಿತಿಯು 10-4-1991 ರಿಂದ 31-3-1992 ರವರೆಗೆ ಚಾಲ್ತಿಯಲ್ಲಿದೆ. ದೊಡ್ಡ ಪ್ರಮಾಣದ ದೇಣಿಗೆ ಕೊಡುವವರಿಗೆ ಈ 80 G ರಿಯಾಯಿತಿ ಬಹಳ ಅನುಕೂಲಕರ ಇರುವುದರಿಂದ, ದಾನಿಗಳು ಸಹೃದಯತೆಯಿಂದ ಮುಂದೆ ಬರಬೇಕು. ಕೆಳಗಿನಂತೆ ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ಬರೆದು, ಎರಡರಲ್ಲಿ ಒಂದು ವಿಳಾಸಕ್ಕೆ ಕಳಿಸಬಹುದು.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬೆಂಗಳೂರು.

ವಿಳಾಸ : 1. **ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್**
ಬಸವ ಮಂಟಪ, 2035
ಎರಡನೆಯ ಬ್ಲಾಕು, ಕಾರ್ಡ್‌ರಸ್ತೆ
ರಾಜಾಜಿನಗರ, ಬೆಂಗಳೂರು-560010

2. **ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್**
ಮಹಾಮನೆ ಮಹಾಮಠ
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಿಜಾಪುರ

ವಿ. ಸೂ: ಸರ್ಟಿಫಿಕೇಟ್ ನಂಬರನ್ನು ರಸೀತಿಯಲ್ಲಿ ಮುದ್ರಿಸಲಾಗಿದೆಯಲ್ಲದೇ, ಪ್ರತ್ಯೇಕವಾಗಿಯೂ ಜಿರಾಕ್ಸ್ ಪ್ರತಿ ದಾನಿಗಳಿಗೆ ನೀಡಲಾಗುವುದು.

ಸಮಸ್ಯೆ ? ಸಮಾಧಾನ !

—ಮಾತಾಜಿ

—ಶ್ರೀಯುತ ಬಿ. ವಿ. ವೀರಭದ್ರಪ್ಪ, ಕನ್ನಡ ಪ್ರಾಧ್ಯಾಪಕರು, ವಿದ್ಯಾನಗರ, ದಾವಣಗೆರೆ ಇವರು 30-5-1991 ರಂದು ಒಂದು ಪತ್ರ ಬರೆದು 'ಡಾ॥ ಬಸವರಾಜು ಅವರ ವಚನ ವಿಶ್ಲೇಷಣೆ'(ಕಲ್ಯಾಣಕಿರಣ, ಏಪ್ರಿಲ್ 91) ಎಂಬ ಬರಹದ ಬಗ್ಗೆ ಕೆಲವು ಸಂದೇಹ ವ್ಯಕ್ತಪಡಿಸಿದ್ದಾರೆ. ಆ ಸಂದೇಹಗಳಿಗೆ ಉತ್ತರವನ್ನು ಕೊಡಲು ಯತ್ನಿಸುವೆ.

● 1. ಲೇಖನವನ್ನು ಆಸಕ್ತಿಯಿಂದ ಓದಿದೆ. ಬಸವರಾಜು ಅವರು ಕೆಲವು ವಚನಗಳನ್ನು ಪ್ರಕ್ಷಿಪ್ತವೆಂದು ಭಾವಿಸಿರುವ ಬಗ್ಗೆ ತಾವು ದಿಗಿಲುಗೊಂಡಿರುವುದಾದರೂ ಏಕೆಂದು ಅರ್ಥವಾಗುವುದಿಲ್ಲ. ಅವರು ಪ್ರಕ್ಷಿಪ್ತವೆಂದು ಭಾವಿಸಿರುವ ಪ್ರತಿಯೊಂದು ವಚನಕ್ಕೂ ಸಕಾರಣವನ್ನು ಒದಗಿಸಿದ್ದಾರೆ.

○ ಶ್ರೀ ಬಸವರಾಜು ಅವರು ಪ್ರಕ್ಷಿಪ್ತವೆಂದು ಆಯ್ಕೆ ಮಾಡಿರುವ ವಚನಗಳಿಗೆ ಕೊಟ್ಟ ಕಾರಣ ಸಕಾರಣವಲ್ಲ. ಯಾರನ್ನೋ ಸಮಾಧಾನ ಪಡಿಸಲು ಹೊರಟಂತಿದೆ. " ದಯವಿಟ್ಟು ತಪ್ಪುತಿಳಿಯಬೇಡಿ, ನಮ್ಮ ಬಸವಣ್ಣನವರು ನಿಮ್ಮನ್ನು (ಅಂದರೆ ಬಹುದೇವತೋಪಾಸಕರು, ಜಾತಿವಾದಿಗಳು) ಖಂಡಿತ ಟೀಕಿಸಿಲ್ಲ. ಅವರ ಹೆಸರಲ್ಲಿ ಯಾವನೋ ಕುಕವಿ ಬರೆದಿದ್ದಾನೆ" ಎಂದು ಸಮಜಾಯಿಷಿ ಮಾಡಲು ಹೊರಟಿದ್ದಾರೆ. ಆದ್ದರಿಂದ, ಯಾವುದೋ ಒಂದು ಮಹತ್ವಪೂರ್ಣ ಆಲೋಚನೆ, ಸಿದ್ಧಾಂತವನ್ನು ಹೇಳುವ ವಚನವನ್ನು ಪ್ರಕ್ಷಿಪ್ತ ಎಂದು ಕಡೆಗಣಿಸಿದರೆ ದಿಗಿಲುಗೊಳ್ಳದೆ ಇರಲು ಸಾಧ್ಯವೇ ?

● 2. ಬಸವಣ್ಣನವರ ಸಂದೇಹಾತೀತವಾದ ವಚನಗಳ ಭಾಷೆ, ಶೈಲಿ, ಕಾವ್ಯ ಗುಣ, ದೃಷ್ಟಾಂತಗಳ ಬಳಕೆ, ಗಾಂಭೀರ್ಯ ಮೀರದ ನಿಷ್ಠುರತೆಗಳಂತಹ ಆಂತರಿಕ ಆಧಾರಗಳಿಂದ 'ಅಸಲಿ' ವಚನಗಳಾವುವು 'ನಕಲಿ' ವಚನಗಳಾವುವು ಎಂದು ತರ್ಕಿಸುವುದು ಸಾಧ್ಯವಿದೆ. ಪ್ರಕ್ಷಿಪ್ತವೆಂದು ಹೇಳಲಾಗುವ ವಚನಗಳನ್ನು ತೆಗೆದು ಹಾಕಿದರೆ ಬಸವಣ್ಣನವರ ವಚನಗಳ ಸಂಖ್ಯೆ ಕಡಿಮೆಯಾಗುತ್ತದಲ್ಲಾ ಎಂಬ ಕೊರಗು ತಮಗೆ ಇರುವಂತಿದೆ. ವಚನಗಳ ಸಂಖ್ಯಾಬಾಹುಳ್ಯದಿಂದ ಬಸವಣ್ಣನವರ ಶ್ರೇಷ್ಠತೆಯನ್ನು ಅಳೆಯಲಾಗದು ಅಲ್ಲವೆ?

○ ಕೇವಲ ಸಂಖ್ಯಾಬಾಹುಳ್ಯದ ಮೇಲೆ ವಚನಗಳ ಶ್ರೇಷ್ಠತೆ ಅಳೆಯುವ ಮೂಢರು ನಾವಲ್ಲ. ತಾತ್ತ್ವಿಕ, ಸೈದ್ಧಾಂತಿಕ ದೋಷಗಳಿಂದ ಕೂಡಿದ, ಅನ್ಯರಿಂದ

4೨

ತೂರಿಸಲ್ಪಟ್ಟ ವಚನಗಳು ಚನ್ನಬಸವಣ್ಣನವರಲ್ಲಿ ಹೆಚ್ಚಾಗಿ, ಬಸವಣ್ಣನವರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಇರುವ ಬಗ್ಗೆ ಸಂದೇಹವಿಲ್ಲ. ಆದರೆ ಶ್ರೀ ಬಸಪರಾಜುರವರು ಪ್ರಕ್ಷಿಪ್ತ ವನ್ನಲು ಬಳಸಿರುವ ಅಳತೆಗೋಲು ತೀರಾ ದುರ್ಬಲವಾಗಿದೆ.

ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ತಾತ್ತ್ವಿಕ ನಿರ್ದಿಷ್ಟತೆ, ನಿರ್ಭಯತೆ ಇದ್ದವರು ; ಸತ್ಯವನ್ನೇ ಹೇಳುವವರು. ಪ್ರಿಯವಾದ ಅಸತ್ಯವನ್ನು ಹೇಳದವರು, ಅಥವಾ ಸತ್ಯವನ್ನು ಬಹು ಪ್ರಿಯವಾಗಿಯೇ ಹೇಳಬೇಕು ಎನ್ನುವ ದಾಕ್ಷಿಣ್ಯ ಸ್ವಭಾವದವರಲ್ಲ. ಕಟುವಾಗಿದ್ದರೂ ಸತ್ಯವನ್ನು ಹೇಳುವರು. ಅದನ್ನೇ 'ಜಂಗಪೋಪದೇಶ ಶಸ್ತ್ರವೈದ್ಯ ', - 'ಸಂಗನ ಶರಣರ ವಚನ ಅಧರಕ್ಕೆ ಕಹಿ' ಎಂಬ ಮಾತಿನಲ್ಲಿ ಸ್ಪಷ್ಟವಾಗಿ ಬಸವಣ್ಣನವರು ಹೇಳಿದ್ದಾರೆ. ಆದ್ದರಿಂದ, ಸತ್ಯವನ್ನು, ಸಿದ್ಧಾಂತವನ್ನು ಪ್ರತಿಪಾದಿಸುವ ವಚನಗಳು ಪ್ರಕ್ಷಿಪ್ತ ಎಂದು ಕಡೆಗಣಿಸುವಾಗ ಬಹಳ ಎಚ್ಚರಿಕೆ, ಜವಾಬ್ದಾರಿ ಅತ್ಯಗತ್ಯ. ನಮ್ಮ-ನಿಮ್ಮ ದೃಷ್ಟಿ, ನಂಬಿಕೆ, ವಿಚಾರಧಾರೆಯ ಕಣ್ಣಿನಲ್ಲಿ ನೋಡದೆ, ಬಸವಾದಿ ಪ್ರಮಥರು ನಿಚ್ಚಳವಾಗಿ ಏನು ಹೇಳಬಯಸಿದ್ದರೆಂಬು ದನ್ನು ಬಹಳ ಮುಖ್ಯವಾಗಿ ತಿಳಿದುಕೊಳ್ಳಬೇಕು.

ವಚನಗಳು ಕಾವ್ಯಗುಣ, ಛಂದಸ್ಸು, ಪ್ರಾಸ ಮುಂತಾದುವುಗಳಿಂದ ಕೂಡಿದ್ದರೂ ಅವು ಕೇವಲ ಸಾಹಿತ್ಯದ ತುಣುಕುಗಳಲ್ಲ. ಅವುಗಳ ಮುಖ್ಯ ಉದ್ದೇಶ ತತ್ತ್ವಪ್ರತಿ ಪಾದನೆ, ಪ್ರಗತಿಪರ ಚಿಂತನೆಯುಳ್ಳ ಸಮಾಜದ ರಚನೆ. ಆದ್ದರಿಂದ ತತ್ತ್ವ-ಸಿಧ್ಧಾಂತವೇ ವಚನಗಳ ಅಸಲಿತನ–ನಕಲಿತನ ನಿರ್ಧರಿಸುವ ಅಳತೆಗೋಲು. ಡಾ॥ ಬಸವರಾಜು ಅವರು ತತ್ತ್ವದ ಅಳತೆಗೋಲು ಉಪಯೋಗಿಸದ ಕಾರಣ ಅವರ ಪ್ರಕ್ಷಿಪ್ತದ ಆಯ್ಕೆ ಸಮಂಜಸವಾಗಿಲ್ಲ.

● 3. ಡಾ॥ ಬಸವರಾಜು ಅವರು ಉದಾರವಾದಿಗಳಾದ ಕಾರಣ ಅವರಿಗೆ ಮತಾಂಧತೆಯ ವಚನ ಬೇಡವಾದರೆ ಜಾತಿವಾದಿಗಳು ವಿಶಾಲತೆ ಬೋಧಿಸುವ ಉದಾರ ವಾದದ ವಚನಗಳನ್ನು ಕತ್ತರಿಸಬಹುದು, ಎಂದು ವಾದಿಸಿರುವಿರಿ, ವಾಸ್ತವವಾಗಿ ಬಸವಣ್ಣನವರು ಉದಾರವಾದಿಗಳು, ಮತಾಂಧರಲ್ಲ ಎಂಬುದನ್ನು ಬಸವರಾಜು ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಇದರಲ್ಲಿ ಆಕ್ಷೇಪಕ್ಕೆ ಕಾರಣವಾದುದಾದರೂ ಏನು? ತಾವೇನಾದರೂ ಬಸವಣ್ಣನವರಲ್ಲಿ ಸಂಕುಚಿತತನ ಮತ್ತು ಮತಾಂಧತೆಗಳನ್ನು ಗುರುತಿ ಸುವಿರಾ ?

○ ಬಸವಣ್ಣನವರಲ್ಲಿ ಸಂಕುಚಿತತೆ-ಮತಾಂಧತೆ ಇಲ್ಲ. ಕಡ್ಡಾಯವಾದ ಏಕ ದೇವೋಪಾಸನೆ, ಜಾತಿವಾದವನ್ನು ವಿರೋಧಿಸುವಿಕೆ, ಶಾಸ್ತ್ರದಾಸ್ಯವನ್ನು ಒಪ್ಪದಿರು ವದು ಮುಂತಾದುವು ಕೆಲವರನ್ನು ಬಹಳ ಮುಜುಗರಕ್ಕೆ ಈಡು ಮಾಡುತ್ತವೆ. ಈ ಮಾತುಗಳು ಕೆಲವರನ್ನು ನೋಯಿಸುತ್ತವೆ ಎಂದು ಇವರೇ ಮೊದಲಿಗೆ ಅಂಥ ವಚನಗಳನ್ನು ಕಹಿಗುಳಿಗೆ ಎಂಬಂತೆ ನುಂಗುತ್ತಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆ ನೋಡಿರಿ :

572 ನೆಯ ವಚನವನ್ನು ಡಾ॥ ಬಸವರಾಜು ಅವರು ಪ್ರಕ್ಷಿಪ್ತ ಎಂದು ಗುರುತಿ ದ್ದಾರೆ.

ಆದಿ ಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲ ಸಂಗಮದೇವ.

ಅತ್ಯಂತ ಪ್ರಾಮಾಣಿಕವಾಗಿ, ನಿಷ್ಠುರವಾಗಿ ನುಡಿದಿರುವ ಒಂದು ಸತ್ಯವನ್ನು ಇಲ್ಲಿ ಕಾಣುತ್ತೇವೆ. ಇಂಥ ಅತ್ಯುತ್ತಮ ವಚನವೊಂದನ್ನು ಪ್ರಕ್ಷೇಪವೆಂದು ಕರೆಯುವುದು ಡಾ॥ ಬಸವರಾಜು ಅವರು ಮಾಡುವ ಮಹಾಪ್ರಮಾದವಲ್ಲವೆ? ಅಂದರೆ ಇವರಿಗೆ ಬಸವಾದಿ ಪ್ರಮಥರ ಧೋರಣೆ, ಹೋರಾಟದ ಉದ್ದೇಶವೇ ಅರ್ಥವಾಗಿಲ್ಲ. ಈ ವಚನವು ಬಸವಣ್ಣನವರು ಬರೆದುದು ಅಲ್ಲ ಎಂದು ಹೇಳಿ "ಶಿವಪುರಾಣ-ಶಿವಾಗಮ ಗಳನ್ನು ಬಿಟ್ಟು ಮಿಕ್ಕೆಲ್ಲ ಪುರಾಣಗಳೂ, ಇತಿಹಾಸಗಳೂ, ವೇದಗಳೂ. ಆಗಮಗಳೂ, ಹಿಂಸಾಮಯ ವಿಚಾರಗಳಿಂದ ತುಂಬಿದೆಯೆಂದು ಗೇಲಿಮಾಡುವುದೇ ಈ ವಚನದ ಉದ್ದೇಶ" ಎಂದು ಬೇರೆ ಈ ವಚನದ ಮೇಲೆ ಗೂಬೆ ಕೂರಿಸಿದ್ದಾರೆ.

ಶಿವಪುರಾಣ, ಶಿವಾಗಮಗಳನ್ನು ಎತ್ತಿಹಿಡಿದಿದ್ದಾರೆ ಎಂಬ ಭಾವ ವ್ಯಕ್ತಪಡಿ ಸಲು ಆಧಾರವೇನಿದೆ? "ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ" ಎನ್ನುವಲ್ಲಿ 'ಜಗತ್ಕರ್ತನಾದ ಪರಮಾತ್ಮ' ಎಂಬ ಭಾವವಿದೆ. ನಿಜ, ಕರ್ತನ ಮಹಿಮೆಗೆ ಇನ್ನು ಸರಿಸಾಟಿಯಾವುದು? ಬಸವರಾಜರು ಪ್ರಕ್ಷೇಪ ಮಾಡಿರುವ ವಚನದಲ್ಲಿ ತಪ್ಪು ಏನಿದೆ? ದೇವಿಯ ಪುರಾಣ, ಅಂದರೆ ಆದಿಶಕ್ತಿಯ ಪುರಾಣ ಉದ್ದಕ್ಕೂ ಶುಂಭಾ-ನಿಶುಂಭ, ರಕ್ತಬೀಜ, ಚಂಡಾ-ಮುಂಡ, ಮಹಿಷಾಸುರ ಮುಂತಾದ ದ್ರಾವಿಡ ರಾಜರ ಮಾರಣ ಹೋಮವನ್ನು, ವಧೆ ಯನ್ನು ರಂಗುರಂಗಾಗಿ ಬಣ್ಣಿಸುತ್ತದೆ. ಶಾಂತಿ-ಪ್ರೀತಿ-ಅನುಗ್ರಹ ಮುಂತಾದ ಯಾವ ದೈವೀ ಗುಣಗಳೂ ಇಲ್ಲಿಲ್ಲ. ಒಂದು ಪ್ರಸಂಗದಲ್ಲಿ ವ್ಯಗ್ರಳಾದ ದೇವಿ, ತನ್ನ ಪತಿ ಶಿವನೂ ಬಂದರೂ ಅರಿವಾಗದಷ್ಟು ರೋಷಾವಿಷ್ಟಳಾಗಿರುತ್ತಾಳೆ. ಆಗ ಪತಿಯನ್ನೇ ಕೆಡವಿ ಎದೆಯ ಮೇಲೆ ಕಾಲಿಡುತ್ತಾಳೆ. ಯಾವನಾದರೂ ಒಬ್ಬ ಗೃಹಸ್ಥ ತನ್ನ ಹೆಂಡತಿ ರೋಷಾವಿಷ್ಟಳಾಗಿ ತನ್ನ ಎದೆಯ ಮೇಲೆ ಕಾಲಿಟ್ಟು ನಿಂತರೆ ಆಕೆಯನ್ನು ದೇವಿ ಎಂದು ಪೂಜಿಸುವನೆ? ಗಂಡುಬೀರಿ, ಹೆಮ್ಮಾರಿ ಎಂದು ಹೊರಹಾಕುತ್ತಾನೆ. ನಾವು ಓದುವ ಸಾಹಿತ್ಯ ಏನನ್ನಾದರೂ ನಮಗೆ ಕಲಿಸುವಂತಿರಬೇಕು ತಾನೇ?

ವೇದಗಳು ಪ್ರತಿಪಾದಿಸುವ ಕರ್ಮಕಾಂಡದಲ್ಲಿ ಹೋತ, ಕುದುರೆ, ಆನೆ ಮುಂತಾದ ಪ್ರಾಣಿಗಳನ್ನು ಯಜ್ಞದ ಮೂಲಕ ಬಲಿಕೊಡುವ ಕ್ರಮದ ವರ್ಣನೆ, ಮಂತ್ರಸಹಿತ

ವಾದ ವಿಧಿವಿಧಾನ ಇದೆ. ಇದು ಸರಿಯೊ ? ಸತ್ತ ಪ್ರಾಣಿಗಳನ್ನು ಎತ್ತಿ ಒಯ್ಯುವ, ಸತ್ತ ಪ್ರಾಣಿಯನ್ನು ತಿನ್ನುವವರನ್ನು ಅಸ್ಪೃಶ್ಯರೆಂದು ಕರೆದು, ಊರ ಹೊರಗಿಡುವ ಮಡಿವಂತರು ಯಜ್ಞದ ಮೂಲಕ ಪ್ರಾಣಿಯನ್ನು ತಿಂದರೆ ಅಪರಾಧವಲ್ಲವೊ ? ಇಂಥ ಭೇಧಭಾವ ಕಂಡು, ನೊಂದು ಬಸವಣ್ಣನವರು—

" ಇದೇನಯ್ಯಾ ವಿಪ್ರರು, ನುಡಿದಂತೆ ನಡೆಯರು
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ.
" ಹೋಮದ ನೆವದಲ್ಲಿ ಹೋತನ ತಿಂಬ ಅನಾಮಿಕರು.
" ಸತ್ತುದನೆಳೆವನು ಅದೆತ್ತಣ ಹೊಲೆಯ
ಹೋತು ತಂದು ನೀವು ಕೊಲುವಿರಿ ?

ಎಂದು ಅಂದುದು, ಡಾ॥ ಬಸವರಾಜು ಅಂಥವರಿಗೆ ತುಂಬಾ ಮುಜುಗರದ ಸಂಗತಿ. ಬಸವಣ್ಣನವರಿಗೇ ಇಲ್ಲದ ಸಂಕೋಚ, ಮುಜುಗರ ಇವರಿಗೇಕೆ ?

ಸತ್ಯವನ್ನು ನುಡಿಯಲೂ ಎದಗಾರಿಕೆ ಬೇಕು. ದನಿ ಸತ್ತಂತೆ ಎಲ್ಲರೂ ವ್ಯವಸ್ಥೆಗೆ ಬಗ್ಗಿಕೊಂಡು, ಬಗ್ಗಿಕೊಂಡು ನಡೆಯುವಾಗ, ನಿರ್ಭಯವಾಗಿ ಮಾತನಾಡಿದುದೇ ಬಸವಣ್ಣನವರ ಧೀಮಂತಿಕೆ. ಬಸವಣ್ಣನವರ ಕಾಲದಲ್ಲಿ, ಪುರೋಹಿತಶಾಹಿ– ಅದರ ಹಿಡಿತದಲ್ಲಿ ರಾಜಸತ್ತೆ ಆಳ್ವಿಕೆ ನಡೆಸಿದಾಗ ನಿರ್ಭಯವಾಗಿ ಸತ್ಯದ ಪರವಹಿಸಿ ಮಾತನಾಡಿದ್ದಕ್ಕೇ ಬಸವಣ್ಣನವರು ವಿಚಾರಶೀಲರನ್ನು ಇಂದೂ ಅಯಸ್ಕಾಂತದಂತೆ ಆಕರ್ಷಿಸುತ್ತಿದ್ದಾರೆ. ಅಂದಾಗ ಇಂಥ ವೈಶಿಷ್ಟ್ಯವನ್ನು ಮುಜುಗರ ಪಟ್ಟು ಮರೆಸುವ ಸಾಹಸದಲ್ಲಿ ಡಾ॥ ಬಸವರಾಜು ಅವರು ಏಕೆ ಆಸಕ್ತಿ ತೋರಿಸಿದ್ದಾರೋ ?

ರಾಮ ಪುರಾಣ ವಾಲಿ, ರಾವಣ, ಮಾರೀಚ ಮುಂತಾದವರನ್ನು ವಧಿಸುವುದರಲ್ಲಿ ರಂಜನೀಯವಾದ ಆಸಕ್ತಿ ತೋರಿಸಿದರೆ, ಮಹಾಭಾರತ ತನ್ನ ಸ್ವಂತ ಕುಲದವರ, ಬಂಧುಗಳ ವಧೆಯಲ್ಲೇ ಆಸಕ್ತಿ ತೋರಿಸುತ್ತದೆ. ಹೀಗೆ ಇವೆಲ್ಲ ಬರೀ ಪಾಪ–ಪುಣ್ಯಗಳ ಸುಳಿಗೆ ಸಿಕ್ಕುವ ಕಥೆಗಳೇ ಆಗಿವೆ. ಆದರೆ ಜಗತ್ಕರ್ತನು ಹುಟ್ಟು-ಸಾವು, ಭವ-ಭಯ, ಕಾಮ-ಮೋಹ, ರೋಷ-ದ್ವೇಷ ಏನೂ ಇಲ್ಲದ ನಿಷ್ಕಲಂಕ. ನಿರಂಜನ. ಅವನ 'ಪುರಾಣ' ಅಂದರೆ ದೇವರ ಸ್ವರೂಪ ಚಿಂತನೆ, ಜಪ, ಧ್ಯಾನ ಅತ್ಯುತ್ತಮ. ಇದನ್ನು ಮಾಡಿ ಬದುಕನ್ನು ಸಾರ್ಥಕ ಮಾಡಿಕೊಳ್ಳಿ, ಎಂದು ಬಸವಣ್ಣನವರು ಬೋಧೆ ಮಾಡುವುದು ಅಪರಾಧವೆ ? ಜಗತ್ಕರ್ತನು ಎಲ್ಲರನ್ನೂ ಮೀರಿದ ಮಹಾಚೇತನ. ಅವನು ವೇದೋಪಾಸಕರಿಗೆ, ರಾಮೋಪಾಸಕರಿಗೆ ಬೇಡವೇನು ? ಅಂದಾಗ ಪರಮಾತ್ಮನನ್ನು ಅರಿತುಕೊಳ್ಳಿರಿ, ಆರಾಧಿಸಿರಿ ಎಂದು ಬಸವಣ್ಣನವರು ಹೇಳಿದುದು ಅಗ್ರಾಹ್ಯವಾಗುವುದೆ ? ಜನನ–ಮರಣಕ್ಕೆ ಒಳಗಾದ, ರಾಗ–ದ್ವೇಷಗಳಲ್ಲಿ ಬಾಳಿ ಬದುಕಿದ ವ್ಯಕ್ತಿಗಳನ್ನೂ 'ದೇವರು' ಎನ್ನುವವರನ್ನು ಕಂಡು, ಮರುಕದಿಂದ 'ನಿಜವಾದ ದೇವರನ್ನು ಪೂಜಿಸಿರಪ್ಪ' ಎಂದು ಬಸವಣ್ಣನವರು ಹಿತೋಪದೇಶ ಮಾಡಿದ್ದಾರೆ.

ಇಂಥ ವಚನವನ್ನು ಪ್ರಕ್ಷೇಪ ಎನ್ನುವ ಡಾ॥ ಬಸವರಾಜುರವರ ಸಾಹಸಕ್ಕೆ ಯಾವ ಪ್ರತಿಕ್ರಿಯೆ ವ್ಯಕ್ತಪಡಿಸಲಾದೀತು ?

● 4. ಎಲ್ಲ ಪ್ರಾಚೀನ, ಮಧ್ಯ ಕಾಲೀನ ಸಾಹಿತ್ಯಗಳಲ್ಲಿ ಪ್ರಕ್ಷೇಪ ಭಾಗಗಳಿರುವುದು ಸಾಮಾನ್ಯ ಸಂಗತಿ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ 'ಮುಕ್ತಿ ಕಂಠಾಭರಣ' ಪ್ರಕ್ಷಿಪ್ತ ವಚನ ಸಾಹಿತ್ಯಕ್ಕೆ ಒಂದು ಸೊಗಸಾದ ನಿದರ್ಶನ. ಅಲ್ಲಿಯೂ ಏಕದೇವೋಪಾಸನೆ, ಗುರು-ಲಿಂಗ-ಜಂಗಮ ತತ್ತ್ವಗಳು ಪ್ರತಿಪಾದಿತವಾಗಿವೆ. ಈ ಕಾರಣಕ್ಕಾಗಿ ತಾವು "ಮುಕ್ತಿ ಕಂಠಾಭರಣ"ವನ್ನು ಸಾಚಾ ವಚನ ಸಾಹಿತ್ಯ ಎಂದು ಒಪ್ಪಿಕೊಳ್ಳುವಿರಾ?

○ ಯಾವಾಗಲೂ ಹಸ್ತಕ್ಷೇಪ ಮಾಡುವ ಪ್ರಕ್ಷಿಪ್ತಕಾರರು ಯಾವ ತಂತ್ರ ಬಳಸುವರು ಎಂದರೆ, ತಿನ್ನುವ ಅಕ್ಕಿಯಲ್ಲಿ ಕಲ್ಲನ್ನು ಬೆರಸುವರು. ಬರೀ ಕಲ್ಲನ್ನು ಮಾರಹೋದರೆ ಯಾರಾದರೂ ಕೊಳ್ಳುವರೊ ? ತಮಗೆ ಬೇಕಾದ ಏನನ್ನಾದರೂ ತೂರಿಸಬೇಕು ಎನ್ನುವವರು ಸಾಚಾ ವಚನದ ಮಧ್ಯೆ ಅಂಥದೇನನ್ನಾದರೂ ಸೇರಿಸಿ. ವಚನದ ಭಾಗವನ್ನಾಗಿ ಮಾಡುವರು. ಸೈದ್ಧಾಂತಿಕ ತಿಳುವಳಿಕೆ ಇದ್ದವರಿಗೆ ವಚನದ ಅರ್ಧಭಾಗಕ್ಕೂ ಇನ್ನರ್ಧಭಾಗಕ್ಕೂ ವಿರೋಧಾಭಾಸಕರ ನಿರೂಪಣೆ ಇರುವುದು ತಟ್ಟಂಥ ತಿಳಿಯುತ್ತದೆ. ಇಲ್ಲವೇ ಕೆಲವೊಮ್ಮೆ ಬಸವಾದಿ ಪ್ರಮಥರ ಆಲೋಚನೆ. ಸಿದ್ಧಾಂತಗಳಿಗೇ ಹೊರತಾದ ವಿಚಾರಗಳನ್ನು ವಚನ ರೂಪದಲ್ಲಿ ಹೆಣೆದು, ಹಲವಾರು ಸಾಚಾವಚನಗಳ ಮಧ್ಯದಲ್ಲಿ ಸೇರಿಸಿಬಿಡುತ್ತಾರೆ. ಅದಕ್ಕೇ ನಾವು ಸೈದ್ಧಾಂತಿಕ ಖಚಿತತೆಯನ್ನು ಮೊದಲು ಹೊಂದಿ, ಅದನ್ನು ಅಳತೆಗೋಲಾಗಿ ಇರಿಸಿಕೊಂಡು ಅಸಲಿ, ನಕಲಿಗಳನ್ನು ಗುರುತಿಸಬೇಕು. ಹೀಗೆ ಮಾಡುವಾಗ, ಯಾರನ್ನಾದರೂ ಮನಸ್ಸಲ್ಲಿ ಇಟ್ಟುಕೊಂಡು, ಅವರನ್ನು ಬೇಸರಪಡಿಸಬಾರದೆಂದು, ಅಥವಾ ಅವರನ್ನು ಸುಪ್ರೀತಗೊಳಿಸಬೇಕೆಂದು ಸತ್ಯ ನಿರ್ಣಯ ಮಾಡಬಾರದು, ಅಂದರೆ ಸತ್ಯವನ್ನು ತಿರುಚಬಾರದು.

ಈ ದೃಷ್ಟಿಯಿಂದ ಶ್ರೀ ಡಾ॥ ಎಲ್. ಬಸವರಾಜು ಅವರ ಪ್ರಕ್ಷೇಪಗಳ ಆಯ್ಕೆ ಸೂಕ್ತವಾಗಿಲ್ಲ ಎಂದು ನಿಸ್ಸಂಕೋಚವಾಗಿ ಹೇಳಬಹುದು.

ಮುಕ್ತಿ ಕಂಠಾಭರಣದಂತಹ ದುರುದ್ದೇಶ ಪೂರಿತ ಕೃತಿಗಳು ಸಾಚಾ ವಚನಗಳನ್ನು ಬಳಸಿಕೊಂಡು ರಚನೆಯಾಗಿದ್ದರೂ, 'ಬೆಳ್ಳೆತ್ತಿನ ಮರೆಯಲ್ಲಿರ್ದು ಹುಲ್ಲೆಗಂಬ ತೊಡುವಂತಹ' ಕುತಂತ್ರ ಮತಿಗಳ ಕೈವಾಡದಿಂದ, ಜೊಳ್ಳನ್ನೇ ಜಾಸ್ತಿ ತುಂಬಿಕೊಂಡು ತಿರಸ್ಕರಣೀಯವಾಗುವುವು. ಹೀಗಾಗಿ ಕೆಲವು ಸಾಚಾ ವಚನವಿದ್ದ ಮಾತ್ರಕ್ಕೆ ಪುರಸ್ಕರಣೀಯವಾಗವು. ಹಾಗೆಯೇ ಖೊಟ್ಟಿ ವಚನಗಳ ಜೊತೆಗೆ ಇದ್ದ ಮಾತ್ರಕ್ಕೆ ಉತ್ತಮ ವಚನಗಳನ್ನು ತಿರಸ್ಕರಿಸಲೂ ಬರದು.

—ರಮೇಶ ವೀರಭದ್ರಪ್ಪ ತಳ್ಳಿ, ಗುಲಬರ್ಗಾ.

● ನಮ್ಮ ಗುರುಗಳೊಬ್ಬರು ಹೇಳುತ್ತಾರೆ, ಇಂದಿನ ವಿಜ್ಞಾನ ಎಷ್ಟು ಮುಂದುವರಿದಿದೆ ಎಂದರೆ ಗಂಡನ್ನು ಹೆಣ್ಣನ್ನಾಗಿ, ಹೆಣ್ಣನ್ನು ಗಂಡನ್ನಾಗಿ ಪರಿವರ್ತಿಸ

ಬಹುದು. ಇಷ್ಟೊಂದು ರೀತಿಯಲ್ಲಿ ಮುಂದುವರಿದಿರುವಾಗ ದೇವರು-ಧರ್ಮ-ಆತ್ಮ-ಪಾಪ ಪುಣ್ಯ ಮುಂತಾದುವುಗಳ ಬಗ್ಗೆ ಹೇಳುವುದು ದಡ್ಡತನವಂತೆ, ಕೇಳುವವರು ದಡ್ಡರಂತೆ.

○ ನೀವು ಅವರಿಗೆ ಗುರುಗಳು ಎಂಬ ಪದ ಬಳಸುವುದಕ್ಕಿಂತ, ಶಿಕ್ಷಕರು ಅಧ್ಯಾಪಕರು ಎಂದು ಹೇಳಿರಿ. ಏಕೆಂದರೆ ಹಿಂದೂ ಸಂಸ್ಕೃತಿಯಲ್ಲಿ ಮೊದಲು ಗುರು-ಶಿಕ್ಷಕ ಒಂದೇ ಆಗಿದ್ದರು. ತನ್ನ ಹೊಣೆಯರಿತು ಕರ್ತವ್ಯ ನಿರ್ವಹಿಸುತ್ತಿದ್ದರು. ಇಂದು ಶಿಕ್ಷಕ–ವಿದ್ಯಾರ್ಥಿಯ ಸಂಬಂಧ ಬಹಳ ಲೌಕಿಕ, ವ್ಯವಹಾರಿಕವಾಗಿದೆ. ಪಾರಮಾರ್ಥ ವಿದ್ಯೆಯನ್ನು ಬೋಧಿಸುವವನಿಗೆ ಗುರು ಎಂದು ಮೀಸಲಿಡಿರಿ.

ವಿಜ್ಞಾನವು ಎಷ್ಟೇ ಮುಂದುವರಿದರೂ, ದೇವರ ದೃಷ್ಟಿಯನ್ನು ಆಧಾರವಾಗಿಟ್ಟುಕೊಂಡು ಮುಂದೆ ಸಾಗುತ್ತಿದೆಯೇ ವಿನಾ ತಾನೇನನ್ನೂ ಸೃಷ್ಟಿಸುತ್ತಿಲ್ಲ. ಪೂರ್ತಿ ಹೆಣ್ಣಾದವಳನ್ನು ಗಂಡನ್ನಾಗಿ, ಪೂರ್ತಿ ಗಂಡನ್ನು ಹೆಣ್ಣನ್ನಾಗಿ ಶಸ್ತ್ರಚಿಕಿತ್ಸೆಯಿಂದ ಪರಿವರ್ತಿಸದು. ಕೆಲವರನ್ನು ಗಂಡು ಎಂದು ಭಾವಿಸಿರುತ್ತಾರೆ. ಆದರೆ ಆಂತರಿಕ ಲಕ್ಷಣಗಳು ಹೆಣ್ಣಿನದಾಗಿರುತ್ತವೆ. ಇಂಥವರನ್ನು ಮಾತ್ರ ಪರಿವರ್ತಿಸಲು ಸಾಧ್ಯ. ಅತ್ಯಂತ ಸಮರ್ಥ ವೈದ್ಯನೂ, 'ಸ್ವಾಮಿ ಹೇಗಾದರೂ ಮಾಡಿ ಪ್ರಾಣ ಉಳಿಸಿ' ಎಂದು ಗೋಗರೆದಾಗ "ನಮ್ಮ ಕೈಲೇನಿದೆ, ಪ್ರಯತ್ನ ನಮ್ಮದು ಉಳಿಸುವುದು ಪರಮಾತ್ಮನ ಇಚ್ಛೆ" ಎನ್ನುತ್ತಾರೆ. ಬಾಕ್ಸಿಂಗ್ ಚಾಂಪಿಯನ್ ಮಹಮ್ಮದ್ ಆಲಿ ಈಗ ಧರ್ಮಬೋಧಕ. ಗಗನ ಯಾತ್ರಿ ನಿಹಿಲ್ ಆರ್ಮಸ್ಟ್ರಾಂಗ್ ಚಂದ್ರಗ್ರಹ ಯಾನ ಕೈಗೊಳ್ಳುವ ಮೊದಲು ಅಷ್ಟೇನೂ ದೇವರನ್ನು ನಂಬದವನು. ಆದರೆ ಅಲ್ಲಿಗೆ ಹೋಗಿ ಬಂದ ಮೇಲೆ ಅವನಿಗೆ ಉತ್ಕಟ ಶ್ರದ್ಧೆ ಮೂಡಿತಂತೆ, ಇದ್ದ ಅಹಂಕಾರ ಅಳಿಯಿತಂತೆ. ಕಾರಣ? ಆ ಎತ್ತರದಲ್ಲಿ ನಿಗೂಢವಾದ ಅಷ್ಟೇ ಸುಸಂಬದ್ಧವಾದ ವಿಶ್ವವನ್ನು ನೋಡಿದಾಗ, ಇದನ್ನು ಇಷ್ಟು ವ್ಯವಸ್ಥಿತವಾಗಿ ನಡೆಸುವ, ಅಥವಾ ಹಿಡಿದಿಟ್ಟುಕೊಂಡ ಶಕ್ತಿಯ ಬಗ್ಗೆ ಅಪೂರ್ವ ಶ್ರದ್ಧೆ ಉಂಟಾಯಿತಂತೆ. ನಿಮ್ಮ ಈ ಶಿಕ್ಷಕರಂತಹವರು ಯಾವುದನ್ನೂ ಆಳವಾಗಿ ಚಿಂತಿಸದೆ, ಉಡಾಫೆಯ ಹಗುರವಾದ ಮಾತುಗಳನ್ನಾಡುತ್ತಾ ಸಾಗುವವರು ಅಷ್ಟೆ !

● ಈ ಆತ್ಮ-ಪರಮಾತ್ಮ ಎಂಬುದು ಎಲ್ಲ ಸುಳ್ಳು; ಇವು ಎಲ್ಲೆಲ್ಲಿಯೂ ಇಲ್ಲ. ಇಂದು ವಿಜ್ಞಾನವು ಎಷ್ಟು ಮುಂದುವರಿದಿದೆ ಎಂದರೆ ವಿಜ್ಞಾನಿಗಳು ಕೆಲವೇ ಸಮಯದಲ್ಲಿ ದೇಹದಿಂದ ಜೀವವನ್ನು ಬೇರ್ಪಡಿಸಿ ಅವಶ್ಯವಾಗಿ ತೋರಿಸುತ್ತಾರೆ. ಆಗ ನಿಮ್ಮ ಬಸವಣ್ಣ, ಇತರ ಮಹಾತ್ಮರು, ನಿಮ್ಮ ಸ್ವಾಮಿಗಳು ಎಲ್ಲರೂ ಮೂಲೆ ಸೇರಬೇಕಾಗುತ್ತದೆ ಎನ್ನುತ್ತಾರೆ ನಮ್ಮ ಶಿಕ್ಷಕರು. ಹೌದೆ ?

○ ಅವರಿಗೆ ಆತ್ಮ–ಪರಮಾತ್ಮ ಅನ್ನುವ ಕಲ್ಪನೆಯೇ ತಿಳಿಯದು. ತಂತಿಯಿಂದ ಬೇರ್ಪಡಿಸಿ ವಿದ್ಯುತ್ತನ್ನು ತೆಗೆದುತೋರಿಸುವುದು ಎಷ್ಟು ಅಸಾಧ್ಯವೋ, ದೇಹದಿಂದ ಜೀವವನ್ನು ಬೇರ್ಪಡಿಸಿ ತೋರಿಸುವುದೂ ಅಸಾಧ್ಯ. ಆತ್ಮವು ದೇಹವನ್ನು ವ್ಯಾಪಿಸಿಕೊಂಡ ನಿರಾಕಾರ ಶಕ್ತಿ, ಪರಮಾತ್ಮನು ವಿಶ್ವವನ್ನು ವ್ಯಾಪಿಸಿಕೊಂಡ ನಿರಾ

ಕಾರ ಶಕ್ತಿ. ವಿದ್ಯುತ್ತನ್ನು ಸ್ವತಂತ್ರವಾಗಿ ನೋಡಲು ಸಾಧ್ಯವಿಲ್ಲ, ಬಲ್ಬಿನ ಮೂಲಕ ಬೆಳಗುವುದು, ಫ್ಯಾನ್ ಮೂಲಕ ತಿರುಗುವುದು, ಸ್ಟೋವ್ ಮೂಲಕ ಉರಿಯುವುದು, ಟೇಪ್ ರೆಕಾರ್ಡರ್ ಮೂಲಕ ಹಾಡುವುದು. ಆತ್ಮವಾದರೂ ಅಷ್ಟೆ, ಶರೀರ-ಪ್ರಾಣಗಳ ಮೂಲಕ ಅಭಿವ್ಯಕ್ತವಾಗುವುದು. ವಿಜ್ಞಾನವು ಮುಂದುವರಿದಂತೆಲ್ಲ ಮೂಢ ನಂಬಿಕೆಗಳು ಸೋಲಬಹುದೇ ವಿನಾ ಪ್ರಗತಿಪರ ಧರ್ಮವಲ್ಲ. ಆದ್ದರಿಂದ ಜನರಲ್ಲಿ ವೈಜ್ಞಾನಿಕ ತಿಳುವಳಿಕೆ ಹೆಚ್ಚಿದಷ್ಟೂ ಬಸವಣ್ಣನವರು ಹೆಚ್ಚೆಚ್ಚು ಬೇಕಾಗುತ್ತಾರೆ.

—ರು. ಉಮಾರಾಣಿ ಐಗಳಿ, ಕೂಡಲ ಸಂಗಮ.

● ತಾವು ಬರೆದ "ಜೀವ ಜೀವದ ಭಾವಸಂಗಮ" ಶರಣ ಸಂಸ್ಕೃತಿಗೆ ವಿವಾಹ ವಿಧಾನ ಬಹಳ ಉತ್ಕೃಷ್ಟವಾಗಿದೆ. ಉಪಯುಕ್ತವೂ, ತತ್ತ್ವ ಸಹಿತವೂ, ಅರ್ಥಗರ್ಭಿತವೂ, ಸುಲಭವೂ ಆಗಿದೆ. ಈಗ ಸಮಾಜದಲ್ಲಿ ಪ್ರಚಲಿತವಿರುವ ವಿವಾಹ ಪದ್ಧತಿ ಅರ್ಥವಿಲ್ಲದ ವ್ಯರ್ಥ ಪರಿಶ್ರಮದಿಂದ ಕೂಡಿದೆ, ಬಸವ ಧರ್ಮಕ್ಕೆ ಕಲಂಕ ತರುವಂತಿದೆ. ಈ ಕಲಂಕವನ್ನು ತೊಡೆಯುವ ಸಿಡಿಲಮರಿಯಂತಿದೆ ಈ ಪುಸ್ತಕ.

ಇದನ್ನು ಓದಿದಾಗ ನಮಗೆ ಕೆಲವು ಸಂದೇಹ ಬಂದಿದೆ. ಅವಕ್ಕೆ ಪರಿಹಾರ ನೀಡಿರಿ.

1. ವಿವಾಹದ ಕರೆಯೋಲೆ ಮುದ್ರಿಸುವಾಗ 'ಓಂ ಶ್ರೀ ಗುರುಬಸವಲಿಂಗಾಯ ನಮಃ' ಮೇಲೆ ಹಾಕುವುದು ಸರಿ. ಅದರ ಕೆಳಗೆ ಮನೆ ದೇವರ ಹೆಸರನ್ನೂ ಹಾಕಲು ಒಪ್ಪಿಗೆ ಕೊಟ್ಟಿರುವಿರಿ. ಇದು ಮತ್ತೆ ತತ್ತ್ವನಿಷ್ಠೆಯನ್ನು ಸಡಿಲಗೊಳಿಸದೆ ?

○ ಅಹುದು, ನಮಗೂ ಗೊತ್ತು. ಏಕದೇವೋಪಾಸನೆ, ಏಕ ಗುರು ನಿಷ್ಠೆ ಅತ್ಯಂತ ಆವಶ್ಯಕ. ಬಸವ ತತ್ತ್ವವು ಸ್ವಧರ್ಮವೇ ಆಗಿದ್ದರೂ, ಇದನ್ನು ಬಿಟ್ಟು ಕಂಡಕಂಡದ್ದಕ್ಕೆ ಎಳೆಸಿ, ಅಭ್ಯಾಸವಾಗಿರುವ ಲಿಂಗವಂತರಿಗೆ ಮನೆ ದೇವರ, ಕುಲ ದೇವರ ಹೆಸರು ಬೇಡ ಎಂದರೆ ಭಯಗ್ರಸ್ತರಾಗಿ, ಒಟ್ಟು ಬಸವ ತತ್ತ್ವಕ್ಕೆ ಬರುವುದಿಲ್ಲ. ಸರಿಯಾಗಿ ವಚನ ಸಾಹಿತ್ಯ ಓದಿ ತತ್ತ್ವವನ್ನು ತಿಳಿದಾಗ ಭೀತಿ ತೊಲಗಿ ಆತ್ಮ ವಿಶ್ವಾಸ ಬರುತ್ತದೆ. ಆಗ ತಾನೇ ಸುಧಾರಿಸುವರು.

● ಪುಟ 6 ರಲ್ಲಿ ಮಡಿಲು ತುಂಬಲು ಬೇಕಾಗುವ ಸಾಮಾನಿನ ವಿವರ ಹೇಳಿರುವಿರಿ. ಯಾವ ಯಾವ ಪ್ರಮಾಣವೆಂದು ಹೇಳಿಲ್ಲ.

○ ಅತ್ಯಂತ ಸರಳವಾಗಿ ಆಗಬೇಕಾದ ವಿವಾಹ ಕ್ರಮವಿದು. ಆದ್ದರಿಂದ ಅವರವರ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ, ಸಾಂಕೇತಿಕವಾದ ಈ ವಸ್ತುಗಳನ್ನು ತಂದರೆ ಸಾಕು. ಆದ್ದರಿಂದ ಅದನ್ನು ಸ್ಥಳೀಯವಾಗಿ ನಿರ್ಧರಿಸಿಕೊಳ್ಳಬೇಕು. ಇಷ್ಟೇ ಎಂದು ಬರೆದರೆ, ಆಗ ಅದನ್ನೇ ಒಂದು ಹೊರೆಯನ್ನಾಗಿ ಮಾಡಿಕೊಳ್ಳುವವರೂ ಉಂಟು.

● ಬಾಸಿಂಗ ಕಟ್ಟುವುದು ಶರಣ ಧರ್ಮಕ್ಕೆ ಸರಿಯಲ್ಲ; ಅದು ಅಗತ್ಯವಿಲ್ಲ ಎಂದು ಕೆಲವು ಬಸವ ತತ್ತ್ವಾನುಯಾಯಿಗಳು ಹೇಳುವರಲ್ಲ.

○ ಬಾಸಿಂಗವು ಕೇವಲ ಒಂದು ಗುರುತು ಮಾತ್ರ. ಜನ ಸಮೂಹದ ಮಧ್ಯೆ ವಧುವರರು ಎದ್ದು ಕಾಣಲು ಏನಾದರೂ ಒಂದು ಗುರುತು ಬೇಕಲ್ಲ. ರಾಜರು ಕಿರೀಟ ಹಾಕಿದಂತೆ, ಅಂದು ವಧುವರರು, ಬೆಂಡು-ಬ್ಯಾಗಡಿಯ ಕಿರೀಟ ಹಾಕಿದರೆ ತಪ್ಪೇನು ಇಲ್ಲ.

● ಬಾಸಿಂಗ ಹೇಗೆ ಇರಬೇಕು ಎನ್ನುವುದನ್ನು ಬರೆದಿಲ್ಲ. ಕೆಲವಕ್ಕೆ 5, ಕೆಲವಕ್ಕೆ 3, ಕೆಲವಕ್ಕೆ ಒಂದೇ- ಹೀಗೆ ತುರಾಯಿ ಇರುತ್ತವೆ. ಅದರಲ್ಲಿ ವಿವಿಧ ಚಿತ್ರಗಳಿರುತ್ತವೆ.

○ ಬೆಲೆ ಕೊಟ್ಟಂತಲ್ಲ ವಿವಿಧ ರೀತಿಯ ಬಾಸಿಂಗಗಳು ಸಿಗುತ್ತವೆ. ಒಂದು ವೇಳೆ ಅವುಗಳ ಮೇಲೆ ಶರಣ ಸಂಸ್ಕೃತಿಗೆ ಹೊರತಾದ ಚಿತ್ರಗಳಿದ್ದರೆ, ಅವುಗಳನ್ನು ತೆಗೆದು, ಅಥವಾ ಅವು ಮುಚ್ಚುವಂತೆ ಬಸವಣ್ಣನವರ ಚಿತ್ರವನ್ನಾಗಲೀ, ಷಟ್ಕೋನದ ಚಿತ್ರವನ್ನಾಗಲೀ ಅಂಟಿಸಿರಿ.

● ಬ್ರಹ್ಮಗಂಟು ಹಾಕುವಾಗ ಉಪಯೋಗಿಸುವ ಬಸವ ಮುದ್ರೆ (ನಾಣ್ಯ) ವಾಗಲೀ, ವಚನ ಸಾಹಿತ್ಯ ಪುಸ್ತಕವಾಗಲೀ ಸುಲಭದಲ್ಲಿ ದೊರೆಯುವುದಿಲ್ಲ. ಏನು ಮಾಡಬೇಕು.

○ ಜಾಗೃತಿಯುಂಟಾದಲ್ಲಿ, ತಾತ್ತ್ವಿಕ ತಿಳುವಳಿಕೆ ಇದ್ದಲ್ಲಿ ವ್ಯಕ್ತಿಯು ಬಟ್ಟೆ ಒಡವೆಗಳನ್ನು ಹೇಗೆ ಹೊಂದಿಸುವನೋ ಹಾಗೆ ಈ ಸಾಮಗ್ರಿಗಳನ್ನು ಹೊಂದಿಸುವನು. ವಚನ ಪುಸ್ತಕ ಸಾಮಾನ್ಯವಾಗಿ ಸಿಗುತ್ತವೆ. ಪ್ರಸಂಗ ಬಂದರೆ ಒಂದು ಹಾಳೆಯಲ್ಲಿ 5-6 ವಚನಗಳನ್ನು ಬರೆದೂ ಸುರಳಿ ಮಾಡಿ ಬ್ರಹ್ಮಗಂಟು ಕಟ್ಟಬಹುದು.

● ಮಾಂಗಲ್ಯಧಾರಣೆ ಮತ್ತು ಕುಂಕುಮಧಾರಣೆಗೆ ಅವಕಾಶ ಇಟ್ಟಿದ್ದೀರಿ. ಇವೆರಡೂ ಆರ್ಯ ಪದ್ಧತಿಗಳೇ ಆಗುತ್ತವಲ್ಲ! ಏನಾದರೂ ಬದಲಾವಣೆ ಸಾಧ್ಯವಿಲ್ಲವೆ?

○ ಮಾಂಗಲ್ಯಧಾರಣೆ ಹಿಂದೂ ಸಂಸ್ಕೃತಿಯ ಅಂಗವಾಗಿ ಬಂದಿದೆ. ಮಾಂಗಲ್ಯಗಳ ಆಕಾರದಲ್ಲಿ ಬಹಳ ಭಿನ್ನತೆ ಇದೆ. ಆದ್ದರಿಂದ ಆ ಬಗ್ಗೆ ಒಳ್ಳೆಯದನ್ನು ಉಳಿಸಿಕೊಂಡರೆ ತಪ್ಪೇನಿಲ್ಲ. ಶರಣರು ಈ ಬಗ್ಗೆ ಅಂದರೆ ಮಾಂಗಲ್ಯದ ಬಗ್ಗೆ ಪರ ಅಥವಾ ವಿರೋಧವಾಗಿ ಏನೂ ಹೇಳಿಲ್ಲ. ಕುಂಕುಮದ ಬಗ್ಗೆ ಶರಣರು ಒಪ್ಪಿಗೆ ನೀಡಿಲ್ಲ. ಆದರೆ ಭಾವಾತ್ಮಕ ಸಂಭಂಧ ಕುಂಕುಮದೊಡನೆ ಬೆಳೆದಿರುವುದರಿಂದ, ಅತಿಯಾಗಿ ಬಿಗಿ ಹಿಡಿಯಬಾರದು. ಕಾಲಾನಂತರದಲ್ಲಿ ವಚನ ಸಾಹಿತ್ಯ ಓದಿ, ಆತ್ಮಬಲ ಬಂದಾಗ ಬೇಕಾದರೆ ಬಿಡಲಿ.

● ಮಂಗಲಾಕ್ಷತೆ ಸಿದ್ಧಪಡಿಸುವಾಗ ಅರಿಷಿನಪುಡಿಯನ್ನು ಅಕ್ಕಿಕಾಳಿಗೆ ಹಾಕಲು ಹೇಳಿದ್ದೀರಿ. ಇದರ ಅರ್ಥವೇನು ?

○ ಅರಿಷಿಣ ಒಂದು ಮಂಗಲ ದ್ರವ್ಯ, ಚರ್ಮಕ್ಕೆ ಉತ್ತಮ ಲೇಪನ. ವಚನ ಸಾಹಿತ್ಯದಲ್ಲಿ ಬಹಳ ಕಡೆ ಬಳಸಿದ್ದಾರೆ.

1. ಅರಿಷಿಣವನೇ ಮಿಂದು, ಹೊಂದೊಡಿಗೆಯನೆ ತೊಟ್ಟು -ಬಸವಣ್ಣ
2. ಚಿನ್ನಕ್ಕರಿಷಣ ಚಿನ್ನಕ್ಕರಿಷಿಣ ಕೊಳ್ಳಿರವ್ವ -ಅಕ್ಕಮಹಾದೇವಿ

3. ವಿಭೂತಿಯೇ ಒಳಗುಂದದರಿಷಿಣವೆನಗೆ – ಅಕ್ಕಮಹಾದೇವಿ

ಅಕ್ಕಿಯ ಕಾಳಿಗೆ ಅರಿಷಿಣ ಪುಡಿಯನ್ನು ನೀರಿನೊಡನೆ ಮಿಶ್ರಣ ಮಾಡಿದ್ದಕ್ಕೆ ಅಕ್ಷತೆ ಎನ್ನುವುದು. ಮಂತ್ರಸಹಿತವಾಗಿ ಸಿದ್ಧಪಡಿಸಿದ್ದು ಮಂಗಲಾಕ್ಷತೆ.

● ನಾವು ಮಾಡಿಸಿದ ಮಾದರಿ ಆಹ್ವಾನ ಪತ್ರ ಕಳಿಸಿದ್ದೇವೆ. ತಿದ್ದುಪಡಿ ಮಾಡಿ, ತಪ್ಪುಗಳಿದ್ದರೆ ತಿಳಿಸಿರಿ.

○ "ಜೀವ ಜೀವದ ಭಾವಸಂಗಮ"ದಲ್ಲಿ ಮಾದರಿ ಪತ್ರವಿದೆ. ನೋಡಿ ತಿದ್ದುಪಡಿ ಮಾಡಿಕೊಳ್ಳಿರಿ. ಡಿಸೈನ್ ಆಯ್ಕೆ ಮಾಡುವಾಗ ಶರಣ ಸಂಸ್ಕೃತಿಗೆ ಹೊರತಾದ್ದು ಆಯ್ಕೆ ಮಾಡಬಾರದು ಎಂಬುದು ಗಮನದಲ್ಲಿರಲಿ.

ಬಸವಣ್ಣನವರ ಬ್ಲಾಕುಗಳು ಲಭ್ಯ

ಕಾರ್ಯಕ್ರಮ ಪತ್ರಿಕೆ, ವಿವಾಹದ ಆಹ್ವಾನ ಮುಂತಾದುಗಳಲ್ಲಿ ಬಳಸಲು ಉಪಯೋಗವಾಗುವಂತಹ ವಿವಿಧ ಅಳತೆಯ ವಿಶ್ವಗುರು ಬಸವಣ್ಣನವರ ಬ್ಲಾಕುಗಳನ್ನು ಸಿದ್ಧಪಡಿಸಲಾಗಿದೆ. ರಾಜಾಜಿನಗರದ ಬಸವ ಮಂಟಪದಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. ಆಸಕ್ತರು ಬಂದು ಖರೀದಿಸಬಹುದು. ಅಥವಾ ವಿವರ ತರಿಸಿಕೊಂಡು, ಹಣ ಕಳಿಸಿ ಅಂಚೆಯಲ್ಲೂ ತರಿಸಿಕೊಳ್ಳಬಹುದು. ಮುದ್ರಣಾಲಯದವರು ತಮ್ಮ ಬಳಿ ಇರಿಸಿಕೊಂಡು, ಅಗತ್ಯ ಬಿದ್ದಾಗ ಬಳಸುವುದು ಒಳ್ಳೆಯದು.

ದಾನಿಗಳು ಮತ್ತು ಚಂದಾ ಕಳಿಸುವವರಿಗೆ ಸೂಚನೆ

ದೇಣಿಗೆ ಕೊಡುವವರು, ಕಲ್ಯಾಣ ಕಿರಣ ಚಂದಾ ಕಳಿಸುವವರು ಮುಂತಾದವರು ದಯವಿಟ್ಟು ಚೆಕ್ಕು ಕೊಡದೆ ಸಣ್ಣ ಪ್ರಮಾಣದಲ್ಲಾದರೆ ಎಂ.ಓ ರೂಪದಲ್ಲಿ, ದೊಡ್ಡ ಪ್ರಮಾಣದಲ್ಲಾದರೆ ಡಿ ಡಿ. ರೂಪದಲ್ಲಿ ಕಳಿಸಬೇಕು. ಬ್ಯಾಂಕ್ ಶುಲ್ಕ ಮಿತಿ ಮೀರಿಬಿಟ್ಟಿದೆ. 30,000/–ರೂಗಳ ಚೆಕ್ಕು ನಗದು ಮಾಡಲು 159 ರೂ ಶುಲ್ಕ ಮುರಿದಿದ್ದಾರೆ. ದಾನಿಗಳು, ಇದೇ ಹಣಕ್ಕೆ ಡಿ.ಡಿ. ತೆಗೆಸಿದ್ದರೆ 75 ರೂದಲ್ಲಿ ಮುಗಿಯುತ್ತಿತ್ತು

ಕೆಲವೊಮ್ಮೆ ಚೆಕ್ಕುಗಳು ಕಾರಣಾಂತರದಿಂದ ವಾಪಸ್ಸು ಬಂದರೆ ಆ ದಂಡವೆಲ್ಲ ಸಂಸ್ಥೆಯ ಮೇಲೆ ಬೀಳುತ್ತೆ. ಆದ್ದರಿಂದ ಹಣಕೊಡುವವರು ಸಂಸ್ಥೆಗೆ ಹಾನಿ ಮಾಡಬಾರದೆಂಬ ಧೋರಣೆ ಹೊಂದಿರಬೇಕು. ಯಾವುದಾದರೂ ಒತ್ತಡಕ್ಕೆ ಬಿದ್ದು, ವಾಗ್ದಾನ ಮಾಡಿ, ಚೆಕ್ ಕೊಟ್ಟು ಅದು ನಗದಾಗದೆ ಇದ್ದರೆ, ಸಂಸ್ಥೆಗೆ ಹಾನಿಮಾಡಿದಂತಾಗುವುದು. ಇದನ್ನು ಗಮನದಲ್ಲಿಟ್ಟುಕೊಂಡು ವರ್ತಿಸುವಿರೆಂದು ನಂಬುತ್ತೇವೆ.

ಗುಲಬರ್ಗಾ ನಗರದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಮುಕ್ತಾಯ

ಕಲ್ಯಾಣ ಕರ್ನಾಟಕದ ರಾಜಧಾನಿ ಗುಲಬರ್ಗಾದಲ್ಲಿ, ಟೌನ್ ಹಾಲ್ ಪಕ್ಕದ ಗಾರ್ಡನದಲ್ಲಿ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಂದ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವು ದಿ. 25-3-1991 ರಂದು ಪ್ರಾರಂಭವಾಯಿತು. ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಶೋತೃಗಳನ್ನು ಆಕರ್ಷಿಸುತ್ತ ಸಾಗಿತ್ತು. ಏಪ್ರಿಲ್ ದಿ. 13, 14, 15 ದಂದು ಅಭೂತಪೂರ್ವವಾಗಿ ಬಸವ ಜಯಂತಿಯು ಆಚರಿಸಲ್ಪಟ್ಟಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ದಿ. 14ರಂದು ಬಸವ ಜಯಂತಿಯಲ್ಲಿ ಭಾಗ ವಹಿಸಿದರು. ಅಲ್ಲಿಂದ ಮುಂದೆ ಪ್ರವಚನವನ್ನು ಪೂಜ್ಯ ಮಾತಾಜಿಯವರೇ ಮಾಡಿದರು. ಸೋಮವಾರ ದಿ. 27-5-91 ರಂದು ಪ್ರವಚನವು ಮಂಗಲಗೊಂಡಿತು.

ತಿಪಟೂರಿನಲ್ಲಿ ಪ್ರವಚನ ಕಾರ್ಯಕ್ರಮ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು, ಸೋಮವಾರ ದಿ. 3-6-1991 ರಿಂದ ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಪ್ರವಚನ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಶ್ರೀ ಗಣೇಶ ಪೆಂಡಾಲದಲ್ಲಿ ಆರಂಭವಾದ ಪ್ರವಚನವು ನಗರ ಮಧ್ಯದಲ್ಲಿ ಬಿ. ಹೆಚ್. ರಸ್ತೆಯ ಬದಿಗಿರುವ ಜಯದೇವ ಹಾಸ್ಟೆಲ್ ಆವರಣಕ್ಕೆ ಸ್ಥಳಾಂತರಗೊಂಡು ನಡೆಯುತ್ತಲಿದೆ.

ಅಣ್ಣೀಗೇರಿಯಲ್ಲಿ ಪ್ರವಚನ

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಧಾರವಾಡ ಜಿಲ್ಲೆಯ, ನವಲುಗುಂದ ತಾಲ್ಲೋಕಿನ ಪ್ರಸಿದ್ಧ ಕೃಷಿ ಕೇಂದ್ರ ಅಣ್ಣೀಗೇರಿಯಲ್ಲಿ 30-5-1991 ರಂದು ಪ್ರವಚನವನ್ನು ಆರಂಭಿಸಿದ್ದಾರೆ.

ಪೂಜ್ಯ ಶ್ರೀ ಮಾತಾಜಿಯವರ ಕಾರ್ಯಕ್ರಮಗಳು

1. ಬೆಂಗಳೂರು ನಗರದ ನಗರ್ತರ ಪೇಟೆಯ ನಗರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬಸವೇಶ್ವರ ಭಕ್ತ ವೃಂದದವರು ಏರ್ಪಡಿಸಿದ್ದ ಬಸವ ಜಯಂತಿ ಉತ್ಸವದಲ್ಲಿ, 2-6-1991 ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಭಾಗವಹಿಸಿ ಪೂಜೆ-ಪ್ರವಚನಗಳನ್ನು ನಡೆಸಿಕೊಟ್ಟರು.
2. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಸವ ಸಮಿತಿಯವರು ಕಾವೇರಿ ಭವನದಲ್ಲಿ 4-6-1991 ರಂದು ಬಸವ ಜಯಂತಿಯನ್ನು ಏರ್ಪಡಿಸಿದ್ದು, ಪೂಜ್ಯ ಮಾತಾಜಿಯವರು ಉದ್ಘಾಟಕರಾಗಿ ಆಗಮಿಸಿ, ಪ್ರಪ್ರಥಮ ಬಸವ ಜಯಂತಿಯನ್ನು ಉದ್ಘಾಟಿಸಿ ಭಾಷಣ ಮಾಡಿದರು.
3. ರಾಜಾಜಿನಗರ ಬಸವ ಸಮಿತಿಯವರು ಏರ್ಪಡಿಸಿದ್ದ ಬಸವ ಜಯಂತಿ ಸಮಾರಂಭದಲ್ಲಿ ದಿ. 8-6-1991 ರಂದು ಪೂಜ್ಯ ಮಾತಾಜಿಯವರು ಭಾಗವಹಿಸಿ ಉಪನ್ಯಾಸ ಮಾಡಿದರು.
4. ಹಾಸನದಲ್ಲಿ ಕಾರ್ಯಕ್ರಮ

   ಹಾಸನದ ಶ್ರೀ ವೀರಶೈವ ಸಂಘದವರು ದಿ. 20-6-91 ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಿದ್ದು, ಪೂಜ್ಯ ಮಾತಾಜಿಯವರು ಆಗಮಿಸಿ ಸಾಮೂಹಿಕ ವಿವಾಹದ ಸನ್ನಿಧಿ ವಹಿಸಿ ನವದಂಪತಿಗಳಿಗೆ ಆಶೀರ್ವಚನ ದಯಪಾಲಿಸಿದರು. ಬಸವೇಶ್ವರ ಮಂತ್ರಪಠಣ ನೆರವೇರಿಸಿ, ದಂಪತಿಗಳಿಂದ ಪ್ರತಿಜ್ಞೆ ಮಾಡಿಸಿದರು. ನಂತರ ಉಪನ್ಯಾಸ ಮಾಡಿ ದಂಪತಿಗಳ ಕರ್ತವ್ಯ ಕುರಿತು ಉಪದೇಶಿಸಿದರು. ಪ್ರತಿಜ್ಞಾವಿಧಿಯ ಪತ್ರಗಳನ್ನು ಮತ್ತು ವಚನ ಸೌರಭ ಪುಸ್ತಕಗಳನ್ನು ಉಚಿತವಾಗಿ ದಂಪತಿಗಳಿಗೆ ಕೊಡಲಾಯಿತು. ಇಂತಹ ಸಮಾಜ ಸೇವಾಕಾರ್ಯ ಮಾಡಿದುದಕ್ಕೆ ಶ್ರೀ ವೀರಶೈವ ಸಂಘದವರನ್ನು ಅಭಿನಂದಿಸಿದರು.

ಸಂಜೆ ಸಾರ್ವಜನಿಕ ಸಮಾರಂಭವಿದ್ದು, ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಸ್ವಾಮಿಗಳು, ಸಿದ್ಧಗಂಗಾಮಠ ಅವರ ಸನ್ನಿಧಿಯಲ್ಲಿ, ಪೂಜ್ಯ ಮಾತಾಜಿಯವರು ಪ್ರವಚನ ಮಾಡಿದರು. ಶ್ರೀ ನಿ. ಪ್ರ. ಶಿವಲಿಂಗಸ್ವಾಮಿಗಳು ತಣ್ಣೀರಹಳ್ಳಿ ಮಠ ಮತ್ತು ಇನ್ನಿತರ ಅನೇಕ ಸ್ವಾಮಿಗಳು ಸಭೆಯಲ್ಲಿ ಅತಿಥಿಗಳಾಗಿ ಆಗಮಿಸಿದ್ದರು.

ಚಿತ್ರದುರ್ಗದಲ್ಲಿ ಕಾರ್ಯಕ್ರಮ : ಚಿತ್ರದುರ್ಗ ನಗರದ ದೊಡ್ಡಪೇಟೆಯಲ್ಲಿ ರಾಷ್ಟ್ರೀಯ ಬಸವದಳದಿಂದ ಬಸವ ಮಂಟಪವು ನಿರ್ಮಾಣವಾಗುತ್ತಿದ್ದು, ಪೂಜ್ಯ ಮಾತಾಜಿಯವರ ಕಾರ್ಯಕ್ರಮವು ದಿ. 21-6-1991 ರಂದು ಬಸವ ಮಂಟಪದಲ್ಲಿ ಏರ್ಪಾಡಾಗಿದ್ದಿತು. ಶರಣ. ಎಸ್. ಲಿಂಗಣ್ಣನವರು ಸಭಾನಿರ್ವಹಣೆ ಮಾಡಿದರು. ಅಧ್ಯಕ್ಷರಾದ ಬಿ. ವಿ. ಸತ್ಯನಾರಾಯಣ ಶೆಟ್ಟರು ಮಾಲಾರ್ಪಣೆ ಮಾಡಿದರು. ಚನ್ನಯ್ಯನವರು ಕೂಡಲ ಸಂಗಮದಲ್ಲಿ ನಿರ್ಮಾಣವಾಗುವ ಅತಿಥಿಗೃಹಕ್ಕೆ ತಮ್ಮ ವೈಯಕ್ತಿಕ ಕಾಣಿಕೆ ಮೂವತ್ತು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಹೇಳಿ, ಮೊದಲ ಕಂತು 5 ಸಾವಿರ ರೂಗಳನ್ನು ಸಮರ್ಪಿಸಿದರು. ಇನ್ನೊಂದು ವಿಶೇಷವೆಂದರೆ, ಬಡಗಿ ಶರಣ. ಹನುಮಂತಪ್ಪನವರು ಸಾಗವಾನಿ ಕಟ್ಟಿಗೆಯ ಸುಂದರ ಪೀಠ ಮತ್ತು ಪಾದಪೀಠಗಳನ್ನು ಗುರುಕಾಣಿಕೆಯಾಗಿ ಕೊಡಲು ಸಂಕಲ್ಪಿಸಿ, ಸಿದ್ಧಪಡಿಸಿದ್ದು ತಮ್ಮ ಮನೆಗೆ ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡು ಪಾದಪೂಜೆ ಮಾಡಿ, ಕಾಣಿಕೆಯೊಡನೆ ವಸ್ತು ಸಮರ್ಪಿಸಿದರು. ಚಿತ್ರದುರ್ಗದ (ಪೂಜ್ಯ ಮಾತಾಜಿಯವರ ಹುಟ್ಟೂರು) ನೆನಪು ಬಸವ ಧರ್ಮ ಪೀಠದಲ್ಲಿ, ಸದಾ ಇರುವಂತೆ ಕಾಣಿಕೆ ಸಲ್ಲಿಸಿದ ಬಡಗಿ ಹನುಮಂತಪ್ಪನನ್ನು ಎಲ್ಲರೂ ಕೊಂಡಾಡಿ, ಸನ್ಮಾನಿಸಿದರು. ರಾಷ್ಟ್ರೀಯ ಬಸವ ದಳದವರು ನಿಷ್ಠಾವಂತ ಪ್ರಯತ್ನಮಾಡಿ ಬಸವ ಮಂಟಪ ನಿರ್ಮಾಣ ಮಾಡುತ್ತಿರುವುದನ್ನು ಪೂಜ್ಯ ಮಾತಾಜಿಯವರು ಮುಕ್ತಕಂಠದಿಂದ ಶ್ಲಾಘಿಸಿದರು.

ವರದಿ: ಶರಣ ನಿಜಗುಣಾನಂದರು

ಶರಣ ಬಂಧುಗಳೇ ಗಮನಿಸಿರಿ.

ಅಪೂರ್ವ ಮತ್ತು ಯಶಸ್ವಿ ಯೋಜನೆ

ಬಸವ ಜಯಂತಿಗೂ ಪೂರ್ವದಲ್ಲಿ ಚಿತ್ರದುರ್ಗದ ಶರಣ ಲಿಂಗಣ್ಣನವರು ಬಂದರು. ವಚನಗಳ ಪುಟ್ಟ ಪುಟ್ಟ ಪುಸ್ತಕಗಳನ್ನು ಮಾಡಿ ತುಂಬಾ ಕಡಿಮೆ ಬೆಲೆಯಲ್ಲಿ ಒದಗಿಸುವ ಕೆಲಸ ಮಾಡಿದರೆ ಬಹಳ ಚೆನ್ನಾಗಿರುತ್ತದೆ ಎಂದರು. ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆಗೆ ಮಾರಬೇಕಾದರೆ ದಾನಿಗಳ ನೆರವು ಬೇಕು ಎಂದೆ. ಸರಿ, "ಒಂದುಸಾವಿರ ರೂಪಾಯಿ ಚಿತ್ರದುರ್ಗದ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷ ಶರಣ. ಬಿ. ಮಲ್ಲಣ್ಣ ಅವರಿಂದ ಕೊಡಿಸುವೆ ಒಂದು ಪ್ರಯೋಗ ಮಾಡಿರಿ" ಎಂದರು. 16 ಪುಟ 4 ಪುಟದ ಹೊದ್ದಿಕೆ, ಹೀಗೆ 20 ಪುಟದ 1/16 ಡೆಮ್ಮಿ ಅಳತೆಯ ವಚನ ಸೌರಭ ಸಿದ್ಧವಾಯಿತು. ಅದರ ಉತ್ಪಾದನಾ ವೆಚ್ಚ 1 ರೂ. ಮಾರುವ ಬೆಲೆ 50 ಪೈ, 36 ವಚನಗಳೊಡನೆ ಬೇರೆ ಮಾಹಿತಿಯನ್ನೂ ಕೊಡುತ್ತದೆ.

ಚಳ್ಳಕೆರೆಯ ರಾಷ್ಟ್ರೀಯ ಬಸವ ದಳದವರು 500 ಪ್ರತಿ ಖರೀದಿಸಿ, ಬಸವ ಜಯಂತಿಯಂದು ಹಂಚಿದರು. ಅನೇಕ ಶರಣರು ಇದೀಗ 10, 20 ಪ್ರತಿ ಖರೀದಿಸಿ ತಮ್ಮ ಮನೆಯಲ್ಲಿರಿಸಿಕೊಂಡು. ಯಾರೇ ಅತಿಥಿಗಳು, ಮಿತ್ರರು, ಬಂಧುಗಳು ಬಂದಾಗ ನೆನಪಿನ ಕಾಣಿಕೆಯಾಗಿ ಕೊಡುವರು.

ಪ್ರಯೋಗಾರ್ಥ ಮಾಡಿದ ಒಂದು ಸಾವಿರ ಪ್ರತಿ, 15 ದಿವಸಗಳಲ್ಲಿ ಖರ್ಚಾಗಿವೆ, ದಾನಿಗಳ ಹಣವೂ ಸಾರ್ಥಕವಾಯಿತು. ಆದ್ದರಿಂದ ಯಾರಾದರೂ ದಾನಿಗಳು 1000 ರೂ ಕಳಿಸಿ, ತಮ್ಮ ಹೆಸರು-ವಿಳಾಸ ತಿಳಿಸಿದರೆ ತಕ್ಷಣ ಪ್ರತಿಗಳನ್ನು ಮುದ್ರಿಸಿ, ದಾನಿಗಳಿಗೂ ಕಳಿಸಿ, ಜನರಿಗೂ ತಲ್ಪಿಸಲಾಗುವುದು.

ಗಣಾರಾಧನೆ, ಸಾಮೂಹಿಕ ವಿವಾಹ ಮುಂತಾದ ಸಮುದಾಯ ಕಾರ್ಯಕ್ರಮಗಳಲ್ಲಿ ಬಸವ ಧರ್ಮ ಪೀಠದಿಂದ ಉಚಿತವಾಗಿ ಹಂಚಲಾಗುವುದು. ದಿ. 16-6-1991 ರಂದು ಶ್ರೀ ಎಸ್. ಸಿ. ತಿಪ್ಪೇಸ್ವಾಮಿಯವರ ಗಣಾರಾಧನೆಯ ಸಂದರ್ಭದಲ್ಲಿ, ದಿ. 20-6-1991 ರಂದು ಹಾಸನದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಉಚಿತವಾಗಿ ಹಂಚಲಾಯಿತು. ಈ ಜ್ಞಾನ-ದಾಸೋಹದಲ್ಲಿ ಭಾಗಿಗಳಾಗಲು ದಾನಿಗಳು ಮುಂದೆ ಬರಬೇಕಾಗಿ ಸೂಚಿಸುವೆವು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಬಸವ ಧರ್ಮ ಪೀಠ, ಕೂಡಲ ಸಂಗಮ-587115
ತಾ- ಹುನಗುಂದ, ಜಿ- ಬಿಜಾಪುರ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪಾದ ಕಮಲಗಳಿಗೆ ಸಾಷ್ಟಾಂಗ ಪ್ರಣಾಮಗಳು.

ದಿ. 2-6-1991 ರಂದು ನಮ್ಮ ಹತ್ತಿರದ ಬಂಧುಗಳ ಎರಡು ಮದುವೆಗಳನ್ನು, "ಜೀವ ಜೀವದ ಭಾವಸಂಗಮ" ಪುಸ್ತಕ ಇರಿಸಿಕೊಂಡು, ಶರಣ ಸಂಪ್ರದಾಯದ ಪ್ರಕಾರ ನೆರವೇರಿಸಿದೆವು. ಈ ವಿವಾಹದ ಕ್ರಮವನ್ನು ಜನರು ತುಂಬಾ ಮೆಚ್ಚಿಕೊಂಡರು. ಬಹಳ ಅರ್ಥಗರ್ಭಿತವಾಗಿ, ಶಾಂತವಾಗಿ, ಪ್ರೌಢವಾಗಿ ನಡೆಯಲು ಇದು ಸಹಾಯಕವಾಗುತ್ತದೆ ಎಂದು ನೆರೆದವರು ಉತ್ಸು-ಕತೆ ವ್ಯಕ್ತಪಡಿಸಿದರು.

ಆದ್ದರಿಂದ ನಾವು ಅಂದರೆ ರಾಷ್ಟ್ರೀಯ ಬಸವ ದಳದವರು ಈ ಕ್ರಮವನ್ನು ಚೆನ್ನಾಗಿ ಅಳವಡಿಸಿಕೊಂಡು ಮಾಡಿಸುವ ಬಗ್ಗೆ ಹೆಚ್ಚಿನ ಗಮನಕೊಡಬೇಕು. ಮತ್ತು ವಿವಾಹವನ್ನು ಮಾಡಿಸುವ ಮಾತಾಪಿತೃಗಳನ್ನು ಕಂಡು ಅವರಿಗೆ ಇದರ ಉಪಯುಕ್ತತೆಯನ್ನು ಮನಗಾಣಿಸಿಕೊಡಬೇಕು. ಈ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು. ಬಸವ ಧರ್ಮ ಸಂಸತ್ ಸದಸ್ಯರು, ರಾಷ್ಟ್ರೀಯ ಬಸವ ದಳದ ಸದಸ್ಯರು, ಕಲ್ಯಾಣ ಕಿರಣದ ಓದುಗರು ಇದೇ ರೀತಿಯಲ್ಲಿ ಮಾಡುತ್ತೇವೆ ಎಂದು ಸಂಕಲ್ಪ ತೊಡಬೇಕೆಂದು ನನ್ನ ಹೃತ್ಪೂರ್ವಕ ಬಿನ್ನಹ.

ಶರಣ. ಬಾಣೂರು ಚನ್ನಪ್ಪ
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು
ಚಿಕ್ಕಮಗಳೂರು

ಒಂದು ಮಹತ್ವದ ಸೂಚನೆ.

ಬಸವ ಧರ್ಮ ಪೀಠಕ್ಕೆ ಎಂ. ಟಿ, ಡಿ. ಡಿ ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಕಳಿಸಬೇಕೆನ್ನುವ ದಾನಿಗಳು ಒಂದು ವಿಷಯ ಗಮನಿಸಬೇಕು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೂಡಲ ಸಂಗಮದಲ್ಲಿದೆ ಎಂದು ನಾವು ಪ್ರಕಟಿಸುವುದರಿಂದ ದಾನಿಗಳು ತಮ್ಮಲ್ಲಿ ವಿಚಾರಿಸಿದಾಗ ಆ ಶಾಖೆಯವರು ಸರಳವಾಗಿ 'ಇಲ್ಲ' ಎಂದು ಬಿಡುತ್ತಾರೆ. ಕಾರಣವೆಂದರೆ ಅವರ ಬ್ಯಾಂಕುಗಳ ಯಾದಿಯಲ್ಲಿ **Kudala Sangama** ನೋಡುತ್ತಾರೆ. ಅವರ ದಾಖಲೆಯಲ್ಲಿ **Koodala Sangama** ಎಂದು ಇದೆ. ಆದ್ದರಿಂದ ಎಷ್ಟೋ ದಾನಿಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ, ಹುನಗುಂದ ಶಾಖೆಗೆ ಡಿ.ಡಿ. ಕಳಿಸಿದ್ದಾರೆ. ಇದರಿಂದ ದಾನಿಗಳ ಮತ್ತು ನಮ್ಮ ಎರಡೂ ಕಡೆ ಬ್ಯಾಂಕ್ ಶುಲ್ಕ ಕಟ್ಟಬೇಕಾಗುತ್ತದೆ, ಆದ್ದರಿಂದ **KOO** ದಲ್ಲಿ ನೋಡಲು ಹೇಳಬೇಕು.

ವಿಶ್ವಧರ್ಮ ಪ್ರವಚನ

ಭಾಗ–೨, ಕಂತು-೫

ಅಧ್ಯಾಯ–೨೦ ಕಾಯಕ-ದಾಸೋಹ

—ಮಾತಾಜಿ

(ನವಂಬರ್ 1990 ರ ಸಂಚಿಕೆಯಿಂದ ಮುಂದುವರಿದುದು)

ಕಾಯಕ ತತ್ತ್ವವು ಉತ್ಪಾದನೆಯ ಸೂತ್ರವನ್ನು ಕಲಿಸಿದರೆ, ದಾಸೋಹವು ಗಳಿಕೆಯನ್ನು ಬಳಸುವ ವಿಧಾನವನ್ನು ಕಲಿಸುತ್ತದೆ. ಶರಣ ಧರ್ಮವು ಉತ್ಕಟ ಧರ್ಮ ಪಂತಿಕೆಯನ್ನು ಕಲಿಸಿದರೂ, ವ್ಯಾವಹಾರಿಕ ಜಾಣತನ ಬಿಡಲು ಹೇಳದು. ಒಬ್ಬ ವ್ಯಕ್ತಿ ಸಾಲ ಮಾಡಿಕೊಂಡು ವೈಭವದ ಮದುವೆ, ಗಣಾರಾಧನೆ, ಮುಂತಾದ್ದು ಮಾಡುವುದು ಹೇಗೆ ತಪ್ಪೋ, ಹಾಗೆ ತಾನು ನೀಗಿಸಲಾರದ ದಾನ–ದಾಸೋಹಗಳನ್ನು ಹಮ್ಮಿಕೊಳ್ಳುವುದೂ ಅಷ್ಟೇ ತಪ್ಪು.

1. ಇಲ್ಲದುದಕ್ಕೆ ಕಡನ ಮಾಡದಿಪ್ಪುದೇ ನೇಮ.
2. ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ.

ಕೈಲಾಗದಿದ್ದರೂ, ಡಂಭಾಚಾರ ಮಾಡಲು ಹೋಗಬಾರದು. ತನಗೆ ದಾನ-ಧರ್ಮ ಮಾಡುವಷ್ಟು ಸಂಪತ್ತು ತುಂಬಿ ತುಳುಕುತ್ತಿದ್ದರೂ, ಆದಾಯವು ಇದ್ದರೂ ಇಲ್ಲದಂತೆ ನಾಟಕವಾಡುವವನೂ ವಂಚಕನಾದಂತೆ, ತನಗೆ ಆ ಶಕ್ತಿ-ಸಾಮರ್ಥ್ಯ ಇಲ್ಲದಿದ್ದರೂ ಯಾರದೋ ದಾಕ್ಷಿಣ್ಯ, ಒತ್ತಾಯಕ್ಕೆ ಒಳಗಾಗಿ ಶಕ್ತಿ ಮೀರಿ ಮಾಡಲು ಹೋಗುವವನೂ ವಂಚಕನೇ! ಮೊದಲಿನವ ಸಮಾಜ ವಂಚಕ, ಎರಡನೆಯವನು ಆತ್ಮ ವಂಚಕ!

ನಿಜದಾಸೋಹಿ ಹೇಗಿರುವನು ?

"ಬಾಳತ್ವಕ್ಕೆಂದು ಮಧುವ ತಂದು, ಕೊಡನ ತುಂಬಿದ ಜೇನುಹುಳುವಿನಂತೆ
ತಾನುಂಬುದು, ತನ್ನೆಂಜಲ ಜಗವುಂಬುದು ನೋಡಯ್ಯಾ.
ಶಿವಭಕ್ತನಾಗಿ ಶಿವಾನ್ನವನೇ ಕೊಂಡು,
ಒಕ್ಕುಮಿಕ್ಕ ವಸ್ತುವ ಜಂಗಮಕ್ಕೆ ಇಕ್ಕುವಾತನೆ ಭಕ್ತ,
ಕೊಂಡಾತನೆ ಜಂಗಮ (ಬ. ಷ. ಹೆ. ವ. 1073)

ಇದು ಕಾಯಕ-ದಾಸೋಹ ಸೂತ್ರ ಕಲಿಸುವ ಅದ್ಭುತ ವಚನ.

"ಶರಣನು ಸತ್ಯ ಶುದ್ಧ ಕಾಯಕವ ಮಾಡಿ, ಸಂಪತ್ತುಗಳಿಸಿ, ಶಿವಾನ್ನವನ್ನೇ ಕೊಳ್ಳುವನು. ತನ್ನ ಜೀವನವಾವಶ್ಯಕತೆಗಳನ್ನೂ ತಣಿಸಿಕೊಂಡು, ಹೆಚ್ಚುವರಿಯಾಗಿ ಉಳಿದುದನ್ನು ಜಂಗಮಕ್ಕೆ ಇಡುವನು. ಜಂಗಮ ಎಂದರೆ ಮಹಾತ್ಮರು, ಹಸಿದವರು,

ಸಮಾಜ-ಹೀಗೆಲ್ಲ ಅರ್ಥಮಾಡಬಹುದು. ಇವನ ಜೀವನ ಹೇಗೆಂದರೆ ಜೇನು ಹುಳುವಿನಂತೆ. ಜೇನುಹುಳು ಮಕರಂದವನ್ನು ಸಂಗ್ರಹಿಸಿ, ಜೇನುತುಪ್ಪವನ್ನಾಗಿ ಮಾಡುವುದು ತಾನೂ ಆ ಜೇನಿನ ಸವಿ ಸವಿದು, ಜಗತ್ತಿಗೂ ಬಿಡುವುದು. ತನಗಿಲ್ಲದಂತೇನೂ ಅದು ಮಾಡಿಕೊಳ್ಳದು.

ಹಾಗೆ ಶರಣನು ಜಿಪುಣನೂ ಆಗದೆ, ಅತಿ ಉದಾರಿಯೂ- ಅವ್ಯವಹಾರಿಕನೂ ಆಗದೆ ವಿವೇಕದಿಂದ ವರ್ತಿಸಬೇಕು.

ಜಂಗಮನ ಕರ್ತವ್ಯ

ದಾಸೋಹ ಮಾಡಿಸಿಕೊಳ್ಳುವ ಜಂಗಮನೂ ಅಷ್ಟೆ. ಕ್ರೂರಿಯೂ ಸ್ವಾರ್ಥಿಯೂ ಆಗಬಾರದು.

ಓಡಲಾಗದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ
ಮಾಡಲಾಗದು ಭಕ್ತ, ಕೊಳಲಾಗದು ಜಂಗಮ
ಹಿರಿಯರು ನರಮಾಂಸವ ಭುಂಜಿಸುವರೆ ?
ತನುವುಕ್ಕಿ, ಮನವುಕ್ಕಿ ಮಾಡಬೇಕು ಭಕ್ತಿಯ
ಮಾಡಿಸಿಕೊಳ್ಳಬೇಕು ಜಂಗಮ, ಕೂಡಲ ಸಂಗಮ ದೇವಾ.
(ಬ. ಷ. ವ. 230)

ಓಡಲಾರದೆ ದಣಿದ ಜಿಂಕೆಯು ಸೋತು, ನೆಲಕ್ಕೊರಗಿ ಬೇಟೆ ನಾಯಿಯ ಬಾಯಿಗೆ ಸಿಕ್ಕು, ಮಾಂಸದ ಮುದ್ದೆಯಾಗುವಂತೆ, ಭಕ್ತನು ಅತ್ಯುತ್ಸಾಹದಿಂದ ಅತಿ ಭಕ್ತಿಯನ್ನು ಮಾಡಲು ಹೋಗಬಾರದು. ಅದೇ ರೀತಿ(ಮುಗ್ಧ)ಭಕ್ತನು ಶ್ರದ್ಧೆಯಿಂದ ಸೇವೆ ಮಾಡುವುದನ್ನು ಜಂಗಮ ದುರುಪಯೋಗ ಮಾಡಿಕೊಳ್ಳಬಾರದು. ಹಿಂಸಿಸಿ ತೆಗೆದುಕೊಂಡದ್ದು ನರಮಾಂಸದಂತೆ. ಕೆಲವು ಜಾತೀಯ ಸಂಘಟನೆಗಳು, ಅವುಗಳಿಗೆ ಗುರುಗಳು ಇರುವರು. ಕಾರ್ಯಕ್ರಮಗಳನ್ನು ಮಾಡುವಾಗ, ಕಟ್ಟಡ ಕಟ್ಟಿಸುವಾಗ ಇಂತಿಷ್ಟನ್ನು ಭಕ್ತನು ಕೊಡಬೇಕೆಂಬ ಕಟ್ಟಪ್ಪಣೆ ವಿಧಿಸಿದರೆ, ಅದನ್ನು ಪೂರೈಸಲಾರದೆ ಸೋತು ಭಕ್ತರು ಹಣ್ಣಾಗುವರು. ಎದುರಾಡಲು ಧೈರ್ಯವಿಲ್ಲ. ಎದುರಾಡಿದರೆ ಬಹಿಷ್ಕಾರದ ಹೆದರಿಕೆ ಬೇರೆ. ಈ ರೀತಿ ವಸೂಲು ಮಾಡುವುದು ನರಮಾಂಸವನ್ನು ತಿಂದಂತೆ ಎಂದು ಬಸವಣ್ಣನವರು ಎಚ್ಚರಿಕೆ ನೀಡುವರು. ಕೆಲವು ವಿದ್ಯಾಸಂಸ್ಥೆಗಳು ಇರುವವು. ಅವುಗಳಲ್ಲಿ ಕೆಲಸ ಮಾಡುವ ಸೇವಕನಿಂದ ಹಿಡಿದು ಪ್ರಾಂಶುಪಾಲರ ವರೆಗೆ ಕಡ್ಡಾಯ ವಂತಿಗೆ ಜಯಂತಿ, ವರ್ಧಂತಿ, ಉತ್ಸವ, ಗಣಾರಾಧನೆ ಎಂದು ಎತ್ತುವುದು ನಡೆದೇ ಇರುತ್ತದೆ. ದೊಡ್ಡ ಉದ್ಯೋಗಿಗಳು ತಡೆದುಕೊಳ್ಳಬಲ್ಲರಾದರೂ ಚಿಕ್ಕ ಕೆಲಸಗಾರರು ಶಪಿಸುವುದನ್ನು ಕಾಣುತ್ತೇವೆ. ತನುವುಕ್ಕಿ, ಮನವುಕ್ಕಿ ಭಕ್ತನು ಕೊಟ್ಟುದನ್ನು ಜಂಗಮ ಪಡೆಯಬೇಕೇ ವಿನಾ, ಕೈಕೆಳಗಿನವರನ್ನು ಹಿಂಸಿಸಿ ಅಲ್ಲ.

"ವ್ಯಕ್ತಿಯು ಗಳಿಸಿದ್ದೆಲ್ಲವೂ ಶಿವನ ಕೊಡುಗೆ, ಅದು ಸಮಾಜದ ಆಸ್ತಿ" ಎಂಬುದೇ ಬಸವಣ್ಣನವರ ಅರ್ಥನೀತಿಯ ಸಾರ ಎಂದು ಹೇಳಬಹುದು. ಅವನು ಒಲಿದು ಕೊಡದೆ ಯಾವುದೂ ಲಭ್ಯವಾಗದು. ಹಾಗೆ ಬಂದುದನ್ನು ತಾನು ಬಳಸಿಕೊಂಡು, ಜೇನು ಹುಳುವಿನಂತೆ ಜಗತ್ತಿಗೂ ವಿನಿಯೋಗಿಸಬೇಕು.

ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು,
ಕಳ್ಳನಾಣ್ಯವ ಸಲ್ಲಲೀಯರಯ್ಯಾ.
ಭಕ್ತಿ ಎಂಬ ಭಂಡಕ್ಕೆ ಜಂಗಮವೇ ಸುಂಕಿಗ
ಕೂಡಲ ಸಂಗಮದೇವಾ. (ಬ.ಷ.ವ. 198)

ಅನೇಕ ರೀತಿಯ ಪದಾರ್ಥಗಳನ್ನು ಹೊರಗೆ ಒಯ್ಯುವಾಗ, ಒಳಗೆ ತರುವಾಗ ಸುಂಕವನ್ನು ಕೊಡಲೇಬೇಕಷ್ಟೆ? ಸುಂಕ ಕೊಡದೆ ಹೋದರೆ ಅದು ಅಪರಾಧ. ಹಾಗೆಯೇ ಭಕ್ತನಾದವನು ಪರಮಾತ್ಮನಲ್ಲಿ ಪ್ರವೇಶಿಸಬೇಕಾದರೆ ಇಲ್ಲಿ ಜಂಗಮನಿಗೆ ಸುಂಕ (ಟ್ಯಾಕ್ಸ್) ಕೊಡಲೇಬೇಕು ದಾಸೋಹ ಎಂಬ ಸುಂಕ ಕೊಡುವುದನ್ನು ತಪ್ಪಿಸಿಕೊಂಡರೆ, ಆಗ ಭಕ್ತನ ಸಂಪತ್ತು ಕಳ್ಳನಾಣ್ಯದಂತೆ ಆಗಿಬಿಡುತ್ತದೆ.

ಇನ್ನೊಂದು ವಚನವೂ (1081) ಇದನ್ನೇ ಒತ್ತಿ ಹೇಳುತ್ತದೆ:

ಭಂಡವ ತುಂಬಿದ ಬಳಿಕ
ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು
ಲಿಂಗಸಂಬಂಧಿಯಾದಡೆ ಜಂಗಮ ಪ್ರೇಮಿ ನೀನಾಗು
ಅಲ್ಲದಿದ್ದಡೆ ಪರುಷ ದೊರಕೊಳ್ಳದಯ್ಯ
ಜಂಗಮದಲ್ಲಿ ನಿರುತ ಭರಿತ, ಕೂಡಲ ಸಂಗಮದೇವ.

ದೇವರ ಕುರುಹಾದ ಇಷ್ಟಲಿಂಗವನ್ನು ಧರಿಸಿ, ದೇವಭಕ್ತನಾದ ಮೇಲೆ ದೇವನ ಪ್ರತಿನಿಧಿಯಾದ ಜಂಗಮವನ್ನು ಪ್ರೀತಿಸಬೇಕು. ದೇವರಿಗೆ ಉಣ್ಣಿಸಲು ತಿನ್ನಿಸಲು ಬರುವುದೆ? ಲಿಂಗಪೂಜೆಯು ವೈಯುಕ್ತಿಕ ಆತ್ಮೋದ್ಧಾರಕ್ಕೆ, ಜಂಗಮ ಸೇವೆಯಿಂದ ಸಮಷ್ಟಿಯ ಉದ್ಧಾರ. ಹೀಗೆ ಬಸವಣ್ಣನವರು ಕಡ್ಡಾಯವಾದ ದಾಸೋಹವನ್ನು ಬೋಧಿಸಿದ್ದಾರೆ.

ವಿ. ಸೂ : ಮುಂದಿನ ಸಂಚಿಕೆಯಲ್ಲಿ ಹೆಚ್ಚು ವಿಷಯ ಕೊಡಲಾಗುವುದು.

(ಮುಂದುವರಿಯುವುದು)

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgodu, Bangalore-560 074.

ಬಸವ ಪಂಚಮಿ ಆಚರಣೆ, ದಿ. 14-8-1991 ರಂದು

ಶರಣ ಬಂಧುಗಳೇ,

ಪೂಜ್ಯ ವಿಶ್ವಗುರು ಬಸವಣ್ಣನವರು ಮರ್ತ್ಯಲೋಕವನ್ನು ಅಗಲಿದುದು ಶ್ರಾವಣ ಶುದ್ಧ ಪಂಚಮಿಯಂದು. ಅಂದಿನಿಂದಲೂ ಬಸವ ಪಂಚಮಿ ಎಂದು ಹೆಸರು ಪಡೆದಿದೆ. ಉರಿಯುಂಡ ಕರ್ಪೂರದಂತೆ, ಸಮುದ್ರವ ಬೆರೆದ ನದಿಯಂತೆ ಅಪ್ಪ ಬಸವಣ್ಣನವರು ಲಿಂಗೈಕ್ಯರಾದ ಆ ದಿನದಂದು ಧಾರ್ಮಿಕ ವ್ರತ-ಪೂಜೆಗಳನ್ನು ಮಾಡುವುದು ಅತ್ಯಗತ್ಯ. ಈ ವರ್ಷ ಅಗಸ್ಟ 14 ಕ್ಕೆ ಬಸವ ಪಂಚಮಿ ಒದಗಿ ಬಂದಿದೆ.

1. ಅಮಾವಾಸ್ಯೆಯ ಮರುದಿವಸ ಶ್ರಾವಣ ಪಾಡ್ಯದಂದು, ಶ್ರೀ ಗುರು ಬಸವಣ್ಣನವರ ಭಾವಚಿತ್ರವನ್ನು ಪ್ರತಿಷ್ಠಾಪಿಸಿ, ಬಸವೇಶ್ವರ ಪೂಜಾ ವ್ರತ ಆರಂಭಿಸಿರಿ. ಬಸವ ಪಂಚಮಿಗೆ ಐದು ಪೂಜೆ ಆಗುತ್ತವೆ. ಪೂಜೆಗೆ ನಿಮ್ಮ ಸುತ್ತಮುತ್ತಲಿನವರನ್ನು ಆಹ್ವಾನಿಸಿ, ಪೂಜೆ-ಮಂಗಲ ಆದೊಡನೆ ಪ್ರಸಾದ ವಿತರಣೆ ಮಾಡಿರಿ. ಪ್ರತಿಯೊಬ್ಬ ಬಸವ ತತ್ತ್ವಾನುಯಾಯಿಯ ಮನೆಯಲ್ಲೂ ಈ ಪೂಜೆಯು ನಡೆಯಬೇಕು.
2. ಸಾಮೂಹಿಕ ರಾಷ್ಟ್ರೀಯ ಬಸವ ದಳಗಳವರು ಈ ವ್ಯವಸ್ಥೆ ಮಾಡಬಹುದು. ಸಾಮೂಹಿಕ ಪ್ರಾರ್ಥನೆಗೆ ವಾರಕ್ಕೊಮ್ಮೆ ಸಮಾವೇಶವಾಗುವ ಸ್ಥಳದಲ್ಲಿ 5 ದಿವಸಗಳ ಕಾರ್ಯಕ್ರಮ ಇಟ್ಟು, ಒಂದೊಂದು ದಿವಸದ ಪೂಜಾವ್ರತದ ಖರ್ಚನ್ನು ದಾನಿಗಳು ವಹಿಸಿಕೊಳ್ಳುವಂತೆ, ಅಥವಾ ಒಂದು ಪೂಜೆಗೆ 101, ಅಥವಾ 51 ರೂದಂತೆ ನಿಗದಿ ಪಡಿಸಿ, ಎಷ್ಟೇ ಜನ ಪೂಜೆಯಲ್ಲಿ ಭಾಗಿಗಳಾಗಲೀ ಅವರಿಂದ ಪೂಜೆ ಮಾಡಿಸಿ, ಖರ್ಚಾಗಿ ಮಿಕ್ಕ ಹಣವನ್ನು ರಾಷ್ಟ್ರೀಯ ಬಸವ ದಳಕ್ಕೆ ಪಡೆಯಬಹುದು.
3. ರಾಷ್ಟ್ರೀಯ ಬಸವ ದಳದವರು ಬಸವ ಪಂಚಮಿಗೆ ಸಮುದಾಯ ಭೋಜನ ಇಡುವುದು ಒಳ್ಳೆಯದು. ಸಾಮಾನ್ಯವಾಗಿ ಬಸವ ಜಯಂತಿಯಂದು ಅವರವರ ಮನೆಯಲ್ಲಿ ವಿಶೇಷ ಅಡುಗೆ ಮಾಡುವುದರಿಂದ, ಶರಣ ಬಂಧುಗಳೆಲ್ಲರೂ ಒಟ್ಟಾಗಿ ಕುಳಿತು ಪ್ರಸಾದ ಸ್ವೀಕರಿಸುವುದನ್ನು ಬಸವ ಪಂಚಮಿಗೆ ಇಡಬೇಕು. ಸದಸ್ಯರುಗಳೆಲ್ಲ ವಿಶೇಷ ಚಂದಾ ಸಂಗ್ರಹಿಸಿ ಒಂದೇ ಕಡೆ ಅಡಿಗೆ ಮಾಡಿಸಿ, ಪ್ರಸಾದವನ್ನು ಮಾಡಬಹುದು. ಇಲ್ಲವೇ ವಿವಿಧ ಖಾದ್ಯಗಳ ಬಗ್ಗೆ ನಿರ್ಧರಿಸಿ, ಅವರವರ ಮನೆಗಳಲ್ಲೇ ಮಾಡಿಕೊಂಡು ತಂದು, ಎಲ್ಲವನ್ನು ಒಟ್ಟಾಗಿ ಸೇರಿಸಿ, ಪ್ರಸಾದ ಸ್ವೀಕರಿಸಬಹುದು. ಅನುಕೂಲತೆ ಪ್ರಕಾರ ಸ್ಥಳೀಯರು ನಿರ್ಧರಿಸಿಕೊಳ್ಳಬೇಕು.
4. ಬಸವ ಪಂಚಮಿಯಂದು ಸಂಜೆಗೆ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. 15-8-1991 ಕ್ಕೆ ನೀಲಮ್ಮ ಷಷ್ಠಿ, ಅಂದರೆ ನೀಲಾಂಬಿಕೆಯು ಲಿಂಗೈಕ್ಯಳಾದ ದಿವಸ.

ವಿಶೇಷ ಸೂಚನೆ : ಬಸವ ತತ್ತ್ವಾನುಯಾಯಿಗಳು ಹಾವಿಗೆ, ಹುತ್ತಕ್ಕೆ ಹಾಲೆರೆಯುವ ಮೌಢ್ಯತೆ ಬಿಟ್ಟು ಗುರುಪೂಜೆ ಮಾಡಬೇಕು. ಬಡ ಮಕ್ಕಳು, ಬಡ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಅವರಿಗೇ ಉಣಲಿಕ್ಕಿ ಸಂತೋಷಪಡಬೇಕು.

—ಪೂಜ್ಯ ಜಗದ್ಗುರು ಮಾತೆ ಮಹಾದೇವಿ

KRNB 312/BGW 92 June 1991

